
ಗೌರಿ
ರಂಜನೆ ಬೋಧನೆ ಪ್ರಚೋದನೆ
ಲಂಕೇಶ್
03 ಫೆಬ್ರವರಿ 2016 ಪುಟ 16 ರೂ. 15/-



ನಾಡಲ್ಲವ್ರೋ ಇದು ವಿಷದ ಸಮುದ್ರ

ಬೆಂಗಳೂರು
ಡಕಾಯಿತಿಗಿಳಿದ ಪೋಲೀಸ್ ಪೇದೆ

ಮಂಗಳೂರು
ಭಜರಂಗಿಗಳ ಭದ್ರತೆ ಬಿಸ್ನೆಸ್

ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಕೇಂದ್ರ ಸಮಿತಿ

ಸಹಬಾಳ್ವೆ ಸಾಗರ

ನೆನಪುಗಳು, ಸವಾಲುಗಳು, ಮುಂದಣ ಹೆಜ್ಜೆಗಳು.....

ವಿವಿಧ ಧರ್ಮ, ಜಾತಿ, ಸಿದ್ಧಾಂತ, ಸಂಸ್ಕೃತಿ, ಭಾಷೆಗಳು ಸಂಗಮಿಸುವ ರಾಷ್ಟ್ರೀಯ ಸಮಾವೇ

ದಿನಾಂಕ 30.01.2016

ಪುರಭವನ, ಟೌನ್‌ಹಾಲ್, ಮಂಗಳೂ

ಕುದ್ಮಲ್ ರಂಗರಾವ್ ವೇದಿಕೆ

ಬೆಳಗ್ಗೆ 9:00ಕ್ಕೆ

ಸೂಫಿ, ವಚನ, ಸೌಹಾರ್ದ ಸಂಗೀತ ಮತ್ತು ಕರಾವಳಿಯ ವಿವಿಧ ಜನಪರ ಕಲಾಪ್ರಕಾರಗಳ ಮೂಲಕ ಸಮಾವೇಶ ಆರಂಭ

'ಸಿರಿ' ವೇದಿಕೆ

ಉದ್ಘಾಟನಾ ಗೋಷ್ಠಿ: ಸಮಯ :10:15- 11:30

ಉದ್ಘಾಟಕರು : ನಾಡೋಜ ಬರಗೂರು ರಾಮಚಂದ್ರಪ್ಪ, ಸಾಹಿತಿಗಳು

ಅಧ್ಯಕ್ಷತೆ : ಸುರೇಶ್ ಭಟ್ ಬಾಕ್ರಬೈಲ್, ಕ.ಕೋ.ಸೌ.ವೇ.

ಪ್ರಾಸ್ತಾವಿಕ ಮಾತು: ರಾಬಿನ್ ಕ್ರಿಸ್ಟೋಫರ್ ಜೆ., ಕ.ಕೋ.ಸೌ.ವೇ.

ಸ್ವಾಗತ : ಯು.ಎಚ್.ಉಮರ್, ಪ್ರಧಾನ ಕಾರ್ಯದರ್ಶಿಗಳು, ಸ್ವಾಗತ ಸಮಿತಿ

ಸಮನ್ವಯ : ತ್ರಿಮೂರ್ತಿ, ಬೆಂಗಳೂರು ಮತ್ತು ಶಬ್ಬೀರ್, ಮಂಗಳೂರು

ನಾರಾಯಣ ಗುರು ವೇದಿಕೆ

ಜಾತ್ಯತೀತ ಸಮಾಜ-ಧಾರ್ಮಿಕ ಸಹಬಾಳ್ವೆ

ಸಮಯ :11:30- 1:30

ಸಾನ್ನಿಧ್ಯ : ಶ್ರೀ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು
ಸಾಣೆಹಳ್ಳಿ ಮಠ, ಹೊಸದುರ್ಗ

: ಅಲ್‌ಹಾಜ್ ತ್ವಾಕಾ ಅಹ್ಮದ್ ಮುಸ್ಲಿಯಾರ್
ಖಾಝಿ, ದ.ಕ.ಜಿಲ್ಲೆ

: ರೆ.ಫಾ.ಅಲೋಶಿಯಸ್ ಪೌಲ್ ಡಿಸೋಜ
ಬಿಷಪ್, ಧರ್ಮ ಪ್ರಾಂತ್ಯ ಮಂಗಳೂರು

: ಬೋಧಿ ದತ್ತ ಭಂತೇಜಿ, ಮೈಸೂರು

ಆಶಯ ನುಡಿ : ಚಂದ್ರಶೇಖರ ಪಾಟೀಲ್ (ಚಂಪಾ), ಖ್ಯಾತ ಸಾಹಿತಿಗಳು

ಅಧ್ಯಕ್ಷತೆ : ಬಿ.ಟಿ.ಲಲಿತಾ ನಾಯಕ್, ಮಾಜಿ ಸಚಿವರು

ಪ್ರಾಸ್ತಾವಿಕ ಮಾತು : ಕೆ.ಫಣಿರಾಜ್, ಕ.ಕೋ.ಸೌ.ವೇ.

ಸಮನ್ವಯ : ಕೆ.ಪಿ.ಶ್ರೀಪಾಲ್, ಶಿವಮೊಗ್ಗ
ಹುಸೈನ್ ಕೋಡಿಬೆಂಗ್ರೆ, ಉಡುಪಿ

ಸ್ವಾಗತ : ಸೆಬಾಸ್ಟಿಯನ್ ದೇವರಾಜ್, ಫೆಡಿನಾ, ಬೆಂಗಳೂರು

1:30 -:2:00: ಊಟದ ಬಿಡುವು

ರಾಣಿ ಅಬ್ಬಕ್ಕ ವೇದಿಕೆ

ಸಮಯ :2:45-4:45

ಸಹಬಾಳ್ವೆಯ ಸಮಾಜ ನಿರ್ಮಾಣದಲ್ಲಿ ರಾಜಕೀಯ ಪಕ್ಷಗಳ ಪಾತ್ರ - ಸರ್ಕಾರಕ್ಕೆ 3 ಪ್ರಶ್ನೆಗಳು ಹಾಗೂ ಸೌಹಾರ್ದ ಸಮಾಜ ಕಟ್ಟುವಲ್ಲಿ ಜನಪರ ಸಂಘಟನೆಗಳ ಮತ್ತು ಚಳವಳಿಗಳು ಮಾಡಿಕೊಳ್ಳಬೇಕಾದ 3 ಮುಖ್ಯ ಆತ್ಮಾವಲೋಕನಗಳು.

ಅಧ್ಯಕ್ಷತೆ : ಎ.ಕೆ.ಸುಬ್ಬಯ್ಯ, ಹಿರಿಯ ವಿಚಾರವಾದಿಗಳು

ಉದ್ಘಾಟನೆ : ದಿನೇಶ್ ಅಮೀನ್ ಮಟ್ಟು
ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು

ಮುಖ್ಯ ಅತಿಥಿಗಳು: ಸತೀಶ್ ಜಾರಕಿಹೊಳಿ
ಸಣ್ಣ ಕೈಗಾರಿಕಾ ಸಚಿವರು, ಕರ್ನಾಟಕ ಸರ್ಕಾರ

ಪ್ರತಿ ಸ್ಪಂದನೆ : ಯು.ಟಿ.ಖಾದರ್
ಆರೋಗ್ಯ ಸಚಿವರು, ಕರ್ನಾಟಕ ಸರ್ಕಾರ

ಸ್ವಾಗತ : ಅಮ್ಮದ್ ಪಾಷ, ಅಧ್ಯಕ್ಷರು, ಕಕೋಸೌವೇ, ಬೆಂಗಳೂರು ಮತ್ತು ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾ.

ಸಮನ್ವಯ : ಶಶಿಧರ ಹೆಮ್ಮಾಡಿ, ಸಹಮತ, ಕುಂದಾಪುರ ಮತ್ತು ಸಂಜಯ
ಕರ್ನಾಟಕ ವಿದ್ಯಾರ್ಥಿ ಸಂಘಟನೆ.

ಬಪ್ಪ ಬ್ಯಾರಿ ವೇದಿಕೆ

ಸಮಾರೋಪ ಸಮಾರಂಭ ಸಮಯ: 5:20 - 6:4

ಸಮಾರೋಪ ಭಾಷಣ : ಯೋಗೇಂದ್ರ ಯಾದವ್
ಸ್ವರಾಜ್ ಅಭಿಯಾನ್, ನವದೆಹಲಿ

ಮುಖ್ಯ ಅತಿಥಿಗಳು : ತೀಸ್ತಾ ಸೆಟಲ್ವಾಡ್
ಹಿರಿಯ ಮಾನವ ಹಕ್ಕು ಹೋರಾಟಗಾರರು, ಮುಂ

ಅಧ್ಯಕ್ಷತೆ : ಗೌರಿ ಲಂಕೇಶ್
ಸಂಪಾದಕರು, ಗೌರಿ ಲಂಕೇಶ್ ಪತ್ರಿಕೆ

ಪ್ರಾಸ್ತಾವಿಕ ಮಾತು : ದಿನಕರ ಎಸ್.ಬೆಂಗ್ರೆ, ಕ.ಕೋ.ಸೌ.ವೇ. ಉಡುಪಿ

ಸ್ವಾಗತ : ಗುಲಾಬಿ ಬಿಳಿಮಲೆ
ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಮಂಗಳೂ

ಸಮನ್ವಯ : ಮಂಜುಳ ಎನ್., ಶಿವಮೊಗ್ಗ
ಅಬ್ದುಲ್ ಸಮದ್ ಚೌದ್ರಿ, ಸಿಂಧನೂರು.

ನಾಟಕ : ಕೊಂದವರಾರು?

ಸಂಜೆ 6:45ರಿಂದ 8ರವರೆಗೆ

ರಚನೆ : ಪ್ರಸನ್ನ, ಹೆಗ್ಗೋಡು

ನಿರ್ದೇಶನ : ಎಂ.ವಿ. ಪ್ರತಿಭಾ

ತಂಡ : ಸ್ಪಂದನ, ಸಾಗರ

ನಾಟಕಕ್ಕೆ ಚಾಲನೆ : ಜಿ.ರಾಜಶೇಖರ, ಕ.ಕೋ.ಸೌ.ವೇ.

ಸ್ವಾಗತ : ಪ್ರೊ. ಹಯವದನ ಮೂಡಸಗ್ರಿ, ಕ.ಕೋ.ಸೌ.ವೇ

ಸಂಪರ್ಕ

ಕೆ.ಎಲ್.ಅಶೋಕ್ 9448256216
ರಾಬಿನ್ ಕ್ರಿಸ್ಟೋಫರ್ ಜೆ. 8722797111
ದಿನಕರ ಎಸ್.ಬೆಂಗ್ರೆ 9845225031
ಸುರೇಶ್ ಭಟ್ ಬಾಕ್ರಬೈಲ್ 0824-2225652
ಇಸ್ಮತ್ ಫಜೀರ್ 9880984288
ಗೌಸ್ ಮೊಹಿದ್ದೀನ್ 94482 20998
ರತಿರಾವ್ 9448051387/ ಕೆ.ಫಣಿರಾಜ್ 9448983294
ಅಬ್ದುಲ್ ಸಮದ್ ಚೌದ್ರಿ 9880905943
ಎನ್.ವೆಂಕಟೇಶ್ 9448713534
ರೆ.ಫಾ.ಮನೋಹರಚಂದ್ರಪ್ರಸಾದ್ 9448488350

ಎಲ್ಲರಿಗೂ ಸ್ವಾಗತ

ಜಾತಿ ರಾಜಕೀಯ ಮತ್ತು ರೋಹಿತ್ ಸಾವು

ಕಂಡಹಾಗೆ



• ಗೌರಿ ಲಂಕೇಶ್

editorlankesh@gmail.com

ರೋಹಿತ್ ವೆಮುಲನ ಸಾವು ನನ್ನನ್ನು ಇನ್ನಿಲ್ಲದಂತೆ ಕಾಡುತ್ತಿದೆ. ಪ್ರತಿಭಾವಂತನಾಗಿದ್ದ, ಪ್ರಗತಿಪರನಾಗಿದ್ದ, ಅಂಬೇಡ್ಕರ್ ಮತ್ತು ಜೋತಿಬಾ ಫುಲೆ ಅವರಿಂದ ಪ್ರಭಾವಿತನಾಗಿದ್ದ, ಅನ್ಯಾಯದ ವಿರುದ್ಧ ದಿಟ್ಟತನದಿಂದ ಹೋರಾಡುತ್ತಿದ್ದ ಈ ನಗುಮುಖದ ಸುಂದರ ಹುಡುಗ ಅದ್ಯಾಕೆ ಆತ್ಮಹತ್ಯೆಗೆ ಶರಣಾದ? ಓದು, ದಿಟ್ಟತನ, ಸ್ಪಷ್ಟತೆಗಳನ್ನು ಹೊಂದಿದ್ದ ಇಂತಹ ಯುವಕನೇ ನೇಣು ಹಾಕಿಕೊಳ್ಳುತ್ತಾನೆಂದರೆ ಆತನಿಗೆ ನಮ್ಮ ಸಮಾಜ ಮತ್ತು ಶೈಕ್ಷಣಿಕ ವ್ಯವಸ್ಥೆ ಅದೆಷ್ಟು ಕಾಟ ಕೊಟ್ಟಿರಬಹುದು? ಆತನ ಮನಸ್ಸನ್ನು ಅದೆಷ್ಟು ಹಿಂಸಿಸಿರಬಹುದು? ಆತನ ಆತ್ಮಸ್ಥೈರ್ಯವನ್ನು ಅದೆಷ್ಟು ಕುಗ್ಗಿಸಿರಬಹುದು? ಆತನ ಆತ್ಮವಿಶ್ವಾಸವನ್ನು ಅದೆಷ್ಟು ದಮನಿಸಿರಬಹುದು? ಇಂತಹ ಹಲವಾರು ಪ್ರಶ್ನೆಗಳು ನನ್ನನ್ನು ಮಾತ್ರವಲ್ಲ, ನಮ್ಮ ದೇಶದ ಪ್ರತಿ ಸೂಕ್ಷ್ಮಮನಸ್ಸಿನ ವ್ಯಕ್ತಿಯನ್ನೂ ಕಾಡುತ್ತಿವೆ.


ಎರಡು ವಾರಗಳ ಹಿಂದೆ ರೋಹಿತ್ ಮತ್ತು ಆತನ ನಾಲ್ವರು ಮಿತ್ರರನ್ನು ಹೈದರಾಬಾದಿನ ಮುಕ್ತ ವಿಶ್ವವಿದ್ಯಾಲಯದ ಹಾಸ್ಟೆಲ್‌ನಿಂದ ಹೊರದಬ್ಬಿದಾಗ ರೋಹಿತ್ ಮತ್ತು ಇನ್ನೊಬ್ಬ ವಿದ್ಯಾರ್ಥಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಫೋಟೊದೊಂದಿಗೆ ಚಾಪೆ, ಹೊದಿಕೆ ಮತ್ತು ಹಾಸಿಗೆ ಹಿಡಿದು ಹೊರಬರುತ್ತಿರುವ ಫೋಟೋಗಳನ್ನು ಫೇಸ್‌ಬುಕ್‌ನಲ್ಲಿ ಹಲವರು ಹಂಚಿಕೊಂಡಿದ್ದರು. ಅದನ್ನು ನಾನೂ ನನ್ನ ವಾಲ್‌ನಲ್ಲಿ ಶೇರ್ ಮಾಡಿದ್ದೆ. ಅದು ಬಿಟ್ಟು ಈ ಯುವಕನ ಬಗ್ಗೆ ನನಗೆ ಹೆಚ್ಚೇನೂ ಗೊತ್ತಿರಲಿಲ್ಲ. ಆದರೆ ಸೋಮವಾರ ಆತ ತೀರಿಕೊಂಡ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿದಾಗ ಆತ ಎಂತಹ ವ್ಯಕ್ತಿಯಾಗಿದ್ದ ಎಂದು ಅರಿಯಲು ಫೇಸ್‌ಬುಕ್‌ನಲ್ಲಿ ಆತ ಏನೇನು ಕಾಮೆಂಟ್ ಮಾಡಿದ್ದಾನೆ, ಎಂತಹ ಚಿತ್ರಗಳನ್ನು ಹಂಚಿಕೊಂಡಿದ್ದಾನೆ ಎಂದು ಓದುತ್ತಾ, ನೋಡುತ್ತಾ ಕೂತೆ. ಅಲ್ಲಿ ನನಗೆ ಕಂಡ ರೋಹಿತ್ ಎಂಬ ತರುಣ ಹೀಗಿದ್ದ:

26ರ ಹರೆಯದ ರೋಹಿತ್ ಆ ವಯಸ್ಸಿಗೆ ಸಹಜವಾದ ಜೀವನೋತ್ಸಾಹವನ್ನು ಹೊಂದಿದ್ದ. ತಾನು ಚೆನ್ನಾಗಿ ಕಾಣಿಸುವ ಫೋಟೋಗಳನ್ನು ಹಂಚಿಕೊಳ್ಳುವುದು, ಗೆಳೆಯರೊಂದಿಗೆ ಕಳೆದ ಘಳಿಗೆಗಳನ್ನು ನೆನಪಿಸಿಕೊಳ್ಳುವುದು, ಆಗೀಗ ಸಿಗರೇಟ್ ಸೇದುವುದು, ಹಣವಿದ್ದಾಗ ಒಂದೆರಡು ತಣ್ಣನೆಯ ಬಿಯರ್ ಆನಂದಿಸುವುದು, ಗೆಳೆಯರೊಂದಿಗೆ ಹರಟೆ ಕೊಚ್ಚುವುದು, ತಮಾಷೆ ಮಾಡುವುದು ಇತ್ಯಾದಿಗಳೆಲ್ಲವನ್ನೂ ಅವನೂ ಮಾಡುತ್ತಿದ್ದ. ಆದರೆ ಅದಕ್ಕಿಂತ ಮುಖ್ಯವಾಗಿ ಆತ ತನ್ನ ಒಲುವು, ನಂಬಿಕೆ, ಆಸಕ್ತಿ, ಸಿದ್ಧಾಂತ ಇತ್ಯಾದಿಗಳನ್ನು ಕುರಿತೂ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡುತ್ತಿದ್ದ. ಅಂಬೇಡ್ಕರ್ ಅವರ ಅಭಿಮಾನಿ ಆಗಿದ್ದ ರೋಹಿತ್ ಅವರ ಹೇಳಿಕೆಗಳನ್ನು ಹಲವಾರು ಬಾರಿ ಶೇರ್ ಮಾಡಿದ್ದ. ಎರಡು ವರ್ಷಗಳ ಹಿಂದೆ ಅಂಬೇಡ್ಕರ್ ಅವರ ಜನ್ಮದಿನದಂದು "ಸಮಾನತೆ ಮತ್ತು ಪರಸ್ಪರರ ಬಗೆಗೆ ಕಕ್ಕುಲತೆ ಇರುವ ಸಮಾಜಕ್ಕಾಗಿ ಶ್ರಮಿಸೋಣ. ಕೋಮುಗಲಭೆಗಳು ಇಲ್ಲದಿರುವ, ತಾವು ಯಾವ ಕುಟುಂಬದಿಂದ ಬಂದವರು ಎಂಬುದು ಮುಖ್ಯವಾಗದೆ ಸಂತೋಷದಿಂದ ನಳನಳಿಸುವ ಮಕ್ಕಳ ಮುಖಗಳಿಗಾಗಿ ಶ್ರಮಿಸೋಣ" ಎಂದು ಬರೆದಿದ್ದ. ವಿಜ್ಞಾನದ ಬಗ್ಗೆ ತುಂಬಾ ಆಸಕ್ತಿ ಹೊಂದಿದ್ದ ರೋಹಿತ್ ವಿಜ್ಞಾನ ಸಾಹಿತಿ ಕಾರ್ಲ್ ಸಗಾನ್ ಸೇರಿದಂತೆ ವಿವಿಧ ವಿಜ್ಞಾನಿಗಳನ್ನು ಕುರಿತು ಮಾಹಿತಿಗಳನ್ನು ಹಂಚಿಕೊಂಡಿದ್ದ. ಇತ್ತೀಚೆಗೆ ಎಂ.ಎಂ.ಕಲಬುರ್ಗಿಯವರನ್ನು ಆಗಂತುಕರು ಕೊಂದಾಗ ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಕಲಬುರ್ಗಿಯವರ ಪರಿಚಿತರಿಂದ ಯಾರೋ ಒಂದು ಸಂವಾದವನ್ನು ಏರ್ಪಡಿಸಿದ್ದರು. ಅದರ ಪೋಸ್ಟರ್ ಹಂಚಿಕೊಂಡಿದ್ದ ರೋಹಿತ್ ಕಲಬುರ್ಗಿಯವರ ಕೊಲೆಯನ್ನು ಖಂಡಿಸುತ್ತಾ ಎಲ್ಲರೂ ಆ ಸಂವಾದದಲ್ಲಿ ಭಾಗವಹಿಸಿ ಎಂದು ತನ್ನ ಮಿತ್ರರನ್ನು ಕೇಳಿಕೊಂಡಿದ್ದ. ಮುಖ್ಯಮಂತ್ರಿ ಸಿದ್ದರಾಮಯ್ಯನವರು "ಬೇಕು ಅನ್ನಿಸಿದರೆ ನಾನು ದನದ ಮಾಂಸ ತಿನ್ನುತ್ತೇನೆ. ಕೇಳೋಕೆ ನೀವ್ಯಾರು" ಎಂದಾಗ ಅದರ ಪತ್ರಿಕಾವರದಿಯನ್ನು ಶೇರ್ ಮಾಡಿದ್ದ ರೋಹಿತ್ ಅದಕ್ಕೆ ಎರಡು ಹೃದಯಗಳ ಸಿಂಬಲ್‌ಗಳನ್ನು ಅಂಟಿಸಿದ್ದ. ಮೂರು ವಾರಗಳ ಹಿಂದೆ ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನದಂದು ಅವರ ಕೊಡುಗೆಗಳನ್ನು ನೆನಪಿಸಿಕೊಂಡಿದ್ದ. ಇತ್ತೀಚೆಗೆ ಒಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಹಲವು ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ 'ಬೀಫ್ ಫುಡ್ ಫೆಸ್ಟಿವಲ್'ಗೂ ಬೆಂಬಲ ಸೂಚಿಸಿದ್ದ. ಹೊಸ ವರ್ಷಕ್ಕೆ ...ಯಾಗಿ ಪಠಾಣ್‌ಕೋಟ್ ಮೇಲಿನ ಉಗ್ರರ ದಾಳಿಯಲ್ಲಿ ಮರಣ ಹೊಂದಿದ ಭಾರತೀಯ ಸೈನಿಕರಿಗಾಗಿ ಮತ್ತು ಇದೇ ಹೊತ್ತಿಗೆ ಮಣಿಪುರದಲ್ಲಿ ಸಂಭವಿಸಿದ ಭೂಕಂಪನದಲ್ಲಿ ಮಡಿದ ಜನಸಾಮಾನ್ಯರಿಗಾಗಿ ಕಂಬನಿ ಮಿಡಿದಿದ್ದ.

ಒಂದು ಪೋಸ್ಟ್‌ನಲ್ಲಿ ತನ್ನನ್ನು ರೋಹಿತ್ 'ನಾನು ಜೀವಪರ ಅಂಬೇಡ್ಕರ್‌ವಾದಿ' ಎಂದು ಬಣ್ಣಿಸಿಕೊಂಡಿದ್ದ. ಇಂತಹ ಜೀವಪರ ಯುವಕ ಯಾಕೆ ಆತ್ಮಹತ್ಯೆಗೆ ಶರಣಾದ?

ದೆಹಲಿಯಲ್ಲಿರುವ ಜವಾಹರ್ ನೆಹರು ವಿಶ್ವವಿದ್ಯಾಲಯದಲ್ಲಿ ಮೊದಲಿನಿಂದಲೂ ಎಡಪಂಥೀಯರು ಮೇಲುಗೈ ಹೊಂದಿದ್ದಾರೆ. ಆದರೆ ನಮ್ಮ ದೇಶದ ಇತರೆ ಕಾಲೇಜು ಮತ್ತು ವಿವಿಗಳಲ್ಲಿ ಕೇಸರಿ ಪಡೆಯೇ ಮೇಲುಗೈ ಸಾಧಿಸಿದೆ. ವಿವೇಕಾನಂದರ ಹೆಸರಲ್ಲಿ, ಭಗತ್ ಸಿಂಗ್ ಅವರ ನೆಪದಲ್ಲಿ, ಭ್ರಷ್ಟಾಚಾರ ನಿರ್ಮೂಲನೆಯ ಸೋಗಿನಲ್ಲಿ ಖಾಸಗಿ ಸಂಸ್ಥೆಗಳನ್ನು ಮಾತ್ರವಲ್ಲ, ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಹೊಕ್ಕಿರುವ ಕೋಮುವಾದಿ ಕೇಸರಿ ಪಡೆ ಅಲ್ಲಿಂದಲೇ ಯುವಕರನ್ನು ತನ್ನ ಹಿಂದೂತ್ವ ಸಿದ್ಧಾಂತಕ್ಕೆ 'ಸೆಳೆಯುವ' ಕಾರ್ಯಾಚರಣೆಯನ್ನು ಹಲವು ದಶಕಗಳಿಂದ ಮಾಡುತ್ತಾ ಬಂದಿದೆ. ಖಾಸಗಿ ಸಂಸ್ಥೆಗಳ ಮಾಲೀಕರು ಮತ್ತು ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರು ಮತ್ತು ಇತರೆ ಸಿಬ್ಬಂದಿಗಳಲ್ಲಿ ಹೆಚ್ಚಿನವರು ಮೇಲುಜಾತಿಯವರೇ ಆಗಿರುವುದರಿಂದ ಅವರ 'ಸೆಳೆಯುವ' ಕೆಲಸ ಸುಗಮವಾಗಿ ಸಾಗುತ್ತಾ ಬಂದಿದೆ. ಆದರೆ ಹಲವಾರು ಬಾರಿ ಈ ಕೇಸರಿ ಪಡೆಯ ಕಾರ್ಯಾಚರಣೆಗಳು ರಕ್ತಪಾತಕ್ಕೆ ಮತ್ತು ಸಾವುಗಳಿಗೂ ಕಾರಣವಾಗಿದೆ.

ಉದಾಹರಣೆಗೆ 2006ರಲ್ಲಿ ಭೋಪಾಲ್‌ನ ಒಂದು ಕಾಲೇಜಿನಲ್ಲಿ ಎಬಿವಿಪಿಯ ಪುಂಡರು ಎಚ್.ಎಸ್.ಸಬರ್ವಾಲ್ ಎಂಬ ಪ್ರೊಫೆಸರ್ ಅವರನ್ನು



ಯಾವ ರೀತಿ ಥಳಿಸಿದರೆಂದರೆ ಅವರನ್ನು ಆಸ್ಪತ್ರೆಗೆ ಸಾಗಿಸುವಾಗಲೆ ಅವರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರು. ಹಾಗೆಯೇ 2009ರಲ್ಲಿ ಇಂದೋರ್‌ನ ಕಾಲೇಜೊಂದರ ಮುಖ್ಯಸ್ಥೆಗೆ ಅದೇ ಎಬಿವಿಪಿಯ ಸದಸ್ಯರು ಮುತ್ತಿಗೆ ಹಾಕಿದಾಗ ಆಕೆ ಹೃದಯಾಘಾತಕ್ಕೆ ತುತ್ತಾಗಿದ್ದರು. 2011ರಲ್ಲಿ ಉಜ್ಜೇನಿನಲ್ಲಿ ಪ್ರೊಫೆಸರ್ ಆಗಿದ್ದ ಸುಂದರ್ ಸಿಂಗ್ ಥಾಕೂರ್ ಎಂಬುವವರ ಸಹೋದ್ಯೋಗಿ ಮೇಲೆ ಚೆಡ್ಡಿ ವಿದ್ಯಾರ್ಥಿಗಳು ದಾಳಿ ಮಾಡಿ, ಅವರ ಮುಖಕ್ಕೆ ಮಸಿ ಬಳಿದಿದ್ದನ್ನು ಕಂಡು ಆಘಾತಗೊಂಡು ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಈ ಮೂರೂ ಪ್ರಕರಣಗಳು ನಡೆದಾಗ ಮಧ್ಯಪ್ರದೇಶದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದುದರಿಂದ ಯಾವ ಚೆಡ್ಡಿಯ ಕೂದಲೂ ಅಲ್ಲಾಡಿರಲಿಲ್ಲ. ಹಾಗೆಯೇ 2010ರಲ್ಲಿ ಗುಜರಾತ್ ವಿಶ್ವವಿದ್ಯಾಲಯದ ಉಪಕುಲಪತಿ ಪರಿಮಾಲ್ ತ್ರಿವೇದಿಯವರ ಅಧಿಕೃತ ನಿವಾಸದ ಮೇಲೆ ಎಬಿವಿಪಿಯ ಗೂಂಡಾಗಳು ದಾಳಿ ಮಾಡಿ ಉಪಕುಲಪತಿಗಳನ್ನೇ ಥಳಿಸಿದ್ದರು. ಆಗಲೂ ಪರಮ ಚೆಡ್ಡಿ ನರೇಂದ್ರ ಮೋದಿ ಗುಜರಾತಿನ ಮುಖ್ಯಮಂತ್ರಿ ಆಗಿದ್ದ ಕಾರಣ ಅಲ್ಲೂ ಯಾವ ಚೆಡ್ಡಿ ವಿದ್ಯಾರ್ಥಿಯ ವಿರುದ್ಧ ಕ್ರಮವನ್ನು ತೆಗೆದುಕೊಂಡಿರಲಿಲ್ಲ. ನಮ್ಮ ಕರ್ನಾಟಕದಲ್ಲೂ 2005ರಲ್ಲಿ ವಿಜಯಾ ಕಾಲೇಜಿನ ಆವರಣದಲ್ಲೇ ಪ್ರೊ.ವಿ.ಎಸ್. ಶ್ರೀಧರ ಅವರ ಮೇಲೆ ಎಬಿವಿಪಿಯ ರೌಡಿಗಳು ದಾಳಿ ಮಾಡಿದ್ದರು. ಆಗ ಹಲವರ ವಿರುದ್ಧ ದೂರು ದಾಖಲಾಗಿದ್ದರೂ ಯಾರಿಗೂ ಇಲ್ಲಿಯತನಕ ಯಾವ ಶಿಕ್ಷೆಯೂ ಆಗಿಲ್ಲ. ಯಾಕೆಂದರೆ ಆ ಕಾಲೇಜ್ ಇರುವ ಪ್ರದೇಶದ ಶಾಸಕ ಮತ್ತು ಸಂಸದ ಇಬ್ಬರೂ ಚೆಡ್ಡಿ ನಾಯಕರೆ. ಈ ಎಲ್ಲಾ ಪ್ರಕರಣಗಳು ಎಬಿವಿಪಿಯ ಗೂಂಡಾಗಳಿಗೆ ಬಿಜೆಪಿಯ ನಾಯಕರು ಹೇಗೆ ರಕ್ಷಣೆ ಕೊಡುತ್ತಾರೆಂದು ಸ್ಪಷ್ಟಪಡಿಸುತ್ತವೆ.

ಆದರೆ ಇತ್ತೀಚೆಗೆ ಹಿಂದುಳಿದ ವರ್ಗಗಳ ಮತ್ತು ದಲಿತ ಸಮುದಾಯಗಳ ವಿದ್ಯಾರ್ಥಿಗಳು ಎಚ್ಚೆತ್ತುಕೊಂಡಿದ್ದಾರೆ. ಅವರೆಲ್ಲ ಮೇಲುಜಾತಿಯವರಂತೆ ಬರೀ ಅಕ್ಷರವನ್ನು ಮಾತ್ರ ಕಲಿಯದೆ, ಜ್ಞಾನವನ್ನೂ ಪಡೆಯುತ್ತಿದ್ದಾರೆ. ಅಂಬೇಡ್ಕರ್, ಪೆರಿಯಾರ್, ನಾರಾಯಣ ಗುರು, ಜೋತಿಬಾ ಫುಲೆ ತರಹದ ಸಾಮಾಜಿಕ ಸುಧಾರಕರಿಂದ ಸ್ಫೂರ್ತಿ ಪಡೆದು ತಮ್ಮ ಹಕ್ಕುಗಳಿಗೆ ದನಿ ಎತ್ತಲಾರಂಭಿಸಿದ್ದಾರೆ. ಇದೆಲ್ಲದರಿಂದಾಗಿ ಚೆಡ್ಡಿಗಳ ಕೆಂಗಣ್ಣು ಈ ಅಮಾಯಕ ವಿದ್ಯಾರ್ಥಿಗಳ ಮೇಲೆ ಬಿದ್ದಿದೆ. ಹೇಗೂ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಲ್ಲಿ ಮೇಲುಜಾತಿಯ ಜನರೇ ಬಹುಸಂಖ್ಯಾತರಾಗಿರುವಾಗ ದಲಿತರ ಮೇಲಿನ ದಮನ ಸಲೀಸಾಗಿ ನಡೆಯುತ್ತಿದೆ. ಉದಾಹರಣೆಗೆ, ಹೋದ ವರ್ಷದ ತನಕ ಐಐಟಿ ಮದ್ರಾಸ್ ಚೆಡ್ಡಿಗಳ ಕಾರಸ್ಥಾನವಾಗಿತ್ತು. ಅಲ್ಲಿ ಅವರು ವಿವೇಕಾನಂದ ಸ್ಟಡಿ ಸರ್ಕಲ್ ಎಂಬ ಗುಂಪನ್ನು ರಚಿಸಿಕೊಂಡು ತಮ್ಮ ಕೋಮು ಸಿದ್ಧಾಂತವನ್ನು ಹಬ್ಬಿಸುತ್ತಿದ್ದರು. ಅವರ ಕುತಂತ್ರವನ್ನರಿತ ಹಲವು ದಲಿತ ವಿದ್ಯಾರ್ಥಿಗಳು ಅಂಬೇಡ್ಕರ್ ಮತ್ತು ಪೆರಿಯಾರ್ ಹೆಸರಲ್ಲಿ ಇನ್ನೊಂದು ಸ್ಟಡಿ ಸರ್ಕಲ್ ರಚಿಸಿಕೊಳ್ಳಲು ಮುಂದಾದರು. ಆಗ ಐಐಟಿ ಮದ್ರಾಸ್ ಸಂಸ್ಥೆಯ ಮುಖ್ಯಸ್ಥರು "ಅಂಬೇಡ್ಕರ್ ಮತ್ತು ಪೆರಿಯಾರ್ ಅವರ ಹೆಸರುಗಳು ರಾಜಕೀಯ ಅಂಶಗಳಿಂದ ಕೂಡಿದೆ. ಆದ್ದರಿಂದ ಬೇರೆ ಹೆಸರನ್ನು ಆಯ್ಕೆ ಮಾಡಿ" ಎಂದು ಸೂಚಿಸಿದರು. ಅದಕ್ಕೆ ದಲಿತ ವಿದ್ಯಾರ್ಥಿಗಳು ಒಪ್ಪದಿದ್ದಾಗ ಅವರು ಸುಮ್ಮನಾದರು. ಒಮ್ಮೆ ದಲಿತ ವಿದ್ಯಾರ್ಥಿಗಳು ಕೋಮುವಾದ ಮತ್ತು ಮೋದಿಯ ಆರ್ಥಿಕ ನೀತಿಯಿಂದಾಗಿ ಆಗುವ ಅಪಾಯಗಳ ಕುರಿತು ವಿಚಾರಸಂಕಿರಣವನ್ನು ಹಮ್ಮಿಕೊಂಡರು. ಅದನ್ನೇ ನೆಪ ಮಾಡಿಕೊಂಡ ಚೆಡ್ಡಿಗಳು, ಕೇಂದ್ರದಲ್ಲಿ ಮಾನವ ಸಂಪನ್ಮೂಲ ಸಚಿವೆ ಆಗಿರುವ ಸ್ಮೃತಿ ಇರಾನಿಗೆ ಅನಾಮಿಕ ಪತ್ರವೊಂದನ್ನು ಬರೆದು "ಈ ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್‌ನ ಸದಸ್ಯರು ಹಿಂದೂಗಳ ನಡುವೆ ಒಡಕುಗಳನ್ನು ಸೃಷ್ಟಿಸುತ್ತಿದ್ದಾರೆ, ಹಿಂದೂಗಳಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಅವಮಾನ ಮಾಡುತ್ತಿದ್ದಾರೆ" ಎಂದು ದೂರಿದರು. "ನೋಡಿ, ನಿಮ್ಮ ಸಂಸ್ಥೆಯಲ್ಲಿ ಇಂತಹದ್ದಕ್ಕೆ ಯಾಕೆ ಅವಕಾಶ ಮಾಡಿಕೊಡುತ್ತಿದ್ದೀರಿ" ಎಂದು ಇರಾನಿ ಗದರಿದ್ದೇ ತಡ, ಐಐಟಿ ಮದ್ರಾಸ್ ಮುಖ್ಯಸ್ಥ ಆ ಸ್ಟಡಿ ಸರ್ಕಲ್‌ಗೆ ನೀಡಿದ್ದ ಮಾನ್ಯತೆಯನ್ನೇ ರದ್ದು ಮಾಡಿದ. ಆಗ ದಲಿತ ಯುವಕರ ಪರ ತಮಿಳುನಾಡಿನ ಜನ ನಿಂತಿದ್ದರಿಂದ ಮತ್ತು ಪೆರಿಯಾರ್ ಅವರನ್ನು ಅವಮಾನಿಸಿದರೆ ತಮಿಳುನಾಡಿನಲ್ಲಿ ತಮ್ಮ ಹಿಂದೂತ್ವವಾದದ ಬೇಳೆ ಬೇಯುವುದಿಲ್ಲ ಎಂದು ಹೆದರಿದ ಚೆಡ್ಡಿಗಳು ಆ ಸ್ಟಡಿ ಸರ್ಕಲ್‌ಗೆ ಮಾನ್ಯತೆಯನ್ನು ಕೊಡಲೇಬೇಕಾಯಿತು.

ಈಗ ಚೆಡ್ಡಿಗಳು ಅಂತಹದ್ದೇ ಕುತಂತ್ರವನ್ನು ಹೈದರಾಬಾದಿನ ಮುಕ್ತ ವಿವಿಯಲ್ಲೂ ಮಾಡಿದ್ದರ ಫಲ ರೋಹಿತ್ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದಾನೆ. ಹೋದ ವರ್ಷ ಯಾಕೂಬ್ ಮೆನನ್‌ನನ್ನು ಗಲ್ಲಿಗೇರಿಸಿದಾಗ ರೋಹಿತ್ ಮತ್ತು ಅಂಬೇಡ್ಕರ್ ವಿದ್ಯಾರ್ಥಿ ಸಂಘದ ಸದಸ್ಯರು ಅದನ್ನು ವಿರೋಧಿಸಿದ್ದರು. ಯಾಕೆ ಅಂದರೆ ಅವರು ಮರಣದಂಡನೆಯನ್ನು ವಿರೋಧಿಸುವವರಾಗಿದ್ದರು. ಅದಾದನಂತರ ದೆಹಲಿ ವಿವಿಯಲ್ಲಿ ಮುಜಾಫರ್ ನಗರದಲ್ಲಾದ ಕೋಮುಗಲಭೆ ಕುರಿತ ಸಾಕ್ಷ್ಯ ಚಿತ್ರದ ಪ್ರದರ್ಶನವನ್ನು ಅಡ್ಡಿಪಡಿಸಿದ್ದನ್ನೂ ರೋಹಿತ್ ಮತ್ತು ಮಿತ್ರರು ಖಂಡಿಸಿದ್ದರು. ಇದನ್ನೆಲ್ಲ ಕಂಡು ಉರಿದುಹೋದ ವಿವಿಯ ಎಬಿವಿಪಿ ಅಧ್ಯಕ್ಷ ಸುಶೀಲ್‌ಕುಮಾರ್ ಎಂಬಾತ ಫೇಸ್‌ಬುಕ್‌ನಲ್ಲಿ "ಎಎಸ್‌ಎ ಗೂಂಡಾಗಳು ಗೂಂಡಾಗಿರಿ ಬಗ್ಗೆ ಮಾತನಾಡುತ್ತಿರುವುದು ಸೋಜಿಗವಾಗಿದೆ" ಎಂದು ಟೀಕಿಸಿದ್ದ. ಅಂದರೆ ಈ ಚೆಡ್ಡಿ ನಾಯಕ ಅಂಬೇಡ್ಕರ್‌ವಾದಿಗಳನ್ನು ಗೂಂಡಾಗಳು ಎಂದು ಟೀಕಿಸುತ್ತಿದ್ದಾನೆ ಎಂದು ನೊಂದ ರೋಹಿತ್ ಮತ್ತು ಮಿತ್ರರು ಆತನ ರೂಮಿಗೆ ಹೋಗಿ "ಹೀಗೇಕೆ ಮಾಡಿದೆ" ಎಂದು ದಬಾಯಿಸಿದರು. ಆಗ ಅವನು "ನೀವು ನಮ್ಮನ್ನು ಗೂಂಡಾಗಳು ಅಂದ್ರಿ, ಅದಕ್ಕೆ ನಾನೂ ಅಂದೆ" ಎಂದ. "ನಾವು ಖಂಡಿಸಿದ್ದು ನಿಜ, ಆದರೆ ನಾವು ನಿಮ್ಮನ್ನು ಗೂಂಡಾಗಳು ಎಂದು ಕರೆಯಲಿಲ್ಲ" ಎಂದು ಸ್ಪಷ್ಟಪಡಿಸಿದಾಗ ಸುಶೀಲ್ ಕುಮಾರ್ ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮೆಯಾಚಿಸಿದ.

ಆದರೆ ದಲಿತರು ಮತ್ತು ಚೆಡ್ಡಿಗಳ ನಡುವಿನ ಈ ಭಿನ್ನಾಭಿಪ್ರಾಯ ಅಲ್ಲಿಗೇ ನಿಲ್ಲಲಿಲ್ಲ. ಮಾರನೆ ದಿನ ಸುಶೀಲ್ ಕುಮಾರ್ "ನನ್ನ ಮೇಲೆ ಇವರೆಲ್ಲ ದಾಳಿ ಮಾಡಿದರು. ಪರಿಣಾಮವಾಗಿ ನಾನು ಆಸ್ಪತ್ರೆ ಸೇರುವಂತಾಯಿತು" ಎಂದು ದೂರು ಕೊಟ್ಟ. ಆತನ ಸುಳ್ಳು ದೂರಿಗೆ ಬೆಂಬಲವಾಗಿ ಬಿಜೆಪಿಯ ಶಾಸಕ ರಾಮಚಂದ್ರ ರಾವ್ ನಿಂತ. ಜೊತೆಗೆ ಒಂದಿಷ್ಟು ಆರೆಸ್ಸೆಸ್ ನಾಯಕರೂ ಸೇರಿಕೊಂಡರು. ಹಾಗೆಯೇ ಸಂಸದನೂ ಮಂತ್ರಿಯೂ ಆಗಿರುವ ಬಂಡಾರು ದತ್ತಾತ್ರೇಯನೂ ಸ್ಮೃತಿ ಇರಾನಿಗೆ ಪತ್ರ ಬರೆದು "ಈ ಅಂಬೇಡ್ಕರ್‌ವಾದಿಗಳು ವಿವಿಯನ್ನು ಜಾತಿವಾದಿಗಳ, ಉಗ್ರವಾದಿಗಳ ಮತ್ತು ದೇಶದ್ರೋಹಿಗಳ ಕಾರ್ಯಸ್ಥಾನವಾಗಿಸಿದ್ದಾರೆ, ಇವರುಗಳ ವಿರುದ್ಧ ಕ್ರಮತೆಗೆದುಕೊಳ್ಳಬೇಕು" ಎಂದು ಒತ್ತಾಯಿಸಿದ. ಆಗ ವಿವಿಯು ಒಂದು ಸಮಿತಿಯನ್ನು ರಚಿಸಿ ವಿಚಾರಣೆಯನ್ನು ನಡೆಸಿತು. ಆದರೆ ರೋಹಿತ್ ಮತ್ತು ಇತರರು ಸುಶೀಲನ ಮೇಲೆ ದಾಳಿ ಮಾಡಿದ್ದರು ಎನ್ನುವುದಕ್ಕೆ ಪ್ರತ್ಯಕ್ಷಸಾಕ್ಷಿಗಳಾಗಲಿ, ವೈದ್ಯರ ವರದಿಯಾಗಲಿ, ಇತರೆ ಪುರಾವೆಗಳಾಗಲಿ ತಮಗೆ ಸಿಗಲಿಲ್ಲ ಎಂದು ತನ್ನ ವರದಿಯಲ್ಲಿ ಹೇಳಿದ ಸಮಿತಿ ಅಪ್ಪಾಗಿಯೂ ರೋಹಿತ್ ಸೇರಿದಂತೆ ಐವರು ಅಂಬೇಡ್ಕರ್‌ವಾದಿ ವಿದ್ಯಾರ್ಥಿಗಳನ್ನು ಅಮಾನತುಗೊಳಿಸಬೇಕೆಂದು ಶಿಫಾರಸ್ಸು ಮಾಡಿತು.

"ಯಾವ ಸಾಕ್ಷಿ ಇಲ್ಲದೆಯೂ ಅದು ಹೇಗೆ ನಮ್ಮ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೀರಿ" ಎಂದು ರೋಹಿತ್ ಮತ್ತು ಮಿತ್ರರು ಪ್ರಶ್ನಿಸಿದಾಗ ಆಗಿನ ಉಪಕುಲಪತಿ ಹೊಸ ವಿಚಾರಣಾ ಸಮಿತಿಯನ್ನು ರಚಿಸುವುದಾಗಿ ಭರವಸೆ ನೀಡಿದ್ದರು. ಆದರೆ ಮೋದಿ ಸರಕಾರ ಹೇಗೆ ಕಳಪೆ ನಟನೊಬ್ಬನನ್ನು ಪ್ರತಿಷ್ಠಿತ ಎಫ್‌ಟಿಐಐ ಸಂಸ್ಥೆಗೆ ಮುಖ್ಯಸ್ಥನಾಗಿ ನೇಮಿಸಿದೆಯೋ, ಹೇಗೆ ಇತಿಹಾಸ ಗೊತ್ತಿಲ್ಲದವರನ್ನು ಭಾರತೀಯ ಇತಿಹಾಸ ಸಂಶೋಧನಾ ಸಂಸ್ಥೆಯಲ್ಲಿ ಕೂರಿಸಿದೆಯೋ, ಹಾಗೆಯೆ ಪಕ್ಕಾ ದಲಿತ ವಿರೋಧಿಯಾದ ಅಪ್ಪಾ ರಾವ್ ಎಂಬಾತನನ್ನು ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಮುಕ್ತ ವಿವಿಯ ಉಪಕುಲಪತಿಯಾಗಿ ನೇಮಿಸಿತು. ಅತ್ತ ಚೆಡ್ಡಿಗಳ ಒತ್ತಡ, ಇತ್ತ ಸ್ವತಃ ದಲಿತ ವಿರೋಧಿ ಆದ ಅಪ್ಪಾ ರಾವ್ ಮರು ವಿಚಾರಣಾ ಸಮಿತಿಯನ್ನು ರಚಿಸುವ ಬದಲಾಗಿ ಐವರು ವಿದ್ಯಾರ್ಥಿಗಳ ವಿರುದ್ಧ ಕ್ರಮಕೈಗೊಂಡ. ಅವರನ್ನು ಹಾಸ್ಟೆಲ್‌ಗಳಿಂದ ಹೊರದಬ್ಬಿ ಅವರು ಯಾರೂ ವಿವಿಯ ಕಟ್ಟಡಗಳನ್ನು ಪ್ರವೇಶಿಸಬಾರದು ಎಂದು ಫತ್ವಾ ಹೊರಡಿಸಿದ. ಇದು ಅಸ್ಪೃಶ್ಯತೆಗೆ, ಸಾಮಾಜಿಕ ಬಹಿಷ್ಕಾರಕ್ಕೆ ಸಮನಾದ ಶಿಕ್ಷೆ.

ತನ್ನ ಪ್ರತಿಭೆಯಿಂದ ಯಾವ ಅಸ್ಪೃಶ್ಯತೆ ಮತ್ತು ಸಾಮಾಜಿಕ ಬಹಿಷ್ಕಾರದಂತಹ ಪೀಡೆಗಳನ್ನು ಮೀರಿ ನಿಲ್ಲಲು, ಈ ಸಮಾಜವನ್ನು ಸಮಾನ ಸಮಾಜವಾಗಿ ಪರಿವರ್ತಿಸಲು, ದಮನಿತ ಸಮುದಾಯಗಳಲ್ಲಿ ಎಚ್ಚರಿಕೆಯನ್ನು ಮೂಡಿಸಲು, ದಲಿತ ಮತ್ತು ಮುಸಲ್ಮಾನರ ನಡುವೆ ಸೌಹಾರ್ದತೆ ಸಾಧ್ಯವಾಗಿಸಲು ರೋಹಿತ್ ಶ್ರಮಿಸುತ್ತಿದ್ದನೋ, ಅಂಥವನನ್ನೇ ಹೀಗೆ ಅಸ್ಪೃಶ್ಯನಂತೆ ಹೊರದೂಡಿದರೆ ಆ ಯುವಕನ ಮನಸ್ಸಿಗೆ ಇನ್ನೆಂತಹ ಆಘಾತ ಆಗಿರಬಹುದು?


ಈಗಲೂ ಕೆಲವು ಪೆದ್ದರು "ಜಾತಿ ಈಗ ಮುಖ್ಯ ಅಲ್ಲ" ಎಂಬ ಭ್ರಮೆಯಲ್ಲಿ ಕಳೆದುಹೋಗಿದ್ದರೆ, ಚೆಡ್ಡಿಗಳು "ಜಾತಿವಿನಾಶ ಆಗಬೇಕೆಂದರೆ ಮೀಸಲಾತಿಯನ್ನು ನಿಲ್ಲಿಸಿ" ಎಂದೂ ವಾದಿಸುತ್ತಾರೆ. ವಾಸ್ತವವಾಗಿ ಎಲ್ಲಿಯತನಕ ರೋಹಿತ್ ತರಹದ ಯುವಕರು ಹತಾಶಗೊಂಡು ಕೈಚೆಲ್ಲುತ್ತಾರೋ, ಎಲ್ಲಿಯತನಕ ಬೆಂಕಿಯಲ್ಲಿ ಬೆಂದು ಸಾವಿಗೀಡಾದ ಕಂದಮ್ಮಗಳನ್ನು ವಿ.ಕೆ.ಸಿಂಗ್ ತರಹದ ನಾಯಕರು 'ನಾಯಿಮರಿ'ಗಳು ಎಂದು ಬಣ್ಣಿಸುತ್ತಾರೋ, ಎಲ್ಲಿಯತನಕ ಕಂಬಾಲಪಲ್ಲಿ ಮತ್ತು ಖೈರ್ಲಾಂಜಿಯಲ್ಲಿ ತಮ್ಮ ಕಳ್ಳುಬಳ್ಳಿಗಳನ್ನು ಕಳೆದುಕೊಂಡ ಜನ ನ್ಯಾಯ ಸಿಗದೆ ಒದ್ದಾಡುತ್ತಾರೋ, ಎಲ್ಲಿಯತನಕ ಬಹುಸಂಖ್ಯಾತರ ದಮನವನ್ನೇ ತನ್ನ ಮೂಲ ಉದ್ದೇಶವಾಗಿಟ್ಟುಕೊಂಡಿರುವ ಹಿಂದೂ ಧರ್ಮ ಅಸ್ತಿತ್ವದಲ್ಲಿರುತ್ತದೋ ಅಲ್ಲಿಯತನಕ ಈ ಜಾತಿ ಎಂಬ ಅನಿಷ್ಟ, ಅಮಾನವೀಯ, ಅಸಹ್ಯ ಹುಟ್ಟಿಸುವ ಪದ್ಧತಿ ನಾಶವಾಗುವುದಿಲ್ಲ. ಮಾತ್ರವಲ್ಲ ರೋಹಿತ್ ತರಹದ ಪ್ರತಿಭಾವಂತ ಯುವಕರನ್ನು ಬಲಿ ತೆಗೆದುಕೊಳ್ಳುವುದನ್ನೂ ಈ ಹಿಂದೂ ಧರ್ಮ ನಿಲ್ಲಿಸುವುದಿಲ್ಲ.

ಈ ಕಾರಣಕ್ಕೆ ಈ ಸಂಚಿಕೆಯನ್ನು ರೋಹಿತ್ ನೆನಪಿಗೆ ಅರ್ಪಿಸುತ್ತಾ 'ನಾಡಲ್ಲವೋ ಇದು, ವಿಷದ ಸಮುದ್ರ' ಎಂದಿರುವುದು. ■

ಮಂಡ್ಯ: ಸಚ್ಚಿ ಶಿಷ್ಯ ಕಿರುಬೆರಳನ್ನೇ ಕತ್ತರಿಸಿ ತಿಮ್ಮಪ್ಪನ ಹುಂಡಿಗೆ ಹಾಕಿದ್ದು ನಿಜವೇ?


ದ್ವಾಪರಯುಗದಲ್ಲಿ ಏಕಲವ್ಯ ದ್ರೋಣಾಚಾರ್ಯರಿಗೆ ಬಲಗೈ ಹೆಬ್ಬೆರಳನ್ನೇ ಕತ್ತರಿಸಿ ಗುರುದಕ್ಷಿಣೆಯಾಗಿ ಕೊಟ್ಟಿದ್ದನ್ನು ಕೇಳಿದ್ದೇವೆ. ಆದರೆ ಈ ಯುಗದಲ್ಲಿ ಏಕಲವ್ಯನಂತೆ ತನ್ನ ಪಕ್ಷದ ನಾಯಕಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಉಪಾಧ್ಯಕ್ಷ ರಾಹುಲ್ ಗಾಂಧಿಗೆ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಜಾಮೀನು ಸಿಕ್ಕಿದ್ದಕ್ಕಾಗಿ ತನ್ನ ಎಡಗೈ ಕಿರುಬೆರಳನ್ನೇ ಕತ್ತರಿಸಿ ತಿರುಪತಿ ತಿಮ್ಮಪ್ಪನ ಹುಂಡಿಗೆ ಹಾಕುವ ಮೂಲಕ ಕಾಣಿಕೆ ಸಲ್ಲಿಸಿದ ಅಂಧಾಭಿಮಾನಿಯೊಬ್ಬನ ಕಥೆ ಸಖತ್ ಇಂಟರೆಸ್ಟಿಂಗ್ ಆಗಿ ಚರ್ಚೆಯಾಗುತ್ತಿದೆ.

"ಸೋನಿಯಾ ಹಾಗೂ ರಾಹುಲ್‌ಗೆ ಜಾಮೀನು ಸಿಕ್ಕರೆ ಕಿರುಬೆರಳು ಕತ್ತರಿಸಿ ಕೊಡುತ್ತೇನೆಂದು ತಿರುಪತಿ



ಸುರೇಶ್

ತಿಮ್ಮಪ್ಪನಿಗೆ ಹರಕೆ ಮಾಡಿಕೊಂಡಿದ್ದೆ. ಆದರಂತೆ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇಬ್ಬರಿಗೂ ಜಾಮೀನು ಸಿಕ್ಕ ಹಿನ್ನೆಲೆಯಲ್ಲಿ ನಾನೊಬ್ಬನೇ ತಿರುಪತಿಗೆ ತೆರಳಿ ಕಿರುಬೆರಳನ್ನು ಕತ್ತರಿಸಿಕೊಂಡು ಸಾವಿರ ರೂ. ನೋಟು, ಊರಿನ ವಿಳಾಸ, ಮೊಬೈಲ್ ಸಂಖ್ಯೆ ಬೆರಳು ಕೊಟ್ಟಿರುವ ಉದ್ದೇಶ, ಎಲ್ಲವನ್ನು ಚೀಟಿಯಲ್ಲಿ ಬರೆದು ತಿಮ್ಮಪ್ಪನ ಹುಂಡಿಗೆ ಹಾಕಿದೆ" ಎಂದ ಸಚಿವ ಅಂಬರೀಶ್ ಅಭಿಮಾನಿ, ಅಂಬಿ ಆಪ್ತ ಸಚ್ಚಿದಾನಂದನ ಶಿಷ್ಯ ಭೈರಾಪುರ ಸುರೇಶ್ ಎಂಬಾತ ದಿಢೀರ್ ಎಂದು ಆಧುನಿಕ ಏಕಲವ್ಯನಂತೆ ಕಂಗೊಳಿಸುತ್ತಾ ಸಕತ್ತಾಗೇ ಕಥೆ ಹೊಸೆದಿದ್ದ. ಜನ ಇದು ಸತ್ಯವೋ ಅಥವಾ ಸುಳ್ಳೋ? ಎಂಬ ಜಿಜ್ಞಾಸೆಯಲ್ಲಿರುವಾಗಲೇ ಕಳೆದೊಂದು ವಾರದ



ಹಿಂದಷ್ಟೆ ಆಧುನಿಕ ಏಕಲವ್ಯನ ಕಥೆಗೆ ಮತ್ತೊಂದು ಟ್ವಿಸ್ಟ್ ಸಿಕ್ಕಿದೆ. ಅದೇನೆಂದರೆ "ಯಾರೂ ಕೂಡ ತಿರುಪತಿ ತಿಮ್ಮಪ್ಪನ ಹುಂಡಿಗೆ ಕೈಬೆರಳು ಹಾಕಿಲ್ಲ. ನಾವು ಹುಂಡಿಯನ್ನು ಪರಿಶೀಲಿಸಿದ್ದೇವೆ. ಅಲ್ಲಿ ಯಾವ ಬೆರಳೂ ಸಿಕ್ಕಿಲ್ಲ. ಇದೆಲ್ಲಾ ಕಟ್ಟುಕಥೆ. ಪ್ರಚಾರಕ್ಕಾಗಿ ಈ ರೀತಿ ಯಾರೂ ಮಾಡಬಾರದು. ದೇವಸ್ಥಾನದ ಇತಿಹಾಸದಲ್ಲೇ ಇಂತಹ ಪ್ರಕರಣ ಎಂದೂ ನಡೆದಿಲ್ಲ, ಈಗಲೂ ನಡೆದಿಲ್ಲ" ಎಂದು ತಿರುಪತಿ ತಿರುಮಲ ದೇವಸ್ಥಾನ ಟ್ರಸ್ಟ್ (ಟಿಟಿಡಿ) ಸ್ಪಷ್ಟಪಡಿಸಿದೆ.


ಟಿಟಿಡಿ ಹೇಳಿಕೆಯಿಂದ ತಿರುಪತಿ ತಿಮ್ಮಪ್ಪನ ಹುಂಡಿಗೆ ಸಚ್ಚಿ ಶಿಷ್ಯ ಸುರೇಶ್ ಕಿರುಬೆರಳು ಕತ್ತರಿಸಿಕೊಟ್ಟಿದ್ದು ಸತ್ಯವೋ? ಅಥವಾ ಸುಳ್ಳೋ? ಎಂಬ ಪ್ರಶ್ನೆಯಂತೂ ರಾಮನಗರ ಮತ್ತು ಮಂಡ್ಯ ಜನರ ತಲೆ ತಿನ್ನುತ್ತಿರುವುದು ಹಂಡ್ರೆಡ್ ಪರ್ಸೆಂಟ್ ಸತ್ಯ. ಈ ಹಿನ್ನೆಲೆಯಲ್ಲಿ ಈ ಪ್ರಕರಣದ ಅಸಲಿ ಕಥೆಯೇನು? ಸೋನಿಯಾ ಹಾಗೂ ರಾಹುಲ್ ಕೃಪೆಗೆ ಪಾತ್ರನಾಗಲು ಸಚಿವ ಅಂಬರೀಶ್ ಆಪ್ತ ಸಚ್ಚಿದಾನಂದನ ಶಿಷ್ಯ ಸುರೇಶ್ ಎಂಬಾತ ನಿಜಕ್ಕೂ ಕಿರುಬೆರಳು ಕತ್ತರಿಸಿ ತಿಮ್ಮಪ್ಪನ ಹುಂಡಿಗೆ ಹಾಕಿದನೋ? ಇಲ್ಲ ಆಕಸ್ಮಿಕವಾಗಿ ತುಂಡಾದ ಬೆರಳನ್ನು ಹುಂಡಿಗೆ ಹಾಕಿ ಸೋನಿಯಾ ಹಾಗೂ ರಾಹುಲ್‌ಗೆ ಜಾಮೀನು ಸಿಕ್ಕಿದ್ದಕ್ಕಾಗಿ ಹಾಕಿದೆ ಎಂದು ಕಟ್ಟುಕಥೆ ಹೆಣೆದನೋ? ಅಥವಾ ಪ್ರಚಾರ ಗಿಟ್ಟಿಸಿ ಕಾಂಗ್ರೆಸ್ ನಾಯಕರ ಮನವೊಲಿಸಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳಲು ಈ ರೀತಿ ಮಾಡಿದನೋ? ಎಂಬುದನ್ನು ಪೊಲೀಸರೇ ಬಹಿರಂಗಪಡಿಸಬೇಕಿದೆ.

ಕಿರುಬೆರಳು ಅರ್ಪಿಸಿದ್ದೇನೆಂದು ಹೇಳಿಕೊಂಡು ಸಾಕಷ್ಟು ಪ್ರಚಾರ ಪಡೆಯುತ್ತಿರುವ ಭೂಪ ಸುರೇಶ್ ವೃತ್ತಿಯಲ್ಲಿ ಗ್ರಾನೈಟ್ ಉದ್ಯಮಿ. ಈತನ ತಂದೆ-ತಾಯಿ ರಾಮನಗರದ ತಾಲ್ಲೂಕಿನ ಬೈರಾಪುರ ಗ್ರಾಮದವರು. ಈತ ಮಂಡ್ಯದಿಂದ ಕೂಗಳತೆ ದೂರದಲ್ಲಿರುವ ಇಂಡುವಾಳು ಗ್ರಾಮದ ತನ್ನ ಅಜ್ಜಿ ಮನೆಯಲ್ಲೇ ಬೆಳೆದಿದ್ದಾನೆ. ಅಂಬರೀಶ್ ಬೆಂಬಲಿಗ ಸಚ್ಚಿದಾನಂದನ ಶಿಷ್ಯನಾದ ಈತ ಹೆಂಡತಿ- ಮಕ್ಕಳ ಜೊತೆ ಇಲ್ಲಿಯೇ ವಾಸವಾಗಿದ್ದಾನೆ. ಚಿಕ್ಕಂದಿನಿಂದಲೂ ಅಂಬರೀಶ್ ಅಭಿಮಾನಿಯಾದ ಸುರೇಶ್ ಕಾಂಗ್ರೆಸ್ ಪಕ್ಷದ ಕಾರ್ಯಕರ್ತ. ಈಗ ಕಿರುಬೆರಳು ಅರ್ಪಿಸುವ ಮೂಲಕ ಕಳೆದೆರಡು ವಾರಗಳಿಂದ ಮಂಡ್ಯದಲ್ಲಿ ಸಾಕಷ್ಟು ಚರ್ಚೆಗೊಳಗಾಗಿದ್ದಾನೆ.

ನ್ಯಾಷನಲ್ ಹೆರಾಲ್ಡ್ ಕೇಸಿನಲ್ಲಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಮತ್ತು ಉಪಾಧ್ಯಕ್ಷ ರಾಹುಲ್‌ಗೆ ನ್ಯಾಯಾಲಯ ಸಮನ್ಸ್ ನೀಡಿತ್ತು. "ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತನಾದ ನನಗೆ ಕಾಂಗ್ರೆಸ್ ನಾಯಕಿ ಸೋನಿಯಾ ಹಾಗೂ ರಾಹುಲ್ ಮೇಲೆ ಅಪಾರವಾದ ಅಭಿಮಾನ. ನನ್ನ ನೆಚ್ಚಿನ ನಾಯಕರಿಬ್ಬರು ನ್ಯಾಷನಲ್ ಹೆರಾಲ್ಡ್ ಕೇಸಿನಲ್ಲಿ ಬಂಧನಕ್ಕೊಳಗಾಗುತ್ತಾರೆಂಬ ಭೀತಿಯ ಹಿನ್ನೆಲೆಯಲ್ಲಿ ನ್ಯಾಯಾಲಯ ಜಾಮೀನು ನೀಡಿದರೆ ತಿರುಪತಿಗೆ ತೆರಳಿ ತಿಮ್ಮಪ್ಪನಿಗೆ ಕಿರುಬೆರಳು ಕತ್ತರಿಸಿ ಹುಂಡಿಗೆ ಹಾಕುವುದಾಗಿ ಹರಕೆ ಮಾಡಿಕೊಂಡಿದ್ದೆ. ಆದರಂತೆ ದೈವಕೃಪೆಯಿಂದ ಸೋನಿಯಾ ಹಾಗೂ ರಾಹುಲ್ ಗಾಂಧಿಗೆ ನ್ಯಾಯಾಲಯ ಜಾಮೀನು ನೀಡಿತು. ಇದಕ್ಕೆ ಕಾರಣ ತಿರುಪತಿ ತಿಮ್ಮಪ್ಪನೇ ಎಂದು ಭಾವಿಸಿ ನಾನು ತಿರುಪತಿಗೆ ತೆರಳಿ ಹರಕೆಯಂತೆ ಕಿರುಬೆರಳು ಕತ್ತರಿಸಿ ಹುಂಡಿಗೆ ಹಾಕಲು ನಿರ್ಧರಿಸಿದೆ. ಈ ವಿಷಯವನ್ನು ತಂದೆ-ತಾಯಿ, ಹೆಂಡತಿ ಹಾಗೂ ಸ್ನೇಹಿತರ ಬಳಿ ತಿಳಿಸಿದರೆ ಅವರೆಲ್ಲಾ ಬೇಡವೇ ಬೇಡ ಎಂದು ಹೇಳುತ್ತಾರೆ ಎಂದು ನನಗೆ ಗೊತ್ತಿತ್ತು. ಅಲ್ಲದೆ ನಾನು ಅಪ್ಪಟ ಅಂಬರೀಶ್ ಅಭಿಮಾನಿ. ಇಂಡುವಾಳು ಸಚ್ಚಿದಾನಂದ ನನ್ನ ರಾಜಕೀಯ ಗುರು. ಅವರಿಗೂ ಈ ವಿಚಾರ ತಿಳಿಸಿದರೆ ಬೇಡವೆನ್ನುತ್ತಾರೆಂಬ ಹಿನ್ನೆಲೆಯಲ್ಲಿ ನಾನೊಬ್ಬನೆ ತಿರುಪತಿಗೆ ತೆರಳಿದೆ. ಅಲ್ಲಿನ ಲಾಡ್ಜ್ ಒಂದನ್ನು ಬಾಡಿಗೆ ಪಡೆದು ಬೆರಳು ಕತ್ತರಿಸಿಕೊಂಡೆ. ನಂತರ ನಾನು ಪ್ರಾಥಮಿಕ ಚಿಕಿತ್ಸೆ ಮಾಡಿಕೊಂಡು ಸಮೀಪದ ಆಸ್ಪತ್ರೆಗೆ ತೆರಳಿ ಆಕಸ್ಮಿಕವಾಗಿ ಎಕ್ಸಿಟ್ ಫ್ಯಾನ್‌ಗೆ ಕೈಸಿಲುಕಿ ಬೆರಳು ಕಟ್ ಆಗಿದೆ ಎಂದು ವೈದ್ಯರ ಬಳಿ ಹೇಳಿದೆ. ಆದಕ್ಕೆ ಅವರು ಕಟ್ ಆದ ಬೆರಳು ಕೊಡಿ ಶಸ್ತ್ರಚಿಕಿತ್ಸೆ ಮಾಡುತ್ತೇವೆಂದು ಕೇಳಿದರು. ನಾನು ಕತ್ತಲಲ್ಲಿ ಬೆರಳು ಪತ್ತೆಯಾಗಲಿಲ್ಲ ಎಂದು ಸುಳ್ಳು ಹೇಳಿ ಚಿಕಿತ್ಸೆ ಪಡೆದೆ. ಕತ್ತರಿಸಿದ ಕಿರುಬೆರಳನ್ನು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ಮಾರನೇ ದಿನ ತಿರುಪತಿ ತಿಮ್ಮಪ್ಪನ ಸನ್ನಿಧಿಗೆ ತೆರಳಿದೆ. ಅಲ್ಲಿದ್ದ ಹುಂಡಿಯೊಂದಕ್ಕೆ ನನ್ನ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಕಿರುಬೆರಳು ಅರ್ಪಿಸಿದ್ದಕ್ಕೆ ಕಾರಣ ಎಲ್ಲವನ್ನು ಬರೆದು ರಾಮನಗರಕ್ಕೆ ವಾಪಸ್ ಬಂದೆ" ಎಂದು ಸುರೇಶ್ ಹೇಳುತ್ತಾನೆ. ಬಂದನಂತರ ಈ ವಿಷಯವನ್ನು ತನ್ನ ಗುರು ಇಂಡುವಾಳು ಸಚ್ಚಿದಾನಂದರಿಗೆ ತಿಳಿಸಿದನಂತೆ. ಅವರು ಏಕೆ ಹೀಗೆ ಮಾಡಿದೆ ಎಂದು ಕೇಳಿದರಂತೆ. ಬಳಿಕ ಈ ವಿಷಯ ಮಾಧ್ಯಮಗಳಿಗೆ ಗೊತ್ತಾಯಿತು. ಮಾಧ್ಯಮಗಳು ಈತನನ್ನು ಕೈಬೆರಳು ಕತ್ತರಿಸಿ ಹುಂಡಿಗೆ ಹಾಕಿದ್ದರ ಬಗ್ಗೆ ಕೇಳಿದಾಗ ಸಚ್ಚಿ ಅಣ್ಣ ಹೇಳಿದರೆ ಮಾತ್ರ ಮಾಧ್ಯಮಗಳ ಮುಂದೆ ಬರುವುದಾಗಿ ಹೇಳಿದ್ದಾನೆ. ನಂತರ ಮಾಧ್ಯಮ ಮಿತ್ರರು ಸಚ್ಚಿದಾನಂದನ ಮೂಲಕ ಸುರೇಶ್‌ನನ್ನು ಭೇಟಿ ಮಾಡಿ ವಿಷಯವನ್ನು ಬಿತ್ತರಿಸಿದ್ದಾರೆ.

ಯಾವಾಗ ಮಾಧ್ಯಮಗಳಲ್ಲಿ ಸುರೇಶನ ಇಂಟರ್‌ವ್ಯೂ ಬಂತೋ ಮಂಡ್ಯ ಹಾಗೂ

ಮಂಗಳೂರು: ಭಯಾನಕ ಭಜರಂಗಿಗಳ ಭದ್ರತೆ ಬಿಸ್ನೆಸ್!




ಶರಣ್

ಅವಿಭಜಿತ ದಕ್ಷಿಣ ಕನ್ನಡದಲ್ಲಿ ಸಂಘಪರಿವಾರ ಪ್ರಾಯೋಗಿಸುತ್ತಿರುವ ಪಾತಕ ಹಿಂದೂತ್ವದ ತರಹೇವಾರಿ ವರಸೆಗಳಿಗೆ ಕಮರ್ಷಿಯಲ್ ಕಲರ್ ಬಂದುಬಿಟ್ಟಿದೆ. ಕೇಸರಿ ಕರಾಮತ್ತುಗಾರರು ಹಿಂದೂ ಸಂಸ್ಕೃತಿ-ಶೀಲ-ಧರ್ಮರಕ್ಷಣೆ ಸೋಗಿನಡಿಯಲ್ಲಿ ದುಡ್ಡು ದೋಚುವ, ಶೀಟೆ ತೀರಿಸಿಕೊಳ್ಳುವ ಮತ್ತು ರಾಜಕೀಯ ಸ್ಥಾನ-ಮಾನಕ್ಕೆ ಏರುವ ಹಿಡನ್ ಅಜೆಂಡಾ ಅಡಗಿಸಿಟ್ಟುಕೊಂಡಿರುವುದು ಬಹಿರಂಗ ರಹಸ್ಯ! ಭಜರಂಗ ದಳ ಎಂಬ ವಿಶ್ವ ಹಿಂದೂ ಪರಿಷತ್ತಿನ ಅತ್ಯುಗ್ರವಾದಿಗಳ ಗ್ಯಾಂಗ್ ಮಂಗಳೂರಲ್ಲಿ ಗೋರಕ್ಷಣೆ, ಹಿಂದೂ ಹೆಂಗಸರ ಶೀಲ ಸಂರಕ್ಷಣೆ ಮುಂದೊಡ್ಡಿ ಔದ್ಯಮಿಕ ಉನ್ನತಿ ಸಾಧಿಸುತ್ತಿರುವುದು ಭೀಭತ್ಸವಾಗಿದೆ...

ಭಜರಂಗಿ ಭೂಪ ಶರಣ ಪಂಪ್‌ವೆಲ್ ಬರ್ಬರ ಕೋಮು ಕಾರ್ಯಾಚರಣೆಯಿಂದ ಇಡೀ ಕರಾವಳಿಗೆ ಪರಿಚಿತನಾಗಿರುವಾತ. ಮಂಗಳೂರಿನ ಸುತ್ತಮುತ್ತಲಿನ ಅನೈತಿಕ ಪೊಲೀಸ್‌ಗಿರಿಯ ಸೂತ್ರಧಾರ ಈತ. ಕೆಂಪು ಕುಂಕುಮ ಮತ್ತು ಕೇಸರಿ ಶಾಲಿನ ಪುಂಡರ ಕಟ್ಟಿಕೊಂಡು ಈತ ಬೀದಿಗಿಳಿದನೆಂದರೆ ಅನಾಹುತ ಗ್ಯಾರಂಟಿ! 2005ರಲ್ಲಿ ಮಂಗಳೂರಿನ ಪಂಪ್‌ವೆಲ್ ಪ್ರದೇಶದಲ್ಲಿ ಬೀದಿ ಪುಂಡಾಟ ಮಾಡುತ್ತ ಅಂಡಲೆಯುತ್ತಿದ್ದ ಶರಣ್ ಈಗ ದಕ್ಷಿಣ ಕರ್ನಾಟಕ ಭಜರಂಗ ದಳದ ಪ್ರಾಂತ ಸಂಯೋಜಕನೆಂಬ ಹುದ್ದೆ ಹೊಂದಿದ್ದಾನೆ. ಈ ಹತ್ತು ವರ್ಷದಲ್ಲಿ ಶರಣ್ ಶರವೇಗದಲ್ಲಿ ಹಿಂದೂತ್ವದ 'ಹರಿಕಾರ'ನಾಗಿ ಬೆಳೆದಿದ್ದಾನೆ. ಹಿಂದೂತ್ವವನ್ನೇ ಬಂಡವಾಳ ಮಾಡಿಕೊಂಡು ಸ್ಪರ್ಧಾಶೀಲ ಉದ್ಯಮಿಯಾಗಿ ಅವತರಿಸಿದ್ದಾನೆ.

ಶರಣ್‌ನ ಹಿಂದೂ ಸೇನಾನಿಗಳು ಹಿಂದೂತ್ವ ಉದ್ಯಮದ ಬೇಡಿಕೆ ಮತ್ತು ಪೂರೈಕೆ ನಿಯಮ ಕರಾರುವಾಕ್ಕಾಗಿ ಪಾಲಿಸುತ್ತಿದ್ದಾರೆ. ಕಳೆದೊಂದು ದಶಕದಿಂದ ಮಂಗಳೂರು ಪ್ರದೇಶದಲ್ಲಿ ಸಂಘಪರಿವಾರ ಹುಟ್ಟುಹಾಕಿರುವ ಅಭದ್ರತೆ ಸನ್ನಿವೇಶ ಬಳಸಿಕೊಂಡು ಶರಣ್ ಸೆಕ್ಯೂರಿಟಿ ಉದ್ಯಮ ಯಶಸ್ವಿಯಾಗಿ ನಡೆಸುತ್ತಿದ್ದಾನೆ. 'ಈಶ್ವರಿ ಮ್ಯಾನ್‌ಪವರ್ ಸೊಲ್ಯೂಷನ್ ಲಿಮಿಟೆಡ್' ಎಂಬ ಹೆಸರಿನ ಈ ಸೆಕ್ಯೂರಿಟಿ ಕಂಪನಿ ಮೊದಲು ಅಂಗಡಿ ಮುಂಗಟ್ಟು ವಸತಿಪ್ರದೇಶದಲ್ಲಿ ಭಯ-ಅಭದ್ರತೆ ಸೃಷ್ಟಿಸುತ್ತದೆ. ನಂತರ ಸಾರ್ವಜನಿಕ ಸ್ಥಳಗಳಲ್ಲಿ ಭದ್ರತೆ ಒದಗಿಸಲು ಪಹರೇಗಾರರಂತೆ



ನಟಿಸುತ್ತದೆ. ಅಲ್ಪಸಂಖ್ಯಾತರ ಅಂಗಡಿ-ಉದ್ಯಮ-ಮನೆ-ಆಸ್ತಿ ರಕ್ಷಿಸುವ ಭದ್ರತಾ ಏಜೆನ್ಸಿಯಂತೆ ತೋರಿಸಿಕೊಳ್ಳುತ್ತದೆ ಶರಣ್ ನಿರ್ದೇಶಕತ್ವದ ಈಶ್ವರಿ ಮ್ಯಾನ್‌ಪವರ್ ಕಂಪನಿ!

ಹಿಂದೂತ್ವ ರಾಜಕಾರಣವನ್ನು ಉದ್ಯಮರಂಗದಲ್ಲಿ ಶರಣ್ ಪಂಪ್‌ವೆಲ್‌ನ ಭಜರಂಗಿ ತಂಡ ಹದವಾಗಿ ಬೆರೆಸಿ 'ದಂಧೆ' ನಡೆಸುತ್ತಿದೆ. ಆತನ ಕಂಪನಿಯಲ್ಲಿ ಇರುವ ಭದ್ರತಾ ಸಿಬ್ಬಂದಿ, ಮೇಲ್ವಿಚಾರಕರೆಲ್ಲರೂ ಪಳಗಿದ ಭಜರಂಗಿ ಪಂಟರ್‌ಗಳೇ. ತನ್ನ ಕಂಪನಿಯಲ್ಲಿ ಮುಸ್ಲಿಮರೂ ಕೆಲಸಕ್ಕಿದ್ದಾರೆಂದು ಕಡು ಮತಾಂಧ ಶರಣ್ ಹೇಳುವುದೇ ದೊಡ್ಡ ಬೋಗಸ್ ಜೋಕು! ಮಂಗಳೂರು ವಿಭಾಗದ ಭಜರಂಗದಳದ ಸಂಯೋಜಕನಾಗಿ ನೇಮಕವಾದಾಗ ಈ ಉದ್ಯಮ ಶರಣ್ ಶುರು ಹಚ್ಚಿಕೊಂಡಿದ್ದ. ಈಗದು ಭರ್ಜರಿಯಾಗಿ ಬೆಳೆದಿದೆ. ಮುಸ್ಲಿಮ್, ಕ್ರಿಶ್ಚಿಯನ್ ವರ್ತಕರಿಗಂತೂ ಈ ಈಶ್ವರಿ ಸೆಕ್ಯೂರಿಟಿ ಗಾರ್ಡ್‌ಗಳ ನೇಮಿಸಿಕೊಳ್ಳದಿದ್ದರೆ ಉಳಿಗಾಲ ಇಲ್ಲವೆಂಬ ಸಂದೇಶ ಶರಣ್ ಟೋಳಿ ಪರೋಕ್ಷವಾಗಿ ಮನದಟ್ಟು ಮಾಡಿದೆ.

ಹೀಗಾಗಿ ಅಲ್ಪಸಂಖ್ಯಾತ ಅಂಗಡಿಕಾರರು, ಉದ್ಯಮಿಗಳು ಅನಿವಾರ್ಯವಾಗಿ ಶರಣ್‌ನ ಸೆಕ್ಯೂರಿಟಿ ಏಜೆನ್ಸ್‌ಗೆ ತಮ್ಮ ದಂಧೆಯ ಭದ್ರತೆ ಹೊಣೆ ನೀಡಿದ್ದಾರೆ. ಭಜರಂಗಿಗಳಿಗೇ ಭದ್ರತೆ ಗುತ್ತಿಗೆ ನೀಡಿದರೆ ಹಿಂದೂತ್ವದ ಹಿಂಸಾತ್ಮಕ ಪ್ರಯೋಗ ತಮ್ಮ ಮೇಲಾಗುವುದು ತಪ್ಪುತ್ತದೆಂದು ಅಲ್ಪಸಂಖ್ಯಾತ ಉದ್ಯಮಿಗಳು ಅರ್ಥಮಾಡಿಕೊಂಡಿದ್ದಾರೆ. ಅಂದರೆ, ಈ 'ಅರ್ಥ' ಶರಣ್‌ನ ರೌಡಿ ಪಡೆ ಅಲ್ಪಸಂಖ್ಯಾತ ಬಿಸ್ನೆಸ್‌ದಾರರಿಗೆ ಮಾಡಿಸಿದೆ. ಮಂಗಳೂರಿನ ಆಯಕಟ್ಟಿ ವ್ಯವಹಾರ ಕೇಂದ್ರಗಳಾದ ಸಿಟಿ ಸೆಂಟರ್, ಫೋರಮ್ ಫಿಜಾ, ಬಿಗ್‌ಬಜಾರ್ ಮುಂತಾದ ಮಾಲ್‌ಗಳಲ್ಲಿ ಶರಣ್‌ನ ಈಶ್ವರಿ ಸೆಕ್ಯೂರಿಟಿ ಏಜೆನ್ಸಿಯದೇ ಭದ್ರತಾ ಗುತ್ತೇದಾರಿಕೆ! ಇದರ ಜತೆಗೇ ಹಲವು ಅಂಗಡಿ ಮತ್ತು ವಸತಿ ಅಪಾರ್ಟ್‌ಮೆಂಟ್‌ಗಳಲ್ಲೂ ಶರಣ್ ಸೈನ್ಯ ಕಾವಲು ನಿಂತಿದೆ. ಅಷ್ಟು ಯಶಸ್ವಿಯಾಗಿ ಈ ಕೇಸರಿ ಶಾಲಿನ ತಂಡ ಉದ್ಯಮರಂಗದಲ್ಲಿ ಭಯದ ವಾತಾವರಣ ಸೃಷ್ಟಿಸಿದೆ. ಅದರ ದುರ್ಲಾಭ ಪಡೆದು ದೋಚಾ ದಂಧೆ ನಡೆಸುತ್ತಿದೆ. ಇದೊಂಥರಾ ಕೈಗಾರಿಕೆ, ವಾಸ್ತವ್ಯದ ಏರಿಯಾಗಳ ಕೇಸರೀಕರಣ. ಹಿಂದೂತ್ವ ಎಂಬುದು ಬಿಗ್ ಬಂಡವಾಳದ ಬಿಸ್ನೆಸ್ ಆಗಿರುವುದಕ್ಕೆ ಜೀವಂತ ನಿದರ್ಶನ!!


ಬೆರಳನ್ನು ಕತ್ತರಿಸಿಕೊಂಡಿರುವ ಸುರೇಶ್

ರಾಮನಗರದಲ್ಲಿ ಈತನ ವಿಷಯ ಸಾಕಷ್ಟು ಚರ್ಚೆಗೊಳಗಾಗಿದೆ. ರಾಜ್ಯ ಕಾಂಗ್ರೆಸ್ ನಾಯಕರು ಕೂಡ ಯಾರಪ್ಪ ಅವನು ಮಂಡ್ಯದ ಏಕಲವ್ಯ ಎಂದೆಲ್ಲಾ ಕುತೂಹಲದಿಂದ ಮಂಡ್ಯದತ್ತ ನೋಡಿದ್ದಾರೆ. ಈತನ ಗುರು ಸಚ್ಚಿದಾನಂದರಿಗೆ ಸಾಕಷ್ಟು ಕಾಂಗ್ರೆಸ್ಸಿಗರು ಫೋನ್ ಮಾಡಿ ವಿಚಾರಿಸಿದ್ದಾರೆ. ಈ ವಿಷಯ ಸಚಿವ ಅಂಬರೀಶ್‌ಗೂ ಗೊತ್ತಾಗಿ ಅವರು ಮಂಡ್ಯಕ್ಕೆ ಬಂದಾಗ ಸುರೇಶನನ್ನು ಭೇಟಿ ಮಾಡಿ ಈ ರೀತಿ ಹುಚ್ಚು ಅಭಿಮಾನ ತೋರಿಸಿದ್ದಕ್ಕೆ ಗದರಿ ಆರೋಗ್ಯ ವಿಚಾರಿಸಿದ್ದಾರೆ.

ಯಾವಾಗ ಮಾಧ್ಯಮಗಳಲ್ಲಿ ಏಕಲವ್ಯ ಸುರೇಶನ ಸುದ್ದಿ ಬಿತ್ತರವಾಯಿತೋ ಎಚ್ಚೆತ್ತ ತಿರುಪತಿ ತಿರುಮಲ ದೇವಸ್ಥಾನ ಟ್ರಸ್ಟ್ (ಟಿಟಿಡಿ) ಈ ರೀತಿ ಯಾರೂ ಬೆರಳು ಕತ್ತರಿಸಿ ಹುಂಡಿಗೆ ಹಾಕಿಲ್ಲ, ಇದರಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಇದಾದನಂತರ ಮಾಧ್ಯಮ ಮಿತ್ರರು ತಿರುಪತಿ ದೇವಸ್ಥಾನ ಟ್ರಸ್ಟ್ ಹೇಳಿಕೆಯನ್ನು ಸುರೇಶನ ಗಮನಕ್ಕೆ ತಂದಾಗ ಆತ, ತಾನು ಕೈಬೆರಳು ಕತ್ತರಿಸಿಕೊಂಡ ಫೋಟೋ ಹಾಗೂ ತಿರುಪತಿಗೆ ತೆರಳಿರುವ ಬಗ್ಗೆ ಫೋಟೋ ಸಾಕ್ಷಿಗಳನ್ನು ಕೊಟ್ಟಿದ್ದಾನೆ. ಅಲ್ಲದೆ "ನಾನು ತಿಮ್ಮಪ್ಪನ ಹುಂಡಿಗೆ ಕಿರುಬೆರಳು ಹಾಕಿದ್ದು ಸತ್ಯ, ಬೇಕಾದರೆ ಸಿಸಿ ಟಿವಿ ಕ್ಯಾಮೆರಾ ವೀಕ್ಷಿಸಿ" ಎಂದು ಹೇಳುತ್ತಾನೆ. ಸುರೇಶನ ಹೇಳಿಕೆ ನೋಡಿದಾಗ ಒಮ್ಮೊಮ್ಮೆ ಗೊಂದಲ ಮೂಡುತ್ತದೆ. ಈ ಹಿನ್ನೆಲೆಯಲ್ಲಿ ಟಿಟಿಡಿ ಹೇಳುತ್ತಿರುವುದೋ ಸತ್ಯವೋ ಅಥವಾ ಸಚ್ಚಿ ಶಿಷ್ಯ ಸುರೇಶ್ ಹೇಳುತ್ತಿರುವುದು ಸತ್ಯವೋ ಎಂಬ ಬಗ್ಗೆ ಜನರಲ್ಲಿ ಜಿಜ್ಞಾಸೆ ಮೂಡಿದೆ. ಇದರಲ್ಲಿ ಯಾವುದು ಸತ್ಯ, ಯಾರದ್ದು ಸುಳ್ಳು ಎಂಬುದನ್ನು ಪೊಲೀಸರೇ ತನಿಖೆ ಹೇಳಬೇಕಿದೆ.

ಒಟ್ಟಿನಲ್ಲಿ ಮಂಡ್ಯ-ರಾಮನಗರ ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರ ಮಧ್ಯೆ ಆಧುನಿಕ ಏಕಲವ್ಯ ಸುರೇಶ್ ವಿಷಯ ಇನ್ನೂ ಚರ್ಚೆಯಾಗುತ್ತಲೇ ಇದೆ.

■ ವರದಿಗಾರ

ಮಂಗಳೂರು ನಗರದ ಲಾಲ್‌ಬಾಗ್‌ನ ಬಿಗ್ ಬಜಾರ್, ಪಾಂಡೇಶ್ವರದ ಫೋರಮ್ ಫಿಜಾ, ಕೆ.ಎಸ್. ರಾವ್ ರಸ್ತೆಯ ಬೃಹತ್ ಮಾಲ್ ಸಿಟಿ ಸೆಂಟರ್ ಸದಾ ಜನಜಂಗುಳಿಯಿಂದ ಗಿಜಿಗುಡುವ ಜಾಗಗಳು. ಸಿಟಿಸೆಂಟರ್ ಹಾಗು ಫೋರಮ್ ಫಿಜಾದಲ್ಲಿ ಹೆಚ್ಚಿನ ಅಂಗಡಿ ನಡೆಸುವವರು ಮುಸ್ಲಿಮ್ ಸಮುದಾಯದವರು. ಇವರಿಗೆಲ್ಲ ಭಜರಂಗಿ ಶರಣ್‌ನ ಸಂಪ್ರೀತಗೊಳಿಸದೇ ಗತ್ಯಂತರವೇ ಇಲ್ಲ! ತನ್ನ ಗ್ಯಾಂಗಿಗೆ ಕಪ್ಪ ಕೊಡದ ಸಾಬರ ಅಂಗಡಿ ಮಳಿಗೆ, ವಸತಿ ಸಮುಚ್ಚಯದ ಮೇಲೆ ಶರಣ್ ದಾಳಿ ಮಾಡಿಸದೇ ಬಿಡಲಾರ. ಹಿಂದೂತ್ವದ ಒಂದೇ ಒಂದು ದಾಳಿ ಸಾಕು, ಅಮಾಯಕ ಸಾಬರ ಉದ್ಯಮ ಮುಳುಗಲು. ಹೀಗಾಗಿ ಶರಣ್‌ನ ಸೆಕ್ಯುರಿಟಿ ಉದ್ಯಮ ಸನಾಥ್ಯವಾಗಿ ಕೊಬ್ಬಿದೆ. ಆತನ ಹಿಂದೂತ್ವದ ಪಕ್ಷಸಂಕುಲವೂ ಆರ್ಥಿಕವಾಗಿ ಸಬಲವಾಗಿದೆ.

ಇಂಥದೇ ಸುಖ ಅನೈತಿಕ ಪೊಲೀಸ್‌ಗಿರಿಯಲ್ಲೂ ಭಜರಂಗಿ ಭಂಡರು ಅನುಭವಿಸುತ್ತಿದ್ದಾರೆ. ಹಿಂದೂ ಹುಡುಗಿಯರ ಶೀಲ ಕಾಪಾಡುವ ಅವರಿಗೆ ಸಂಸ್ಕೃತಿ ಉಳಿಸುವ ನೆಪದಲ್ಲಿ ಅಸಹ್ಯವಾಗಿ ವರ್ತಿಸಿದ ಅನೇಕ ದರ್ಶನಗಳಿವೆ. ಹಿಂದೂ ಹುಡುಗಿಯರ ಮೈ-ಕೈ ಮುಟ್ಟಿ ಕೆಟ್ಟದಾಗಿ ಕೇಕೆ ಹಾಕಿದ್ದೂ ಇದೆ. ಹೋಮ್‌ಸ್ಟೇ ದಾಳಿ ಹೊತ್ತಲ್ಲಿ ಅಸಹಾಯಕ ಹುಡುಗಿಯರ ಬಟ್ಟೆ ಬಿಚ್ಚಿಸಿದ್ದು ಭಜರಂಗಿಗಳ ವಿಕೃತ ಹಿಂದೂತ್ವವನ್ನು ಜಗಜ್ಜಾಹೀರುಮಾಡಿತ್ತು! ದುರಂತ ಅಂದರೆ ಈ ಮತಾಂಧ ಕ್ರಿಮಿನಲ್‌ಗಳ ಮಟ್ಟಹಾಕಲು ಇದ್ದು ಸರ್ಕಾರಕ್ಕೂ ಸಾಧ್ಯವಾಗಿಲ್ಲ. ಈ ಭಜರಂಗಿ ಶಾಸಕರ ಪಾಪಿ ಗುರು ಕಲ್ಲಡ್ಕ ಭಟ್ಟ, ಸೇಫಾಗಿರುವಷ್ಟು ಈ ಶರಣ್ ಪಂಪ್‌ವೆಲ್‌ನಂಥ ಹಿಂದೂತ್ವದ ಉದ್ಯಮಪತಿಗಳೂ ಸುರಕ್ಷಿತ! ಗೃಹಮಂತ್ರಿ ಪರಮ್‌ಗೆ ಇದು ಗೊತ್ತಾ?

■ ವರದಿಗಾರ

ಪರ್ಯಾಯದಿಂದ ಸುವರ್ಣಯುಗ ಆರಂಭವಾಗುತ್ತೆ

ಕೊಟ್ಟ ಮಾತಿಗೆ ತಪ್ಪಲಾರೆನು ಎಂಬ ಗೋವಿನ ಗೀತೆ ಹಾಡಿನಂತೆ ಕಾಂಗ್ರೆಸ್‌ಗಳು ಆಂಧ್ರವನ್ನು ಹರಿದು ಇಬ್ಭಾಗ ಮಾಡಿ, ಒಂದನ್ನು ಚಂದ್ರಶೇಖರನಿಗೂ, ಇನ್ನೊಂದನ್ನು ಚಂದ್ರಬಾಬು ನಾಯ್ಡುಗೂ ಕೊಟ್ಟು ತಾವು ಬರಿಗೈಯಾಗಿದ್ದು ಈಗ ಇತಿಹಾಸ. ಆದರೆ ಗೋಟಡಕೆಯ ಸಗಟು ವ್ಯಾಪಾರಿಯಂತೆ ಕಾಣುವ ಚಂದ್ರಶೇಖರನೆಂಬ ಮೂರ್ಖ ನಮ್ಮ ಶೃಂಗೇರಿವರೆಗೂ ಬಂದು ಜಗದ್ಗುರುಗಳನ್ನು ಮಾತನಾಡಿಸಿದನಂತಲ್ಲಾ. ಜಗದ್ಗುರುಗಳು ಏನು ಹೇಳಿದರೊ ಏನೋ, ಕೂಡಲೇ ತೆಲಂಗಾಣಕ್ಕೆ ಹೋಗಿ ಏಳೆಂಟು ಕೋಟಿ ರೂಪಾಯಿಗಳ ಯಾಗವನ್ನೇ ಕೈಗೊಂಡನಲ್ಲಾ. ಆದರೇನು, ಅಗ್ನಿ ಮುನಿದ ಕಾರಣಕ್ಕೆ ಇಡೀ ಯಾಗ ಮಂಟಪವೇ ಉರಿದುಹೋಗಿ ಮೂರ್ಖನ ಮೂರ್ಖ ಸಾಹಸಕ್ಕೆ ತಕ್ಕ ಶಾಸ್ತಿಯಾಯ್ತಂತಲ್ಲಾ. ತೆಲಂಗಾಣ ರಾಜ್ಯ ರಚನೆಯಾಗಿದ್ದು, ಆ ಪ್ರದೇಶದ ಅಜ್ಞಾನ, ಬಡತನ, ನಿರ್ಗತಿಕತನ ನೀಗಲೋಸ್ಕರ. ಆದರೇನು, ಚಂದ್ರಶೇಖರನಿಂದ ಕಾಂಗ್ರೆಸ್ ಜೊತೆಗೆ ತೆಲಂಗಾಣವೂ ಮೋಸಹೋಗಿತ್ತು. ಈ ನಡುವೆ ಶೃಂಗೇರಿಗೆ ಬಂದುಹೋದ ಯಜ್ಞ ಪಶುವಿನ ಸುದ್ದಿ ಕೇಳಿದ ಚಂದ್ರಬಾಬು ನಾಯ್ಡು ತಾನೂ ಕೂಡ ಉಡುಪಿಯ ಪೇಜಾವರರ ಪರ್ಯಾಯಕ್ಕೆ ಬಂದು ಕೂತಿದ್ದರಲ್ಲಾ. ಇವರೆಲ್ಲರಿಗಿಂತಲೂ ಮುಖ್ಯವಾಗಿ ಉಮಾ ಭಾರತಿ ಎಂಬ ಸಾಧ್ವಿ ಬಂದಿದ್ದು ಪೇಜಾವರರನ್ನೇ ಪುಳಕಗೊಳಿಸಿತಂತಲ್ಲಾ. ಯಾಕೆಂದರೆ, ಉಮಾ ಭಾರತಿ ಬಿಜೆಪಿ ತೊರೆದು ಹೊರಟಾಗ ಆಕೆಗೆ ಭಗವದ್ಗೀತೆಯನ್ನು ಬೋಧಿಸಿ, ವಿರಾಟ್ ದರ್ಶನ ಮಾಡಿ, ಬಿಜೆಪಿ ವರ್ತುಲದಲ್ಲೇ ತಿರುಗುವಂತೆ ಮಾಡಿದವರೇ ಪೇಜಾವರ ಶ್ರೀಗಳಂತಲ್ಲಾ, ಥೂತ್ತೇರಿ!

* * *

ಪೇಜಾವರ ಶ್ರೀಯವರು ಪರ್ಯಾಯ ಪೀಠವನ್ನೇರಿದ್ದಾರೆ. ಈ ಸಾಮಾನ್ಯ ಘಟನೆ ಪತ್ರಿಕೆಗಳಿಗೆ ಪ್ರಜಾಪ್ರಭುತ್ವದ ಪೀಠವೇರಿದ ನಾಯಕನಿಗಿಂತಲೂ ಮಹತ್ವದ ಘಟನೆಯಾಗಿ ಸಂಭವಿಸಿದೆ. ಆದ್ದರಿಂದ ಪೇಜಾವರ ಹೂಸಿದ್ದು, ಕೆಮ್ಮಿ ಕ್ಯಾಕರಿಸಿದ್ದನ್ನೆಲ್ಲಾ ಬರೆದು ಇನ್ನ ಕರ್ನಾಟಕದ ಎಲ್ಲ ಸಮಸ್ಯೆಗಳು ಈ ಪರ್ಯಾಯ ಪೀಠದ ದೆಸೆಯಿಂದ ಕರಗಿಹೋಗುತ್ತವೆ ಎಂಬಂತೆ ಕೆರೆಯುತ್ತಿವೆ. ಈ ಸಂದರ್ಭದಲ್ಲಿ ನಾವು ಕನಿಷ್ಠ ಪೇಜಾವರರನ್ನು ಮಾತನಾಡಿಸಿ ಅಭಿನಂದಿಸದಿದ್ದರೇ ನಿತ್ಯ ನರಕಿಗಳಾಗಿ ಇಲ್ಲೇ ಉಳಿಯುವುದಾಗಿ ಯೋಚಿಸುತ್ತಾ ಭಯಗೊಂಡು ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಕೃಷ್ಣಾ ನೀ ಬೇಗನೆ ಬಾರೋ, ಬೇಗನೆ ಬಂದು ಮುಖವನ್ನು ತೋರೊ ಕೃಷ್ಣಾ..."

"ಹಲೋ ಯಾರು?"

"ನಾನು ಸ್ವಾಮೀಜಿ ಯಾಹು, ನಿಮ್ಮ ಅಭಿಮಾನಿ."

"ಸ್ವಲ್ಪ ಸಮಯ ಬಿಟ್ಟು ಮಾತನಾಡಿ."

"ಒಂದೇ ನಿಮಿಷ ಸ್ವಾಮೀಜಿ. ಮೂರೇ ಪ್ರಶ್ನೆ."

"ಕೇಳಿ."

"ತುಂಬ ಅಭಿನಂದನೆ ಸ್ವಾಮಿ. ಐದನೆ ಬಾರಿಗೆ ಪರ್ಯಾಯ ಏರೋದು ಇನ್ನಾರಿಗೂ ಸಾಧ್ಯವಿಲ್ಲ."

"ಹಾಗೆ ಹೇಳಲಿಕ್ಕೆ ಬರುವುದಿಲ್ಲ."

"ಇಲ್ಲ ಸ್ವಾಮಿ, ನಿಮಗೆ ಸಿಕ್ಕಿರೊ ಆರೋಗ್ಯ ಭಾಗ್ಯ ನಿಮ್ಮ ಯಾವ ಸ್ವಾಮಿಗಳಿಗೂ ಸಿಗಲ್ಲ, ಆದ್ರಿಂದ ಹೇಳಿದೆ. ನೀವು ಖಂಡಿತ ಕಳೆದ ಮತ್ತು ಈ ಶತಮಾನದ ಅದ್ಭುತ. ನಿಮ್ಮ ಪರ್ಯಾಯದಿಂದ ಸುವರ್ಣಯುಗವೇ ಉದ್ಘಾಟನೆಗೊಳ್ಳುತ್ತೆ."

"ತಮ್ಮ ಅಭಿಪ್ರಾಯಕ್ಕೆ ಯಂತ ಹೇಳುವುದು ಗೊತ್ತಾಗ್ತಯಿಲ್ಲ."

"ಈ ಪರ್ಯಾಯದ ಅವಧೀಲಿ ನಿಮ್ಮ ಕಾರ್ಯಕ್ರಮ ಏನು ಸ್ವಾಮಿ?"

"ವೃದ್ಧರಿಗೆ ಉಚಿತವಾಗಿ ವೃದ್ಧಾಶ್ರಮ ಮಾಡುತ್ತೇನೆ."

"ನಿಜವಾಗ್ಲು ಒಳ್ಳೆ ಕೆಲಸ ಸ್ವಾಮಿ. ಶ್ರೀಕೃಷ್ಣನೂ ವೃದ್ಧನಾಗಿ ಸತ್ತ, ಆಗಿನ ಕಾಲಕ್ಕೆ ವೃದ್ಧಾಶ್ರಮ ಇದ್ರೆ ಬಂದು ಸೇರತಿದ್ನೊ ಏನೊ."

"ಕೃಷ್ಣನ ಬಗ್ಗೆ ಹಾಗೆ ಹೇಳುವುದು ಬೇಡ."

"ಅವನು ಹುಷಾರಿಲ್ದೆ ಹಾಸಿಗೆ ಹಿಡಿದು ಮಲಗಿದ್ದು ಸುಳ್ಳ ಸ್ವಾಮಿ?"

"ಹಾಗೆ ಯಾರು ಹೇಳಿದ್ದು?"

"ನಿಮ್ಮ ಜನಾಂಗದ ಲೇಖಕ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಸ್ವಾಮಿ."

"ಅವರೇನು ನೋಡಿದ್ದರಾ? ಪೂರ್ವಗ್ರಹಪೀಡಿತರ ಮಾತನ್ನ ನಂಬಬೇಡಿ. ಕೃಷ್ಣ ದೇವರು."

"ಸಾರಿ ಸ್ವಾಮಿ. ದೇವರಿಗೆ ವಯಸ್ಸಾಗಲ್ಲ ಅಂತ ಗೊತ್ತಿರಲಿಲ್ಲ, ನೀವು ತೆರಯೋ ವೃದ್ಧರ ಆಶ್ರಮಕ್ಕೆ ನೀವೇ ಅಧ್ಯಕ್ಷರ?"

"ಅಧ್ಯಕ್ಷ, ಉಪಾಧ್ಯಕ್ಷ ಅಂತ ಇಲ್ಲ ಅಲ್ಲಿ."

"ವಯಸ್ಸಾದ ಮೇಲೆ ಅಂತ ಪದವಿಗೆ ಅರ್ಥವಿಲ್ಲ ಬಿಡಿ. ವೃದ್ಧರೆಲ್ಲಾ ವೃದ್ಧರು. ಅವರಿರುವ ಜಾಗ ವೃದ್ಧಾಶ್ರಮ. ಒಂದು ವಿಷಯ ಏನಂದ್ರೆ, ಅಲ್ಲಿ ಪೇಜಾವರ ಕೂಡ ಇರೋದರಿಂದ ಕರ್ನಾಟಕದ ಉಳಿದೆಲ್ಲಾ ವೃದ್ಧಾಶ್ರಮಕ್ಕಿಂತ ಅದು ಶ್ರೇಷ್ಠವಾದದ್ದು."


"ನಾನು ತೆರೆಯುವ ವೃದ್ಧಾಶ್ರಮದಲ್ಲಿ ನಾನು ಇರುತ್ತೇನೆ ಅಂತ ಭಾವಿಸುವುದು ಬೇಡ. ನಾನು ಪರ್ಯಾಯದಲ್ಲಿರುತ್ತೇನೆ."

"OK ಸ್ವಾಮಿ. ಇನ್ನೇನು ಕಾರ್ಯಕ್ರಮ ಇಟ್ಟುಗೊಂಡಿದ್ದೀರ್ರಿ?"

"ದುಶ್ಚಟಗಳನ್ನು ಬಿಡಿಸುತ್ತೇನೆ."

"ಬೇಗ ಅದೊಂದು ಕೆಲಸ ಮಾಡಿ ಸ್ವಾಮಿ. ಆ ದುಶ್ಚಟಗಳ ಪಟ್ಟಿಗೆ ಸ್ವಾಮೀಜಿಗಳು, ಜಗದ್ಗುರುಗಳು ಮತ್ತು ಮತಾಂಧರ ಭಾಷಣಗಳನ್ನು ಸೇರಿಸಿ. ಅವನ್ನು ನಿಲ್ಲಿಸಿ. ನಮ್ಮ ರಾಜ್ಯದಲ್ಲಿ ಸ್ವಾಮೀಜಿಗಳ ಭಾಷಣದ ದುಶ್ಚಟ ಜಾಸ್ತಿಯಾಗಿದೆ."

"ಭಾಷಣ ಮಾಡುವ ಹಕ್ಕು ಎಲ್ಲರಿಗೂ ಉಂಟು. ನಾವು ಅದನ್ನು ದುಶ್ಚಟ ಅನ್ನುವುದಿಲ್ಲ, ಅದೊಂದು ಶ್ರೇಷ್ಠ ಚಟ. ಬೀಡಿ, ಸಿಗರೇಟು, ಜರ್ದಾ, ಮದ್ಯಪಾನ,



ಪಾನ್‌ಪರಾಗು, ಗುಟುಕ ಇಂತ ಪದಾರ್ಥವನ್ನು ನಿಷೇಧಗೊಳಿಸಿ ಆ ಹಣವನ್ನು ಹುಂಡಿಗೆ ಹಾಕಿಸಿಕೊಳ್ಳುತ್ತೇವೆ."

"ಆ ಹುಂಡಿ ಹಣ ಏನು ಮಾಡ್ತೀರಿ ಸ್ವಾಮಿ?"

"ದುಶ್ಚಟಕ್ಕೆ ಬಲಿಯಾದವರಿಗೆ ಬಳಸುತ್ತೇವೆ."

"ಅಂತೂ ಎರಡೂ ಜೊತೇಲೆ ನಡೆಯುತ್ತೆ?"

"ಯಂತ ಹೇಳುವುದು ನೀವು?"

"ಇನ್ಯಾವ ಕಾರ್ಯಕ್ರಮ ಇದೆ?"

"ದುರ್ಬಲ ಕುಟುಂಬದ ಶಿಕ್ಷಣಕ್ಕಾಗಿ ವಸತಿಶಾಲೆ ತೆರೆಯುತ್ತೇವೆ."

"ನಿಮ್ಮ ಜನಾಂಗದ ದುರ್ಬಲ ಕುಟುಂಬಗಳಿಗಾ?"

"ಹೊರ ರಾಜ್ಯದಲ್ಲಿರುವ ದುರ್ಬಲರ ಕುಟುಂಬದ ಮಕ್ಕಳಿಗೂ ನಾವು ಶಿಕ್ಷಣ ಕೊಡುವುದುಂಟು."

"ಮುದ್ರಸಾಗಳ ತರನಾ?"

"ಇಲ್ಲಾ, ನಾವು ಕೊಡುವ ಶಿಕ್ಷಣದಲ್ಲಿ ದೇಶಭಕ್ತಿ ಬೆಳೆಸುತ್ತೇವೆ."

"ಬೆಳೆಸಿ?"

"ಬೆಳೆಸಿ ಸತ್‌ಪ್ರಜೆಗಳನ್ನಾಗಿ ಮಾಡುತ್ತೇವೆ."

"ಒಳ್ಳೆದು ಸ್ವಾಮಿ. ಸತ್‌ಪ್ರಜೆಗಳ ಕೊರತೆ ತುಂಬಾ ಇದೆ, ಅದೂ ನಿಮ್ಮ ಜನಾಂಗದಲ್ಲಿ."

"ನೀವು ಯಾವ ಜನಾಂಗ?"

"ದಲಿತರು."

"ದಲಿತರಿಗೂ ನಮ್ಮಲ್ಲಿ ಕಾರ್ಯಕ್ರಮ ಉಂಟು."

"ನಿಮ್ಮ ನಿರಂತರ ಕಾರ್ಯಕ್ರಮದಿಂದ ದಲಿತ್ರು ಅಲ್ಲೇ ಅವರೆ ಸ್ವಾಮಿ."

"ಅದಕ್ಕೆ ಅವರಿದ್ದಲ್ಲಿಗೇ ನಾವು ಹೋಗಿಬಂದದ್ದು."

"ನಿಜಕ್ಕೂ ಆ ಕಾರ್ಯಕ್ರಮ ಈ ದೇಶ ಕಂಡರಿಯದ ಕಾರ್ಯಕ್ರಮ. ಅನಂತಮೂರ್ತಿಯವರ ತಾಯಿನೇ ಬದಲಾದ್ರಂತೆ. ಇನ್ನ ನಮ್ಮ ತಾಯಿಯಂತೂ ನಿಮ್ಮ ಫೋಟೋ ನೋಡಿದಾಗೆಲ್ಲಾ ಅಳತಳೆ ಸ್ವಾಮಿ."

"ಯಾಕೆ ಅಳುವುದು?"

"ನಿಮ್ಮ ನಾಮ ಅಳಿಸಿ, ಒಂದಂಗಿ ಚಡ್ಡಿ ಇಕ್ಕಿದ್ರೆ ಥೇಟ್ ನಮ್ಮಪ್ಪನಂಗೆ ಕಾಣ್ತೀರಿ ಸ್ವಾಮಿ. ನಮ್ಮವ್ವನಿಗೆ ನೋಡನಾ ಅಂದ್ರೆ ಅಪ್ಪನ ಫೋಟೋ ಇಲ್ಲ, ಅದ್ಕೆ ನಿಮ್ಮನ್ನು ನೋಡಿದಾಗೆಲ್ಲಾ ಅಳತಳೆ. ನೀವು ಒಪ್ಪೊಂಡಾದ್ರೆ ನಮ್ಮಪ್ಪನ ಆಕಾರದಲ್ಲಿ ಒಂದು ಫೋಟೋ ತೆಗೆದು ಕೊಡನಾ ಅಂತ ಇದ್ದಿನಿ ಸ್ವಾಮಿ."

"ನೋಡಿ, ಮನುಷ್ಯರಂತೆ ಮನುಷ್ಯರು ಇರುವುದು ಸಹಜ. ಅಷ್ಟು ಮಾತ್ರಕ್ಕೆ ನಾನು ನಿಮ್ಮ ಅಪೇಕ್ಷೆಯನ್ನು ಈಡೇರಿಸಲಾರೆ.. ಬೇಕಾದರೆ ಮಠಕ್ಕೆ ಒಮ್ಮೆ ನಿಮ್ಮ ತಾಯಿಯನ್ನು ಕರೆದುಕೊಂಡು ಬನ್ನಿ, ಆಶೀರ್ವಾದ ಮಾಡಿ ಕಳಿಸುವ."

ಥೂತ್ತೇರಿ

ಯಾಹೂ

"ಇನ್ಯಾವ ಕಾರ್ಯಕ್ರಮ ಇಟಗೊಂಡಿದ್ದಿರಿ."

"ಉಡುಪಿಗೆ ಬಂದವರಿಗೆಲ್ಲಾ ಒಂದೊಂದು ಗಿಡ ಕೊಟ್ಟು ನೆಟ್ಟು ಬೆಳೆಸಿ ಅಂತ ಹೇಳಿದ್ದೇವೆ."

"ಆ ಗಿಡಗಳಿಗೆ ಟ್ರೀಗಾರ್ಡ್ ಮಾಡಿ ನೀರಾಕೋರು ಯಾರು ಸ್ವಾಮಿ?"

"ಗಿಡ ತೆಕ್ಕೊಂಡು ಹೋದವರು ಮಾಡಬೇಕು."

"ಆ ಸಂಸ್ಕೃತಿನೆ ನಮ್ಮಲ್ಲಿಲ್ಲ, ಆಗ್ಲೆ ನೀವು ಕೊಟ್ಟ ಗಿಡ ಒಣಗ್ತಾ ಅವೆ."

"ಒಣಗಿದರೆ ಮತ್ತೆ ನೆಡಬೇಕು."

"ಒಳ್ಳೇದು ಸ್ವಾಮಿ, ಒಳ್ಳೆ ಮಾತೇಳಿದ್ರಿ, ಇತಿಹಾಸ ಕಂಡರಿಯದಂತ ಈ ಪರ್ಯಾಯಕ್ಕೆ ನಿಮ್ಮ ಎಲ್ಲ ಯತಿಗಳು ಬಂದಿದ್ರಾ ಸ್ವಾಮಿ?"

"ಹೌದು ಎಲ್ಲ ಬಂದಿದ್ದರು."

"ಯಾರೋ ಇಬ್ಬರು ಬಂದಿರಲಿಲ್ಲ?"

"ಬಾರದೆ ಇದ್ದರೂ ನಾವೆಲ್ಲ ಅಣ್ಣತಮ್ಮಂದಿರಂತಿದ್ದೇವೆ."

"ನಮ್ಮ ಸಂಸ್ಕೃತಿಲಿ ಅಣ್ಣತಮ್ಮಂದಿರು ಯಾವಾಗ್ಲೂ ಕಿತ್ತಾಡ್ತರಲ್ಲವೆ?"

"ಇರಬಹುದು. ನಾನಂತೂ ನಮ್ಮ ಯತಿಗಳಲ್ಲಿ ಲಕ್ಷ್ಮಣ, ಭರತನ ಗುಣ ನೋಡಿದ್ದೇನೆ."

"ಸುಗುಣೇಂದ್ರ ತೀರ್ಥರು ವಿದೇಶಕ್ಕೆ ಹೋಗಿಬಂದವ್ರುರೆ ಅಂತ ಆ ಸ್ವಾಮಿನೇ ದೂರ ಇಟ್ಟಿದ್ದಿರಲ್ಲಾ, ಇದ್ಯಾವ ಸೀಮೆ ಅಣ್ಣತಮ್ಮತನ?"

"ಆ ವಿಷಯ ಈಗ ಬೇಡ. ಎಲ್ಲ ಸುಸೂತ್ರವಾಗಿ ಕ್ರಮಬದ್ಧವಾಗಿ ನಡೆದಿದೆ."

"ಆದಮಾರು ವಿಶ್ವಪ್ರಿಯನೂ ದೂರವುಳಿದರಂತೆ. ಇದರ ರಹಸ್ಯ?"

"ನಾನು ಆಗಲೇ ಹೇಳಿದೆನಲ್ಲಾ, ಎಲ್ಲವೂ ಚೆನ್ನಾಗಿ ನಡೆದಿದೆ."

"ನಾನು ನೋಡಿದಂಗೆ ಮುಸ್ಲಿಂ, ಕ್ರಿಶ್ಚಿಯನ್ನರೂ ಬಂದಿದ್ರು ಸ್ವಾಮಿ. ಇನ್ನ ಮುಂದಾದ್ರು ನಿಮ್ಮ ಪರಿವಾರ ಅವರನ್ನ ಸಮಾನವಾಗಿ ನೋಡ್ತರಾ?"

"ನೋಡಿ, ಕ್ರಿಶ್ಚಿಯನ್ನರು, ಮುಸ್ಲಿಮರು ನಮ್ಮವರೆ. ಆದರೆ ಅವರ ಸ್ಥಾನಮಾನಕ್ಕೆ ಯೋಗ್ಯರಾಗಿ ನಡೆದುಕೊಳ್ಳಬೇಕು."

"ಅವರ ಸ್ಥಾನಮಾನ ಅಂದ್ರೆ ಅರ್ಥವಾಗಲಿಲ್ಲ?"

"ಅದು ಅವರಿಗೆ ಗೊತ್ತು. ನೀವು ಕೇಳುವುದು ಬೇಡ."

"ಪರ್ಯಾಯದ ದಿನಚರಿ ಏನು ಸ್ವಾಮಿ?"

"ಪೂಜೆ, ಮಂಗಳಾರತಿ, ಆಶೀರ್ವಚನ, ಅನ್ನ ಪೂಜೆ, ಬೃಂದಾವನ, ವೀಕ್ಷಣೆ, ಮಧ್ವಾಚಾರ್ಯರ ಪೂಜೆ... ಹೀಗೆ ಉಂಟು."

"ಮುಸುರಿ ಕೃಷ್ಣಮೂರ್ತಿ ಕಾರ್ಯಕ್ರಮದಂಗೆ ಕಾಣ್ತವಲ್ಲ ಸ್ವಾಮೀಜಿ?"

"ಯಂತ ಹೇಳಿದ್ದು ನೀವು? ಯಾವ ಮುಸುರಿ?"

" 'ಗುರು ಶಿಷ್ಯರು' ಅನ್ನೊ ಸಿನಿಮಾದಲ್ಲಿ ನಿಮ್ಮ ಅಷ್ಟಮಠದ ಯತಿ ತರದವನೊಬ್ಬ ಗುರುಗಳ ಮನಿಗೆ ಬರ್ತನೆ. ಆಗವ್ರುರು 'ತಮ್ಮ ದಿನನಿತ್ಯದ ಕಾರ್ಯಕ್ರಮ ಏನು ಆಚಾರ್ಯರೆ?' ಅಂತರೆ. ಅದಕ್ಕೆ ಆ ಯತಿ 'ಮುಂಜಾನೆ ಎದ್ದ ಕೂಡಲೇ ಸ್ನಾನ, ಸಂಧ್ಯಾವಂದನೆ, ಉಪಹಾರ, ನಂತರ ವಿಶ್ರಾಂತಿ, ಮಧ್ಯಾಹ್ನ ಭೋಜನ, ನಂತರ ಶಯನ. ಎಚ್ಚರವಾದರೆ ಒಂದಿಷ್ಟು ವಾಯುವಿಹಾರ. ರಾತ್ರಿ ಭೋಜನವನ್ನ ವರ್ಜಿಸಿರುವ ಕಾರಣಕ್ಕೆ ಊಟದಷ್ಟೇ ಫಲಾಹಾರ ಮತ್ತು ಒಂದು ತಂಬಿಗೆ ಕ್ಷೀರ. ನಂತರ ಶಯನ' ಅಂತನೆ ಸ್ವಾಮೀಜಿ. ಆತನ ದಿನಚರಿ ಕೇಳಿದಾಗ ನಿಮ್ಮ ಇಡೀ ಅಷ್ಟಮಠದವರ ದಿನಚರಿ ಕೇಳಿದಂಗಾಯ್ತು. ಇಂತಹ ಕಾರ್ಯಕ್ರಮಗಳ ಉದ್ಘಾಟನೆಗೆ ರಾಷ್ಟ್ರಮಟ್ಟದ ರಾಜಕಾರಣಿಗಳು, ರಾಜ್ಯಮಟ್ಟದ ಪಿಂಜರಾಪೋಲು ರಾಜಕಾರಣಿಗಳು ಬಂದಿದ್ದೂ ಅಲ್ಲದೆ ಒಂದು ಜನಾಂಗದ ಸ್ವಾಮೀಜಿಯನ್ನು ಇಡೀ ದೇಶದ ಜಗದ್ಗುರು ಅಂತ ಬರೀತಾಯಿರೋ ಬುದ್ಧಿಮಾಂದ್ಯ ಪತ್ರಕರ್ತರನ್ನು ನೋಡಿ, ಇನ್ನೂ ನಗತಾಯಿದ್ದಿನಿ ಸ್ವಾಮಿ. ಬೇಜಾರು ಮಾಡಿಕೊಬೇಡಿ ಸ್ವಾಮಿ. ಹಲೋ, ಹಲೋ, ಹಲೋ? ಥೂತ್ತೇರಿ!!!" ■

ದೇಶದಾದ್ಯಂತ ಪ್ರತಿಭಟನೆ



ರೋಹಿತ್ ವೇಮುಲ ಸಾವು ದೇಶದಾದ್ಯಂತ ವಿದ್ಯಾರ್ಥಿಗಳಲ್ಲಿ ಆಕ್ರೋಶವನ್ನು ಹುಟ್ಟುಹಾಕಿದೆ. ಅವರೆಲ್ಲ ಸಂಘ ಸಂಘಟನೆ ಎಂಬುದನ್ನೆಲ್ಲ ಬದಿಗಿಟ್ಟು ಬೀದಿಗಿಳಿಯುವಂತೆ ಮಾಡಿದೆ.










ಮುಷ್ಠಿಯಷ್ಟು ಆತ್ಮಗೌರವಕ್ಕಾಗಿ.....



"ಮೆರಿಟ್ಟಿನ ಮೆಟ್ಟು" ತೊಟ್ಟು
ನಾನೇ ಹಾಸಿದ ಕಾಂಕ್ರೀಟ್ ರಸ್ತೆಯ ಮೇಲೆ ಹರಿದಾಡಿದ ನಿಮ್ಮ ಕಾರು-ಬಾರುಗಳು,
ನನ್ನ ರಕ್ತವ ಕಾರಿದವಲ್ಲೋ.....
ನನ್ನ ಕಂದನ ಸಾವು ನಿಮಗೆ ನಾಯಿಕೂಗಾಯ್ತಲ್ಲೋ??
ಹರಿದ ನೆತ್ತರು ಮಳೆಯಲಿ ಕೊಚ್ಚಹೋಗುವ ವೇಳೆಯಲಿ,


ನೀವು ಹೊರಬಂದಿರಿ; ನಾನು ಅಲ್ಲೇ ಮಲಗ ಹೊರಟಿದ್ದೀನಿ;

ನಿಮ್ಮ ಗುಲಾಮಗಿರಿಯ ಋಣ ತೀರಿಸಲು ಅಲ್ಲ,

ನನ್ನೀ ನೆಲದ ಕುಂತು ಒಂದಿಷ್ಟು ನ್ಯಾಯದ ಪ್ರಶ್ನೆಗಳ ಕೇಳಲು........

ನನ್ನ ಹೆಸರು ದಲಿತ.

ಅಸ್ಪೃಶ್ಯತೆಯ ಮೊಲೆಯ ಹಾಲನ್ನು ಕುಡಿದು ಬೆಳೆದವನು. ಶತಮಾನಗಳಿಂದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಕನಸು ಕಂಡ ನಾನು ಸಾಂವಿಧಾನಿಕ ಸ್ಪರ್ಶದಿಂದ ಪರಿಶಿಷ್ಟನಾದೆ. ಬಾಬಾ ಸಾಹೇಬರ ಶಿಕ್ಷಣ, ಹೋರಾಟ, ಸಂಘಟನೆಯ 'ದಮ್ಮ' ನನ್ನ ಬೆನ್ನೆಲುಬು ಎಂದು ಅರಿತು ಬಾಳುವ ಪ್ರಖರ ಪ್ರಜಾಪ್ರಭುತ್ವವಾದಿ. ಈ 'ವಿಲ್' ಬರೆಯುತ್ತಿರುವ ಉದ್ದೇಶ ನೀವು ನನ್ನಿಂದ ಕಸಿದಿಟ್ಟ ದೊಡ್ಡಪಾಲಿನ ಭಾರತವನ್ನು ಕೇಳಲಿಕ್ಕೋಸ್ಕರವಲ್ಲ. ತ್ರೇತಾಯುಗದಲ್ಲಿ ಶಂಭೂಕನಾಗಿದ್ದ ನನ್ನ ಕೊಂದ ರಾಮನ, ದ್ವಾಪರದಲ್ಲಿ ನನ್ನ ಹೆಬ್ಬೆರಳು ಕತ್ತರಿಸಿದ ದ್ರೋಣನ ವಿರುದ್ಧ ಕಂಪ್ಲೇಂಟ್ ಜಡಿಯಲೂ ಅಲ್ಲ. 'ಹಿಂದೂ'ಳಿದ ನಿಮ್ಮಗಳ ಆತ್ಮ ಶುದ್ಧೀಕರಣಕ್ಕೆ ಬರೆಯುತ್ತಿರುವ ನಿವೇದನೆಯಂತೂ ಖಂಡಿತ ಅಲ್ಲವೇ ಅಲ್ಲ. ನಿಮ್ಮ ಕಕ್ಕಸ್ಸು ಗುಂಡಿಗಳನ್ನೇ ಕ್ಲೀನ್ ಮಾಡಲಾಗದಷ್ಟು ಕೊಳೆತುಹೋಗಿರುವ ನಿಮ್ಮಲ್ಲಿ ಅಂತಹ ದೊಡ್ಡ 'ಮಹಾತ್ಮ'ನನ್ನು ಕಾಣುವುದು ಪರಮ ಅಸಾಧ್ಯತೆಯಲ್ಲವೇ?




ಮೊನ್ನೆ ದಿಲ್ಲಿಯ ಕೊರೆಯುತ್ತಿರುವ ಚಳಿಯಲ್ಲಿ ಆರು ವರ್ಷದ ನನ್ನನ್ನು ನನ್ನದೇ ಗುಡಿಸಲಿನಲ್ಲಿ ಕೊಂದಿದ್ದೀರಿ. ಒಂದು ಹೊತ್ತಿನ ಕೂಲಿಗಾಗಿ ದೂರದ ಒರಿಸ್ಸಾದಿಂದ ನಿಮ್ಮ ಬೆಂಗಳೂರಿಗೆ ಬಂದ ನನ್ನನ್ನು ಮಲದ ಗುಂಡಿಯಲ್ಲಿ ಉಸಿರು ಕಟ್ಟಿಸಿ ಸಾಯಿಸಿದ್ದೀರಿ. ಒಟ್ಟಿನಲ್ಲಿ ನಿಮ್ಮ ಸ್ವಚ್ಛ ಭಾರತದ ನಾಟಕದಲ್ಲಿ ನನಗೆ ಇಷ್ಟು ದೊಡ್ಡ ತ್ಯಾಗಮಯಿ ಪಾತ್ರವನ್ನು ನೀಡುವ ಮೂಲಕ ನಿಮ್ಮ ಐತಿಹಾಸಿಕ ಹೃದಯ ವೈಶಾಲ್ಯತೆಯನ್ನು ಮೆರೆದಿದ್ದೀರಿ.


2011ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ನನ್ನ ಜನಸಂಖ್ಯೆ ಶೇ.19 ದಾಟಿದೆ ಮತ್ತು ಕಳೆದ ದಶಕಕ್ಕೆ ಹೋಲಿಸಿದರೆ ನನ್ನ ಜನಸಂಖ್ಯೆಯಲ್ಲಿ ಶೇ.4ಕ್ಕಿಂತಲೂ ಅಧಿಕ ಬೆಳವಣಿಗೆ ಕಂಡುಬಂದಿದೆ. ಆದರೆ ನನಗೆ 2013ರ ವಿಧಾನ ಸಭಾ ಚುನಾವಣೆಯಲ್ಲಿ ಕೇವಲ ಶೇ. 15ರಷ್ಟು ಸ್ಥಾನಗಳನ್ನು ಮಾತ್ರ ನೀಡಿದ್ದೀರಿ ಮತ್ತು ಆ ಸ್ಥಾನಗಳನ್ನು ನಿಮ್ಮ ಪಕ್ಷಗಳ ಲಾಭದ ದೃಷ್ಟಿಯಿಂದ ಮಾತ್ರ ಹಂಚಿರುತ್ತೀರಿ. ನನಗಾಗಲಿ ನನ್ನ 101 ಅಕ್ಕತಂಗಿಯರಿಗಾಗಲಿ, ಅಣ್ಣ-ತಮ್ಮಂದಿರಿಗಾಗಲಿ ನೀವು ಆರಿಸಿರುವ ನಿಮ್ಮ ಚಮಚಾಗಳಿಂದ ಅಂತಹ ಮಹತ್ತರ ಪ್ರಯೋಜನ ವೇನೂ ಆಗುತ್ತಿಲ್ಲ.

ಕಳೆದ 60 ವರ್ಷಗಳಲ್ಲಿ ನನ್ನ ಪಾಲಿಗೆಂದು ಕೇವಲ ಶೇ 0.6ರಷ್ಟು ಸರ್ಕಾರಿ ಉದ್ಯೋಗಗಳನ್ನು ಮಾತ್ರ ತುಂಬಿದ್ದೀರಿ. ಉನ್ನತ ಶಿಕ್ಷಣದಲ್ಲಿ ನನ್ನ ಪಾಲು ಶೇ. 3ಕ್ಕೆ ಮೀರದಂತೆ ನೋಡಿಕೊಂಡಿರುವಿರಿ. ಉಪಯೋಜನೆಯಲ್ಲಿ 15000 ಕೋಟಿ ರೂ.ಗಳಿಗೂ ಹೆಚ್ಚಿಗೆ ಹಣವನ್ನೂ ಮೀಸಲಿಟ್ಟು, ಕೃಷಿ, ತೋಟಗಾರಿಕೆ, ಕುರಿ-ದನಕಾಯುವ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದೀರಿ. ನನ್ನ ಬಳಿ "ಭೂಮಿಭಾಗ್ಯ" ಇಲ್ಲದ ಕಾರಣ ನಾನು ಅದನ್ನು ಬಳಸಿಕೊಳ್ಳಲು ಅಸಮರ್ಥ ಮಾತ್ರನಲ್ಲ, ನನ್ನ ಹೆಸರಲ್ಲಿ

ಇದು ನನ್ನ ಮನೆ

ರೋಹಿತ್ ವೇಮುಲ ಕಡುಬಡತನದಲ್ಲಿ ಬೆಳೆದ ಯುವಕ. ಆತ ಎಷ್ಟು ಪ್ರತಿಭಾವಂತ ಎಂದರೆ ಆತ ದಲಿತನಾಗಿದ್ದರೂ, ಮೆರಿಟ್ ಮೇಲೆ ಫೆಲೋಶಿಪ್ ಪಡೆದಿದ್ದ, ಮೀಸಲಾತಿಯಡಿ ಅಲ್ಲ. ಫೇಸ್‌ಬುಕ್‌ನಲ್ಲಿ ರೋಹಿತ್ ತನ್ನ ಮನೆಯ ಚಿತ್ರಗಳನ್ನು ಹಂಚಿಕೊಂಡಿದ್ದನಲ್ಲದೆ, ಹಲವುಗಳಿಗೆ ತಮಾಷೆಯ ಕ್ಯಾಪ್ಷನ್‌ಗಳನ್ನೂ ಕೊಟ್ಟಿದ್ದ. ಅವುಗಳನ್ನು ಇಲ್ಲಿ ನೀಡಿದ್ದೇವೆ.












ನನಗೆ ಫೆಲೋಶಿಪ್ ಸಿಗುವತನಕ ಇದೇ ನಮ್ಮ ಮನೆಗೆ ಆದಾಯ ತರುತ್ತಿದ್ದದ್ದು. ಇದು ನನ್ನ ಅಮ್ಮನ ಮೆಚ್ಚಿನ ಕಾಯಕ. ಈ 'ಮೆಶೀನ್' ಮಹಿಳೆಯರನ್ನು ಶಕ್ತಿಶಾಲಿಯಾಗಿಸುತ್ತದೆ ಎನ್ನುತ್ತಾಳೆ ಅಮ್ಮ. ಈಗ ಅಧ್ಯಾಪಕಿ. ಅಕ್ಕಪಕ್ಕದ ಮನೆಯ ಮಹಿಳೆಯರಿಗೆ ಅಮ್ಮ ಹೊಲಿಗೆ ಮತ್ತು ಎಂಬ್ರಾಯಡರಿ ಹೇಳಿಕೊಡುತ್ತಾಳೆ.














ಅಮ್ಮನ ಮುದ್ದು ಬೆಕ್ಕಿನ ಜೊತೆ ಈ ಚಿತ್ರ ಕ್ಲಿಕ್ ಮಾಡಬೇಕೆಂದಿದ್ದೆ. ಆದರೆ ಅದು ಓಡಿಹೋಯಿತು. ನಮ್ಮ ಮನೆಯಲ್ಲಿ ಅಮ್ಮನ ಮಾತು ಕೇಳುವುದು ಈ ಬೆಕ್ಕು ಮಾತ್ರ ಅಮ್ಮ ಬೆಕ್ಕನ್ನು 'ರ್‍ಯಾಸ್ಕಲ್' ಎಂದು ಕರೆಯುತ್ತಾಳೆ. ಅದು ಎಂದೂ ನನ್ನೊಂದಿಗೆ ಆಟವಾಡುವುದಿಲ್ಲ.











...ದೂಟ ಮಾಡುವವರನ್ನು ಕಣ್ಣು ತುಂಬಾ ನೋಡುವ ...ಕ ಪ್ರೇಕ್ಷಕ ಕೂಡ ನಾನೇ. ನಾಮಕಾವಸ್ಥೆಯಾಗಿರುವ ...ಮ್ಮ ಭೂಮಿ ಮರು ಹಂಚಿಕೆ ಮತ್ತು ಗೇಣಿ ಶಾಸನಗಳ ...ಧಾರಣೆಯ ನಾಟಕ ಕೇವಲ ಕಾಲಕಾಲಕ್ಕೆ ನನ್ನ ...ಡಾಯವನ್ನು ಹತ್ತಿಕ್ಕಲು ನೀವು ಕಂಡುಕೊಂಡಿರುವ ...ಲಭ ಮಾರ್ಗ. ಒಂದಿಂಚು ಭೂಮಿಗಾಗಿ ಮಾರುದ್ದ ...ಗೆಯ ಕಾರುತ್ತೀರಿ.

...ರಾಷ್ಟ್ರ ರಾಜಕೀಯದಲ್ಲಿ ಪ್ರಾತಿನಿಧ್ಯತೆಯ ಅವಕಾಶ ...ಗಿಬಂದಾಗ ಪೂನಾ ಒಪ್ಪಂದದ ಮುಖಾಂತರ, ಬಾಬಾ ...ಹೇಬರ ಕೈಕಟ್ಟಿ, ಶತಮಾನಗಳ ಕಾಲ ನಿಮ್ಮ ...ಲಾಮಗಿರಿಯ, ಜೀತದ ಚೌಕಟ್ಟಿನಲ್ಲಿ ನನ್ನನ್ನು ...ಧಿಸಿಟ್ಟಿದ್ದೀರಿ. ತದನಂತರ ನನ್ನ ಮುಂದಿನ ತಲೆಮಾರುಗಳ ...ಭಿಮಾನಕ್ಕಾಗಿ ಬಾಬಾ ಸಾಹೇಬರು ಶಿಕ್ಷಣ ಮತ್ತು ...ದ್ಯೋಗದ ಮೀಸಲಾತಿಯನ್ನು ಸಂವಿಧಾನದ ...ಲಭೂತ ಹಕ್ಕಾಗಿ ನೀಡಿಹೋದ ಸಂದರ್ಭದಲ್ಲಿ ಅದು ...ಗೆ ದಕ್ಕದ ರೀತಿಯಲ್ಲಿ ಪ್ರತಿನಿತ್ಯ ಹೊಸ ಗೊಂದಲಗಳನ್ನು ... ಮಾಡುತ್ತಿದ್ದೀರಿ. ಒಟ್ಟಿನಲ್ಲಿ ಬಾಬಾ ಸಾಹೇಬರ ...ತೃಕಾರುಣ್ಯದ ಉಡುಗೊರೆಯನ್ನು ನೀವುಗಳು ನಿಮ್ಮದೇ ...ಗಿನ ನೇರದ ಗುಣಮಟ್ಟ ಮತ್ತು ಪ್ರತಿಭೆಯ ...ಖ್ಯಾನದಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮತೆಯ ...ಕಲ್ಪನೆ ಇಲ್ಲದಿರುವಂತೆ ನೋಡಿಕೊಂಡಿರುವಿರಿ.

...ರಾಷ್ಟ್ರ ಮಟ್ಟದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು, ...ವಿದ್ಯಾನಿಲಯಗಳನ್ನು ಅಗ್ರಹಾರವಾಗಿಸಿದ್ದೀರಿ ಮತ್ತು ...ಆಯಕಟ್ಟಿನ ಜಾಗಗಳನ್ನು ನನ್ನ ಮೇಲೆ ಪ್ರಯೋಗಿಸಲಿಕ್ಕೆ ...ಕಾದ ಬಾಂಬು, ಮಿಸೈಲ್‌ಗಳನ್ನು ತಯಾರಿಸಲು ...ಸಿಕೊಳ್ಳುತ್ತಿದ್ದೀರಿ ಎಂಬುದು ಈಗ ಎಲ್ಲರಿಗೂ ...ದಿರುವ ನಗ್ನ ...ತ್ಯವಾಗಿದೆ. ಜವಾಹರ್‌ಲಾಲ್ ನೆಹರು ...ವಿದ್ಯಾನಿಲಯದಲ್ಲಿ ನನ್ನ ಸಂಖ್ಯೆ ಶೇ. 3.2ಕ್ಕೆ ಮೀರದಂತೆ, ...ಟಿ, ಐ.ಐ.ಎಮ್‌ಗಳಲ್ಲಿ ಶೇ. 3ಕ್ಕೆ ಮೀರದಂತೆ ಮತ್ತು ...ಎಸ್ಸಿಯಲ್ಲಿ ನನ್ನ ಅಸ್ತಿತ್ವವೇ ಇಲ್ಲದಂತೆ ...ಡಿಕೊಂಡಿದ್ದೀರಿ. ಎಲ್ಲಾ ಖಾಸಗಿ ವಿಶ್ವವಿದ್ಯಾನಿಲಯ ...ಗೂ ನೀವೇ ಒಡೆಯರು, ನೀವೇ ಗಿರಾಕಿಗಳು. ಸುಸ್ತಾಗಿ ...ಡೆ ಮಲಗಿರುವ ಸರ್ಕಾರಿ ಶಾಲೆ ಮಾತ್ರ ನನ್ನ ಪಾಲಿನ ...ವೃಕ್ಷ! ಬರೋಬ್ಬರಿ ಶೇ. 100 ರಷ್ಟು ಕಸ ಗುಡಿಸುವ ...ತ್ತು ಕಕ್ಕಸ್ಸು ತೊಳೆಯುವ ಕಾಯಕಕ್ಕೆ ಮಾತ್ರ ನನ್ನ ...ಸಲಾತಿ ಫಿಕ್ಸ್.


...ಖಾಸಗಿ ಒಡೆತನದ ಐ.ಟಿ, ಬಿ.ಟಿ ಕ್ಷೇತ್ರದಲ್ಲಿ ನಾನು ...ಸಲಾತಿಗೆ ಅರ್ಹನಲ್ಲ ಎಂದು ಹೇಳುತ್ತೀರಿ. ಕಾರಣ ... ನನ್ನ ಬಂಧು-ಬಳಗವಿಲ್ಲ. ಖಾಸಗಿ ಕ್ಷೇತ್ರದ ...ಸಲಾತಿಗಾಗಿ ಸಂವಿಧಾನದ ಪರಿಚ್ಛೇದ 16 (5) ಚರ್ಚೆಗೆ ...ಕಾಶವಿಲ್ಲದಂತೆ ಕಟ್ಟುನಿಟ್ಟಿನ ವಾತಾವರಣ ...ರ್ಮಿಸಿಕೊಂಡಿರುವಿರಿ.

...ಸಾಲದ್ದಕ್ಕೆ, ಗುಜರಾತ್‌ನಲ್ಲಿ ಹಾರ್ದಿಕ ಪಟೇಲನಂತಹ ...ಧಾನ ವಿರೋಧಿ ಶಕ್ತಿಯೊಬ್ಬ ನಾನು ಮೀಸಲಾತಿಯನ್ನು ...ದ್ದಕ್ಕೂ, ಈ ದೇಶದಲ್ಲಿ ತಲೆದೋರಿರುವ ಭ್ರಷ್ಟಾಚಾರದ ...ಸ್ಯೆಗೂ ನೇರ ಸಂಬಂಧ ಕಲ್ಪಿಸುವಂತಹ ತೀರ್ಪನ್ನು ...ಕರುಳಬಳ್ಳಿ ಉಚ್ಚನ್ಯಾಯಾಲಯದ (ಅ)ನ್ಯಾಯಮೂರ್ತಿ ...ರ್ಡೀ ಪಾರ್ಡಿವಾಲಾನ ಮುಖಾಂತರ ಹೇಗಳಿಸಿಯಾಗಿದೆ. ಇದು ...ಷ್ಟೆ ಆದ ಅವಮಾನವಲ್ಲ, ನನ್ನ ಮೇಲೆ ಕುಳಿತ ... ಇತರೆ 'ಹಿಂದು'ಳಿದ ಸಮುದಾಯಗಳಿಗೆ ...ಸಗಟಾಗಿ ಆದ ಒಂದು ಚಾರಿತ್ರಿಕವಾದ ಸಾಂಸ್ಕೃತಿಕ ...ಮಾನ. ಎಲ್ಲಾ ತಳಸಮುದಾಯಗಳು ಸುಮ್ಮನೆ ಕುಳಿತಾಗ ...ರೀತಿಯ ಸಾಮಾಜಿಕ ಅನ್ಯಾಯದ ವಿರುದ್ಧ ಎಲ್ಲರ ...ಗಿ ನಿಂತು ಘರ್ಜಿಸುವುದು ಸಾಂವಿಧಾನಿಕ ಹಕ್ಕಿನ ...ಗಾಗಿ ನಾನು ಪ್ರತಿನಿಧಿಸಬೇಕಾದ ಕನಿಷ್ಠ ಕರ್ತವ್ಯ ...ಖಾಸಗಿ ಕ್ಷೇತ್ರದಲ್ಲಿರುವ ಉನ್ನತ ಹುದ್ದೆಗಳು ವಿದ್ಯಾರ್ಹತೆ ...ತ್ತು ಅನುಭವದ ಆಧಾರದ ಮೇಲೆ ನಡೆಯುವ ಆಯ್ಕೆಗಳಲ್ಲ. ಅವು ಕೇವಲ ಜಾತಿ ಆಧಾರಿತವಾಗಿ ನಡೆಯುವ ಆಯ್ಕೆಗಳು ಎಂದು ಬ್ರಿಟಿಷ್ ಕೊಲಂಬಿಯಾದಲ್ಲಿ ಮಾಡಿರುವ ಸಂಶೋಧನೆಗಳು ಸಾರಿ ಸಾರಿ ಹೇಳುತ್ತಿವೆ. ಅದೇ ರೀತಿಯಲ್ಲಿ ಮೀಸಲಾತಿಯ ಮುಖಾಂತರ ರೈಲ್ವೆಯಲ್ಲಿ ನೌಕರಿ ಹಿಡಿದ ವ್ಯಕ್ತಿಯ ಉತ್ಪಾದನೆ ಇತರರಿಗಿಂತ ಶೇ. 40 ಹೆಚ್ಚಿರುತ್ತದೆ ಎಂದು ಹೇಳುವ ದೇಶಪಾಂಡೆಯವರ ಸಂಶೋಧನೆಗಳ ಕಾಲಘಟ್ಟದಲ್ಲಿ; ಈ ದೇಶದಲ್ಲಿ ಪ್ರತಿಭೆ ಮತ್ತು ಗುಣಮಟ್ಟಕ್ಕೆ ಒಂದು ಹೊಸ ಪರಿಭಾಷೆ, ವ್ಯಾಖ್ಯಾನದ ಅವಶ್ಯಕಥೆ ಇದೆ ಎಂದು ನನಗೆ ಅನ್ನಿಸುತ್ತಿದೆ. ಈ ಅವಶ್ಯಕತೆ ಕೇವಲ ನನ್ನ ಉಳಿವಿಗಾಗಿ ಮಾತ್ರವಲ್ಲ, ಈ ನೆಲದ ಸುಸ್ಥಿರತೆಗಾಗಿ ಮತ್ತು ಸಾಮಾಜಿಕ ನ್ಯಾಯದ ಅಂತಃಕರಣದ ಆತ್ಮಸಾಕ್ಷಿಯ ಉಳಿವಿಗಾಗಿ.

ದೇಶದ ಯಾವೊಂದು ಪ್ರಭಾವಶಾಲಿಯಾದ ಹುದ್ದೆಯನ್ನು ಏರಲು ನಾನು ಸಮರ್ಥನಾಗಿದ್ದೇನೆ. ಆದರೆ ಅದಕ್ಕೆ ಪೂರಕವಾದ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗಿಲ್ಲ ಎಂಬ ಪೂರ್ಣ ಅರಿವು ನನಗಿದೆ. ಭಾರತದ ಪ್ರಸ್ತುತ ಸಂದರ್ಭದಲ್ಲಿ ಬಹುಪಾಲು ರಾಜಕೀಯ, ವ್ಯಾಪಾರ, ಸಿನಿಮಾ ಮತ್ತು ಇತರೆ ಲಾಭದಾಯಕ ಉದ್ಯಮಗಳು ಅನುವಂಶೀಯವಾಗಿ ಬರುತ್ತವೆ ಎಂಬುದು ಈಗ ಸಾಮಾನ್ಯ ಜ್ಞಾನವಾಗಿಬಿಟ್ಟಿದೆ. ಕೌಟುಂಬಿಕವಾಗಿ ಬರುವ ಕೌಶಲ್ಯಗಳನ್ನು ಪ್ರತಿಭೆಯ ಹೆಸರಿನಲ್ಲಿ ಮೀಸಲಿಟ್ಟು, ಎಲ್ಲಾ ಉನ್ನತ ಅವಕಾಶಗಳನ್ನು ನೀವೇ ನುಂಗಿ ನೀರು ಕುಡಿದು; ಆ ಹುದ್ದೆಯ, ಅವಕಾಶಕ್ಕಾಗಿ ಕನಸು ಕಾಣುವ ನನ್ನಲ್ಲಿ ಪ್ರಜ್ಞಾರಹಿತವಾದ ಅಪರಾಧಿ ಮನೋಭಾವನೆಯನ್ನು ಹುಟ್ಟುಹಾಕುತ್ತಿದ್ದೀರಿ. ಇಲ್ಲಿ ಶೇ. 100ರಷ್ಟು ಮೀಸಲಾತಿಯನ್ನು ನಿಮ್ಮ ಅನುವಂಶೀಯ ವಸ್ತುವಿಗೆ ಅರ್ಥಾತ್ ನಿಮ್ಮ ಸಂತತಿಗಾಗಿ ಮಾತ್ರ ಮೀಸಲಿಡುತ್ತಿದ್ದೀರಿ. ಅದನ್ನೇ ನೀವು ಪ್ರತಿಭೆ ಎಂದು ಕರೆಯುತ್ತಿರುವಿರಿ. ಒಟ್ಟಿನಲ್ಲಿ ಈ ದೇಶದಲ್ಲಿ ಇರುವ ಬಹುದೊಡ್ಡ ಜೋಕ್ ಎಂದರೆ ಈ ರೀತಿಯಾಗಿ ಶೇ. 100ರಷ್ಟು ಮೀಸಲಾತಿ ಪ್ರಕ್ರಿಯೆಯಿಂದ ಹೊರಹೊಮ್ಮುವ ನಿಮ್ಮ ಬೂರ್ಷ್ವ ವರ್ಗವನ್ನು ನನ್ನ ಅಲ್ಪ ಪ್ರತಿನಿಧಿತ್ವದ ವಿರುದ್ಧ ಪ್ರತಿಕ್ರಾಂತಿಯನ್ನು ನಡೆಸುತ್ತಿರುವ ಬ್ರಾಹ್ಮಣೀ ಮಧ್ಯಮವರ್ಗದ ಜೊತೆಯಲ್ಲಿ ಬಿಟ್ಟು ನನ್ನ ವಿರುದ್ಧ ತೊಡೆ ತಟ್ಟಿ ನಿಲ್ಲಲು ಅಣಿಯಾಗಿಸುತ್ತಿರುವಿರಿ.

ನಾನು ಈ ಎಲ್ಲಾ ಸತ್ಯಗಳನ್ನು ಅರಿತು ಪ್ರಸ್ತುತ ವ್ಯವಸ್ಥೆಯಲ್ಲಿ ಅಸಾಧ್ಯವಾಗಿರುವ ದಲಿತ ಪ್ರಧಾನ ಮಂತ್ರಿ, ದಲಿತ ಮುಖ್ಯಮಂತ್ರಿ ಮುಂತಾದ ಭಿಕ್ಷಾರೂಪದ ಬೇಡಿಕೆಗಳನ್ನು ಕೇಳಲು ಬಯಸುವುದಿಲ್ಲ. ನಾನು ನನ್ನ ಸಂವಿಧಾನದ ಮೂಲ ಆಶಯವಾದ ಸಾಮಾಜಿಕ ನ್ಯಾಯ; ಶೈಕ್ಷಣಿಕ ಮತ್ತು ಉದ್ಯೋಗದ ಮೀಸಲಾತಿಯೊಟ್ಟಿಗೆ; ನನಗಾಗಿ ಮತ್ತು ನನ್ನ ಪ್ರಬುದ್ಧ ಭಾರತದ ನಿರ್ಮಾಣಕ್ಕಾಗಿ 'ಪ್ರತ್ಯೇಕ ಮತ ವ್ಯವಸ್ಥೆ'ಯನ್ನು ನಾನು ನನಗೆ ಬರೆದುಕೊಂಡ ಸಂವಿಧಾನದಲ್ಲಿ ಹುಡುಕಲು ಅಣಿಯಾಗಬೇಕಾಗಿದೆ. ಈ ಹುಡುಕಾಟದೊಟ್ಟಿಗೆ ನನ್ನಿಂದ ಬಚ್ಚಿಟ್ಟ ನನ್ನ ಇತಿಹಾಸವನ್ನು ಅರಿಯುವ ನಿರಂತರ ಪ್ರಕ್ರಿಯೆಯಲ್ಲಿ ತೊಡಗಬೇಕಾಗಿದೆ. ನನ್ನ ತಲೆಮಾರಿಗೆ ಪ್ರಸ್ತುತ ಪ್ರತಿಭೆಯ ಪರಿಭಾಷೆಯಲ್ಲಿ ಕೇವಲ ಗುಣಮಟ್ಟ ಅನ್ನುವ ಮಾರುಕಟ್ಟೆಯ 'ಬ್ರಾಹ್ಮೆರಿಗಿಟ್ಟು' (ಬ್ರಾಹ್ಮಣ್ಯ ಮೆರಿಟ್) ಎಂಬ ಅಸಮಾನ ಭಾರತ ಅಡಕವಾಗಿದೆ ಎಂದು ಅರ್ಥಮಾಡಿಸಬೇಕಾಗಿದೆ. ಬಾಬಾ ಸಾಹೇಬರ ಪ್ರಜಾಪ್ರಭುತ್ವದ ಕಲ್ಪನೆಯಲ್ಲಿರುವ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವದ ಅಂಶಗಳು ನನ್ನ ಪ್ರತ್ಯೇಕ ಮತದಾನ ವ್ಯವಸ್ಥೆಯಿಂದ ಮಾತ್ರ ಸಾಧ್ಯ. ಈ ಪ್ರತ್ಯೇಕತೆಯ ಜೀವನದಿಯ ಜಾಡಿನ ಹುಡುಕಾಟವೊಂದೇ ಈ ನೆಲದ ಉಳಿವು ಮತ್ತು ನನ್ನ ಮುಕ್ತಿಯುಷ್ಟು ಆತ್ಮಗೌರವಕ್ಕೆ ಉತ್ತರವಾಗಬಲ್ಲದು.

■ ಪ್ರದೀಪ್ ರಾಮಾವತ್



ಇವು ಪದಗಳಲ್ಲ..
ಈ ಸಮಾಜದೆದುರು,
ನಮ್ಮೆಲ್ಲರ ಬೊಗಸೆಗೆ..
ಈ ಹುಡುಗ
ಇಟ್ಟು ಹೋಗಿರುವ
ಕೆಂಡದಂತಹ
ಸುಡುವ ಪ್ರಶ್ನೆಗಳು..

-ಟಿ.ಕೆ.ದಯಾನಂದ್

ಯಾವುದೋ ಅನಾದಿ ನೋವೊಂದು ಜಾಗ
ಬದಲಾಯಿಸುತ್ತಿದೆ
ಅನಂತ ಗಾಯಗಳು ಮೈಮುರಿಯುತ್ತಿವೆ
ಒಡಲಾಳದಲ್ಲಿ
ಏಕೆ ಹೀಗೆ ಎಂದು ಯಾರನ್ನೂ ಕೇಳಬಾರದು
ನೀಲ ನಕ್ಷತ್ರವೇ
ನಿನಗಾಗಿ ಸಾವಿರ ಕಣ್ಣಿನ ಅಸಂಖ್ಯ ನವಿಲ ರಕ್ತಗಂಬನಿ
ಸತ್ಯವ ಹೇಳುತ್ತೇವೆ ಶಕ್ತಿಯ ಎದುರೇ
ಏಕಲವ್ಯನ ಹೆಬ್ಬೆರಳು ತುಂಡರಿಸಿದವರೇ ಇಂದು ನಿನ್ನ
ಕತ್ತು ಹಿಸುಕಿದರು
ನಮ್ಮ ನಾಳೆಗಳಲ್ಲಿ
ನಕ್ಷತ್ರಗಳು ನೆಲದ ಮೇಲೂ ಉರಿಯುತ್ತವೆ
ಬೆಳಕಿಗೆ, ಬವಣೆಗೆ, ಎಲ್ಲದಕ್ಕೂ
ಸುಮ್ಮನಿರುವ ಮಾತೇ ಇಲ್ಲ

-ವೀರಣ್ಣ ಮದಿವಾಳರ

ನೀ. ಈಗ ನೋಡುತ್ತಿರುವ ನಕ್ಷತ್ರ
ಎಂದೋ ಕಾಲವಾಗಿದೆ.
ಕಾಲವಾದ ಮೇಲೆಯೂ ನಕ್ಷತ್ರಗಳು
ಹೊಳೆಯುತ್ತಿರುತ್ತವೆ.

-ಸಂವರ್ತ 'ಸಾಹಿಲ್'


ಹಿಡಿದು ಎಲ್ಲಾ ಮುಗಿಸಿ
ಹೊರಡುವ ಗೇಟಿನ ತನಕ
ಎಲ್ಲ ಯೂನಿವರ್ಸಿಟಿಲೀ
ಏನುಂಟು ಏನಿಲ್ಲ

ಅಧಿಕಾರಶಾಹಿ ಕೈಗಳು
ಭ್ರಷ್ಟತೆ, ಅಸಮಾನತೆ
ತಾರತಮ್ಯ ಜೊಲ್ಲು
ಸುರಿಸೋ ಕಾಮದ ಕೊರಳು

ಅಡಿಗಡಿಗೂ ಎದುರಾಗೋ
ವ್ಯವಸ್ಥಿತ ಬೆದರಿಕೆ
ಮಾನಸಿಕ ಹಿಂಸೆ
ಇವರು ವಿದ್ಯಾದಾನ
ಮಾಡೋ ಅಸುರರು

ಇರಲಿ ವೇಮುಲಾ
ಸತ್ತು ಸಾಧಿಸಿದ್ದೇನು ನೀನು?
ನೋಡೀಗ ನಿನ್ನ ಸಾವು
ಇವರಿಗಾಹಾರ ಮೃಷ್ಟಾನ್ನ
ಎಡದವರು ಬಲಕ್ಕೂ
ಬಲದವರು ಎಡಕ್ಕೂ
ಎಸೆದಾಡುತ್ತಿದ್ದಾರೆ ನಿನ್ನ
ಕನಸು ಆಸೆ ಮತ್ತು ಸಾವನ್ನು

ನೀನೇನು ಮೊದಲೆಯವನು
ಅಥವಾ ಕೊನೆಯವನೂ ಅಲ್ಲ
ಬಿಡು ..
ನೀನು ಬದುಕಬೇಕಿತ್ತು



ನಾವೆಲ್ಲಾ ಪ್ರತೀಕ್ಷಣವೂ
ಹೋರಾಡುತ್ತಿದ್ದೇವೆ
ಅಕ್ಷರ ದಂಧೆಯ ಅಡ್ಡೆಗಳಾದ
ಯೂನಿವರ್ಸಿಟಿಗಳ ವಿರುದ್ಧ
ನಿನಗೇಕೆ ಇದು ಗೊತ್ತಾಗಲಿಲ್ಲ

ನೀನೀಗ ನಮಗೆ ದಾರಿ ನಕ್ಷತ್ರ
ಸಾಯಲಲ್ಲ ಅಣ್ಣಾ
ಹೋರಾಡೋಕೆ
ನಕ್ಷತ್ರಗಳನ್ನ ಭೂಮಿ
ಮೇಲೂ ಬೆಳಗೋಕೆ
ಮುಂದೆ ನಿನ್ನ ಸ್ನೇಹಿತರ ಮಕ್ಕಳು
ಅದೇ ಯೂನಿವರ್ಸಿಟಿಯಲ್ಲಿ
ಅನೇಕಾನೇಕ ಮಹನೀಯರಾಗೋಕೆ

ಪ್ರತೀಸಾರಿಯೂ ಇಲ್ಲೊಂದು
ಸಾವು ಸಂಭವಿಸಬೇಕು
ಸಮಸ್ಯೆಗಳನ್ನು ಜೀವಂತವಾಗಿರಿಸಲು

ನೋಡಿ ಈಗ ವೇಮುಲಾ
ಜೀವ ಬೇಕಾಯ್ತು
ನಿಮಗೆಲ್ಲಾ ಸಮಸ್ಯೆ ಕಾಣಲು

ಕಾಲೇಜು ಸೀಟಿನಿಂದ

ನಾವು ಇಲ್ಯಾರಿಗೂ
ಸಾವಿನ ಆಹಾರವಾಗೋಲ್ಲ
ಅವರು ನುಂಗಲಾರದ
ಸಂವಿಧಾನದ ನಕ್ಷತ್ರಗಳಾಗುತ್ತೇವೆ
ನೀನಲ್ಲಿಂದಲೇ ನೋಡಿ
ಹೊಳೆದಾಗು ....!

-ಪಾವನ ಭೂಮಿ

ನಾಡಲ್ಲವೊ ಇದು ವಿಷದ ಸಮುದ್ರ



ಗೆಳೆಯ ರೋಹಿತ್,

You are the Man of Character


ನಿನ್ನ ಸಾವು ಈ 'ಬ್ರಾಹ್ಮಣ ಭಾರತ'ಕ್ಕೆ ಒಂದು ಪಾಠವಾಗಬೇಕಾಗಿದೆ. ನಿನ್ನೊಂದಿಗೆ ಇದುವರೆಗೂ ಜಾತೀಯ ಶಕ್ತಿಗಳ ಕಾಟದಿಂದ ಮಡಿದಿರುವ ಎಲ್ಲಾ ದಲಿತ ವಿದ್ಯಾರ್ಥಿ ಚೇತನಗಳಿಗೆ 'ಪ್ರಬುದ್ಧ ಭಾರತ'ದ ನೆಲ ನ್ಯಾಯದ ದರ್ಶನವಾಗಬೇಕಾಗಿದೆ. 'ಜಾತಿವಿನಾಶ'ದ ಯೋಜನೆಯಲ್ಲಿ ತೊಡಗಿರುವ ಎಲ್ಲಾ ಯುವಜನತೆಗೆ ನಿನ್ನ ಸಾವಿನ ಪರಿಭಾಷೆ ಅರ್ಥವಾಗಬೇಕಾಗಿದೆ. ನಿನ್ನೊಂದಿಗೆ ನಮ್ಮನ್ನು ಅಗಲಿರುವ ಬಾಲಮುಕುಂದ, ಜಸ್‌ಪ್ರೀತ್‌ಸಿಂಗ್, ಅನೀಲ್ ಮೀನಾ, ಮನಿಷ್ ಕುಮಾರ್, ಸೇಂಥಿಲ್, ಅಜಯ್, ಚೈತ್ರಾ ಹಾಗೂ ಸಾವಿರಾರು ದಲಿತ ವಿದ್ಯಾರ್ಥಿಗಳ ಸಾವು ಪ್ರತ್ಯೇಕ ದಲಿತ, ಪ್ರಬುದ್ಧ ಭಾರತದ ನಿರ್ಮಾಣಕ್ಕೆ ಮುನ್ನುಡಿ ಬರೆದಂತಾಗಿದೆ. ಇಂದು ಈ ಬ್ರಾಹ್ಮಣ ಭಾರತವನ್ನು ಹೊಡೆದುರುಳಿಸಿ 'ಪ್ರಬುದ್ಧ ದಲಿತ ಭಾರತ'ದ ನಿರ್ಮಾಣಕ್ಕೆ ಈ ದೇಶವನ್ನು ಸಜ್ಜುಗೊಳಿಸಬೇಕಾದ ತುರ್ತು ನನ್ನಂಥ ಸಾವಿರಾರು ದಲಿತ ವಿದ್ಯಾರ್ಥಿ ಸಂಶೋಧಕರ ಆದ್ಯತೆಯ ಜವಾಬ್ದಾರಿಯಾಗಿದೆ. ಇಂದು ನಾವು ನಿಜವಾದ 'ಕ್ವಿಟ್ ಇಂಡಿಯಾ'ವನ್ನು ಶುರುಮಾಡಬೇಕಾಗಿದೆ.

ನಿನ್ನ ಸಾವು ಈ ಬ್ರಾಹ್ಮಣ ಭಾರತದ ಉನ್ನತ ಶಿಕ್ಷಣದ ವ್ಯವಸ್ಥೆ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಕೊಳೆಯುತ್ತಿರುವ ಅತಿಯಾದ ಜಾತೀಯ ಕ್ಷುದ್ರ ಶಕ್ತಿಗಳು ಹೇಗೆ ವಿದ್ಯಾರ್ಥಿ ರಾಜಕಾರಣದ ಹೆಸರಿನಲ್ಲಿ ವಿಕೇಂದ್ರೀಕರಣಗೊಂಡಿವೆ ಎನ್ನುವ ನಗ್ನತೆಯನ್ನು ತೋರಿಸಿದೆ. ಈ ದೇಶವನ್ನು ನರಿ, ತೋಳಗಳಂತೆ ಕಿತ್ತು ತಿನ್ನಲು ಈ ಫ್ಯಾಸಿಸ್ಟ್ ಶಕ್ತಿಗಳು ಹೇಗೆ ನಮ್ಮ ಸೋದರರನ್ನೇ ಬಳಸಿಕೊಳ್ಳುತ್ತಿವೆ ಎನ್ನುವ ಸಂಗತಿ ನಿಜಕ್ಕೂ ಆತಂಕಕಾರಿ. ವಿಶ್ವವಿದ್ಯಾನಿಲಯಗಳು 'ಬ್ರಾಹ್ಮಣೀಯ ಭಯೋತ್ಪಾದನೆ'ಯ ಕೇಂದ್ರಗಳಾಗಿವೆ ಎನ್ನುವ ಸತ್ಯವನ್ನು ನಿನ್ನ ಸಾವು ಮತ್ತೊಮ್ಮೆ ಪುನರುಚ್ಚರಿಸಿದೆ.

ನಿನ್ನ ಸಾವಿನ ನುಡಿಮುತ್ತುಗಳು ನಿನ್ನ ಮತ್ತು ನಿನ್ನ ಆದಿಮತೆಯ ಒಳಗೊಳ್ಳುವ ತತ್ವಪದಗಳನ್ನು ಪುನರುಚ್ಚರಿಸಿದೆ. ನಿನ್ನ ಆ ನೋಟ್ 'ದಲಿತ ಭಾರತ'ದ ಮ್ಯಾನಿಫೆಸ್ಟೋ ಎಂದೇ ನಾನು ಭಾವಿಸುತ್ತೇನೆ. ಬಾಬಾ ಸಾಹೇಬರ 'ಐ ಯಾಮ್ ದ ಮ್ಯಾನ್ ಆಫ್ ಕ್ಯಾರೆಕ್ಟರ್' ಪತ್ರದಂತೆ ನಮ್ಮ ದಲಿತತ್ವ ಮತ್ತು ಅಸ್ಮಿತೆಯಲ್ಲಿ ಒಂದಾಗಿದೆ.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಬ್ರಾಹ್ಮಣ ಪ್ರೊಫೆಸರ್‌ಗಳು ಹೇಗೆ ಮೊನ್ನೆಮೊನ್ನೆ ತನಕ ಅಲ್ಲಿನ ಫಿಸಿಕ್ಸ್ ಲ್ಯಾಬ್ ಮತ್ತು ಅಧ್ಯಯನ ಕೇಂದ್ರಕ್ಕೆ ಕೇವಲ ಪಾಲ್‌ಘಾಟ್ ಬ್ರಾಹ್ಮಣರ ಆಯ್ಕೆ ನಡೆಯುತ್ತಿತ್ತು ಎಂಬ ವಿಷಯವನ್ನು ಹೆಮ್ಮೆಯಿಂದ ಎಲ್ಲಾ ಸಭೆ ಸಮಾರಂಭಗಳಲ್ಲಿ ಬೊಗಳುವ ಪರಿಯೇ ವಿಶ್ವವಿದ್ಯಾನಿಲಯಗಳು ಮತ್ತು ಉನ್ನತ ಶಿಕ್ಷಣ ಸಂಪೂರ್ಣ ಅಗ್ರಹಾರೀಕರಣಗೊಂಡ ವಿಷಯವನ್ನು ಎತ್ತಿ ತೋರಿಸುತ್ತಿದೆ. ಇದರ ಬೆನ್ನಲ್ಲೇ ಸಿಎನ್‌ಆರ್ ರಾವ್ ಅನ್ನುವ ದ್ರೋಣಾಚಾರ್ಯನೊಬ್ಬ ವಿಜ್ಞಾನ ಶಿಕ್ಷಣದ ಕ್ಷೇತ್ರದಲ್ಲಿ ಮೀಸಲಾತಿಯನ್ನು ಸಂಪೂರ್ಣವಾಗಿ ಕಿತ್ತೊಗೆಯಬೇಕೆಂಬ ಕ್ಷುದ್ರದೃಷ್ಟಿಯನ್ನು 'ಅಬ್ಸರ್ವರ ರೀಸರ್ಚ್ ಫೌಂಡೇಷನ್' **(Observer Research Foundation)** ಎಂಬ ಥರ್ಡ್ ಗ್ರೇಡ್ ಕಾರ್ಪೊರೇಟ್ ಕಾಚಾಗಳು ನಿರ್ಮಿಸಿರುವ ನವ ಅಗ್ರಹಾರದ ಮುಖಾಂತರ ಮೋದಿಗೆ **102**ನೆಯ ಸೈನ್ಸ್ ಕಾಂಗ್ರೆಸ್‌ನಲ್ಲಿ 'ಭಾರತ ಭವಿಷ್ಯಕ್ಕೊಂದು ಮ್ಯಾನಿಫೆಸ್ಟೊ' ಎಂಬ ಸ್ಮೃತಿಯನ್ನು ಬರೆದು ಕೊಟ್ಟಿದ್ದ. ಗೆಳೆಯ ರೋಹಿತ್' ಭಾರತದ ವಿಜ್ಞಾನ ಕ್ಷೇತ್ರ ಪಠ್ಯಪಾರಾಯಣ ಮಾಡುವವರ ಪಿತ್ರಾರ್ಜಿತ ಆಸ್ತಿಯೆಂದು ಘೋಷಣೆ ಮಾಡಿಕೊಳ್ಳುತ್ತಿರುವ 'ಬ್ರಾಹ್ಮಣ ರತ್ನ'ಗಳ ನಡುವೆ ಅಲ್ಲೊಬ್ಬರು ಇಲ್ಲೊಬ್ಬರು ನಿನ್ನಂಥ ನಕ್ಷತ್ರಗಳಿಗೆ, ದಲಿತ ಇಂಟೆಲೆಕ್ಚುಯಲ್‌ಗಳಿಗೆ ಸ್ಥಾನವಿಲ್ಲ ಎನ್ನುವ ಮರಣ ಶಾಸನವನ್ನು ಈ ಸೂಪರ್ ಆರ್‌ಎಸ್‌ಎಸ್‌ಗಳು ನಿರಂತರವಾಗಿ ಬರೆಯುತ್ತಾ ಬಂದಿವೆ.

ನಿನಗೆ ನೆನಪಿದೆಯೇ? **2007**ರ ಆಗಸ್ಟ್‌ನಲ್ಲಿ ಸೋದರ ಅಜಯ್ ಹಾಗೂ ನವೆಂಬರ್ **19**ರಂದು ಸೋದರಿ ಚೈತ್ರಾರ ಸಾವಿನಲ್ಲೂ ಈ ಐಐಎಸ್ಸಿಯ ಬ್ರಾಹ್ಮಣಾತ್ಮಗಳು ಮಂತ್ರ ಕುತಂತ್ರಗಳ ಮುಖಾಂತರ ತಮ್ಮ ಕೈಚಳಕವನ್ನು ತೋರಿಸಿದ್ದರು. ಆದಕ್ಕೆ ಅಲ್ಲವೇ ಇನ್ನೂ ಕೂಡ ಯಾವುದೇ ಪ್ರಯೋಗ ಮತ್ತು ರಾಕೆಟ್ ಲಾಂಚ್‌ಗೂ ಮುನ್ನ ಒಂದು ಬಲಿ ಪೂಜೆ ಈ ಪುರೋಹಿತ ವಿಜ್ಞಾನಿಗಳ ಕಡ್ಡಾಯದ ಪ್ರಕ್ರಿಯೆ. ನಿನ್ನ ಹೈಪಾಥಿಸಿಸ್ ಸರಿಯಾಗಿದೆ. ಈ ದೇಶದ ಸೋಕಾಲ್ಡ್ ಸಕ್ಸಸ್‌ಫುಲ್ ವಿಜ್ಞಾನಿಗಳು ಫ್ಯಾಸಿಸ್ಟ್ ಚೆಡ್ಡಿ ಪಡೆಯ ಗುಲಾಮರು ಎಂದು. ಆದಕ್ಕೆ ಅಲ್ಲವೇ ಮಾಧವ ಮತ್ತು ರಾಧಾಕೃಷ್ಣನಂತಹ ಚೆಡ್ಡಿ ವಿಜ್ಞಾನಿಗಳು ನಿವೃತ್ತಿನಂತರವೂ ಕಡ್ಡಾಯ ಆರ್‌ಎಸ್‌ಎಸ್ ಸೇವೆಯ ಸರತಿ ಸಾಲಿನಲ್ಲಿ ಮೋಹನ್ ಭಾಗವತ್‌ನ ಕಾಲು ನೆಕ್ಕುತ್ತಿರುವುದು. ಇವರ ಲಜ್ಜೆಗೆಟ್ಟ ನಡೆಯಿಂದ ಒಂದಂತೂ ಸತ್ಯ ಗೆಳೆಯ,



ಕಾರುಣ್ಯ, ಮಮತೆ, ಭ್ರಾತೃತ್ವ, ಸಮಾನತೆ, ಸೋದರತೆ ಮತ್ತು ಸ್ವಾತಂತ್ರದ ಆದಿಮ ನಡೆಯಿಂದ ಬರುವ ನಿನ್ನ ಇಂಟೆಲೆಕ್ಚುಯಾಲಿಟಿಗೆ ಇವರ್‍ಯಾರು ಸರಿಸಾಟಿಯಲ್ಲ. ಇವರೇನಿದ್ದರೂ ವಿಜ್ಞಾನವನ್ನು ಪುರಾಣದಂತೆ ಪಠಣ ಮಾಡಿ ಅದರ ಫಾರ್ಮೂಲಾಗಳನ್ನೂ ಕಂಠಪಾಠ ಮಾಡಿ ಅದನ್ನು ಒಪ್ಪಿಸುವ ಕುತಂತ್ರಜ್ಞರಷ್ಟೇ.

2008ರ ಫೆಬ್ರವರಿ ತಿಂಗಳ **24**ರಂದು ನೀನು ಓದುತ್ತಿದ್ದ ಭೌತಶಾಸ್ತ್ರ ವಿಭಾಗದ ಸಂಶೋಧಕ ಸೋದರ ಸೇಂಥಿಲ್ ಕೂಡ ಆತ್ಮಹತ್ಯೆ ಮಾಡಿಕೊಂಡಾಗ ಅದನ್ನು 'ಹೃದಯಾಘಾತ' ಎಂದು ಹೈದರಾಬಾದ್ ವಿವಿಯ ಆಡಳಿತ ಸುಳ್ಳು ಹೇಳಿತ್ತು. ನಂತರ ಪ್ರೊ. ವಿನೋದ್ ಪವರಾಲಾರವರು ಒಪ್ಪಿಸಿದ ವರದಿಯೇ ಹೇಳಿದಂತೆ ಭೌತಶಾಸ್ತ್ರ ವಿಭಾಗದ ಬ್ರಾಹ್ಮಣಾತ್ಮಗಳ ಜಾತೀಯ ದೌರ್ಜನ್ಯದಿಂದ ಸೇಂಥಿಲ್ ಸಾವಾಗಿತ್ತು. ಇದಕ್ಕೂ ಮೊದಲು ಸೇಂಥಿಲ್ ಸೇರಿದಂತೆ ಅವರ ಬ್ಯಾಚ್‌ನಲ್ಲಿದ್ದ ನಾಲ್ಕು ಸಂಶೋಧನಾ ವಿದ್ಯಾರ್ಥಿಗಳಿಗೆ ರೀಸರ್ಚ್ ಗೈಡ್‌ಗಳನ್ನು ಹಂಚಿಕೆ ಮಾಡಿರಲಿಲ್ಲ ಮತ್ತು ಅವರೆಲ್ಲರಿಗೂ ಕೂಡ ವಿದ್ಯಾರ್ಥಿವೇತನವನ್ನು ನಿನಗೆ ನಿಲ್ಲಿಸಿದ ರೀತಿಯಲ್ಲಿಯೇ ತಡೆಹಿಡಿಯಲಾಗಿತ್ತು. ಹಂದಿ ಜೋಗಿ ಸಮುದಾಯದಿಂದ ಬಂದ ನನ್ನಣ್ಣ ಸೇಂಥಿಲ್ ಆತ್ಮಾಹುತಿಗೆ ಶರಣಾದ. ಇನ್ನಿಬ್ಬರು ಮಿತ್ರರು ವಿಶ್ವವಿದ್ಯಾನಿಲಯವನ್ನೇ

ಎಲ್ಲಿದೆ ಜಾತಿ ಅನ್ನುತ್ತೀರಾ?



ಹಸಿವಿಗಿಂತ ಅವಮಾನದ ನೋವು ಭೀಕರವಾದುದು. ಹಸಿವು-ಅವಮಾನಗಳನ್ನೇ ಉಂಡು ಬೆಳೆದ ಹಿರಿಯ ಜೀವಗಳು ಅವುಗಳನ್ನು ತಾಳಿಕೊಳ್ಳುವ ಶಕ್ತಿಯನ್ನು ಬೆಳೆಸಿಕೊಂಡಿರುತ್ತವೆ. ಇದರಿಂದಾಗಿ ಸುಲಭದಲ್ಲಿ ಜೀವ ಬಿಟ್ಟುಕೊಡುವುದಿಲ್ಲ. ಇಲ್ಲದೆ ಇದ್ದರೆ ಆತ್ಮಹತ್ಯೆ ಮಾಡಿಕೊಂಡ ದಲಿತರ ಹೆಣಗಳು ಸಾಲುಸಾಲು ಬೀಳಬೇಕಿತ್ತು, ರೈತರದ್ದಲ್ಲ. ಹುಟ್ಟಿನಿಂದಲೇ ಹಸಿವು ಮತ್ತು ಅವಮಾನವನ್ನು ಸಹಿಸಿಕೊಂಡು ಬಂದ ದಲಿತರು ರೈತರ ಹಾಗೆ ದುರ್ಬಲ ಮನಸ್ಸಿನವರಾಗಿದ್ದಿದ್ದರೆ ನಾವೆಲ್ಲ ನಿತ್ಯ ದಲಿತರ ಆತ್ಮಹತ್ಯೆಯ ಲೆಕ್ಕ ಹಾಕಿಕೊಂಡು ಕೂರಬೇಕಿತ್ತು.

ಹಸಿವು ವೈಯಕ್ತಿಕವಾದುದು, ಅದನ್ನು ಸಹಿಸಿಕೊಳ್ಳಬಹುದು. ಅವಮಾನ ಸಾರ್ವಜನಿಕವಾಗಿ ನಡೆಯುವಂಥಹದ್ದು. ಒಮ್ಮೊಮ್ಮೆ ಮುಖಮುಚ್ಚಿಕೊಳ್ಳಲು ಜಾಗವೇ ಸಿಗುವುದಿಲ್ಲ; ಹೊಸಪೀಳಿಗೆಯ ರೋಹಿತ ವೇಮುಲನಂತಹ ಸೂಕ್ಷ್ಮವಾದ ಹೂಮನಸ್ಸಿನ ಜೀವಗಳು ಬಹುಬೇಗ ಅವಮಾನದಿಂದ ಬಾಡಿಹೋಗುತ್ತವೆ, ಒಮ್ಮೊಮ್ಮೆ ಉದುರಿಹೋಗಿ ನಮ್ಮನ್ನೆಲ್ಲ ಅಪರಾಧಿಸ್ಥಾನದಲ್ಲಿ ನಿಲ್ಲಿಸಿ ಅಣಕಿಸುತ್ತಿರುತ್ತವೆ.

ಎಲ್ಲಿದೆ ಜಾತಿ? ಎಲ್ಲಿದೆ ಅಸ್ಪೃಶ್ಯತೆ? ಎಂದು ಉಡಾಫೆಯಿಂದ ಮೀಸಲಾತಿಯನ್ನು ಪ್ರಶ್ನಿಸುವವರು, ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು ಗೇಲಿಮಾಡುವವರು, ಮೀಸಲಾತಿಯ ಫಲಾನುಭವಿಗಳನ್ನು ಹಂಗಿಸುವವವರು ಕಣ್ಣೀರಾಗಿ ಹೋಗಿರುವ ರೋಹಿತ ವೇಮುಲನ ಅಮ್ಮನಲ್ಲಿ ಈ ಪ್ರಶ್ನೆಗಳನ್ನು ಕೇಳಿ ಎದೆಮುಟ್ಟಿಕೊಳ್ಳಬೇಕು. ಸಾಧ್ಯವಾದರೆ ತಮ್ಮ ಮುಖಗಳನ್ನೊಮ್ಮೆ ಕನ್ನಡಿಯಲ್ಲಿ ನೋಡಿಕೊಳ್ಳಬೇಕು.

ಇದು ಕೇವಲ ಒಬ್ಬ ರೋಹಿತನ ಕತೆಯೆಂದು, ಇದು ಕೇವಲ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದೊಳಗೆ ಮಾತ್ರ ನಡೆಯುತ್ತಿರುವ ಅಮಾನುಷ ನಡವಳಿಕೆಯೆಂದು ತಿಳಿದುಕೊಂಡವರು ಮೂರ್ಖರು. ದೇಶದ ವಿಶ್ವವಿದ್ಯಾಲಯಗಳ ಒಳಹೊಕ್ಕು ನೋಡಿದರೆ ಒಂದು ಕೈಯಲ್ಲಿ ವಿಷದ ಬಾಟಲಿ, ಇನ್ನೊಂದು ಕೈಯಲ್ಲಿ ನೇಣಿನ ಹಗ್ಗ ಹಿಡಿದುಕೊಂಡ ನೂರಾರು ರೋಹಿತ ವೇಮುಲರನ್ನು ಕಾಣಬಹುದು. ನಾವಿಂದು ಯೋಚಿಸಬೇಕಾಗಿರುವುದು ಅನ್ಯಾಯ-ಅವಮಾನಗಳನ್ನು ನುಂಗಿಕೊಂಡು ಉಳಿದುಕೊಂಡವರನ್ನು ಉಳಿಸಿಕೊಳ್ಳುವುದು ಹೇಗೆ ಎಂದು.

- ದಿನೇಶ್ ಅಮೀನ ಮಟ್ಟು





ಧಿಕ್ಕಾರ ಧಿಕ್ಕಾರ ಎನ್ನುತ್ತಿರುವ ರೋಹಿತ್

ಲಂಕೇಶ್, ದೇವನೂರು ಹೇಳಿದ್ದೇನು?

ಹುಲಿಗಳ ಜಗತ್ತಿನಲ್ಲಿ ಬಡಹುಲಿ, ಶ್ರೀಮಂತಹುಲಿ, ಪುರೋಹಿತ ಹುಲಿ, ಹೊಲೆಯ ಹುಲಿ ಇರುವುದಿಲ್ಲ, ಇದೆಲ್ಲ ಮನುಷ್ಯರಲ್ಲಿ ಮಾತ್ರ.

ಸಮುದ್ರಕ್ಕೆ ಕೂಡ ಮೇಲು-ಕೀಳಿನ ಪರಿವೆ ಇಲ್ಲ, ಸೂರ್ಯ ಅರಮನೆ, ದೇವಸ್ಥಾನಗಳ ಮೇಲೆ ಮಾತ್ರ ಬೆಳಗುವುದಿಲ್ಲ.

ಆದರೆ ಅದು ಮನುಷ್ಯನ ಕೈಯಲ್ಲಿದ್ದರೆ ಮಾಡಿಸುತ್ತಿದ್ದ.

- ಪಿ. ಲಂಕೇಶ್ (ಸಂಕ್ರಾಂತಿ ಸಾಲುಗಳು)

ನಂಗೆ ಅಕ್ಷರ ಗೊತ್ತಿದೆ. ಆದ್ರಿಂದ ಎಲ್ಲಾ ಅಷ್ಟಿಷ್ಟು ನಂಗೂ ಕಾಣ್ತದೆ. ಇದು ಕಂಡಾಗ ಒಂದೊಂದು ಸಲ ಅನ್ನುತ್ತೆ. ಈ ಓದೋ ಚಾನ್ಸೇ ಬರಬಾರದಿತ್ತು, ನಾನು ಹತ್ತು ವರ್ಷದ ಕೆಳಗೆ ಹುಟ್ಟಬೇಕಿತ್ತು. ಆಗ ಓದೊ ಬಾಬತ್ತೆ ಇರ್ತ ಇರ್ಲಿಲ್ಲ.

ಯಾಕೆ ಹಿಂಗೆ ಹೇಳ್ತ ಇದ್ದೀನಿ ಅಂದ್ರೆ, ಇಂದು ಒಬ್ಬ ಆದಿ ಜನಾಂಗದೋನು ಅಲ್ಪಸ್ವಲ್ಪ ಪ್ರಜ್ಞೆ ಪಡೆಯೋದೆ ಅಪರೂಪ. ಪಡೆದರೆ ಅದೊಂದು ರೌರವ ನರಕ. ಯಾಕೆಂದರೆ ಅವನಿಗೆ ಅಲ್ಪಸ್ವಲ್ಪ ತಿಳಿವಳಿಕೆ ಬರುತ್ತೆ. ಅವನಿಗೆ ಕಾಣುತ್ತೆ ತನ್ನ ಸಂಬಂಧಿಗಳು ಹಸಿವಿನಿಂದ ಸಾಯ್ತ ಇರೋದು. ಬೀದೀಲಿ ಭಿಕ್ಷೆ ಬೇಡೋದು. ಜೀವಂತ ಸುಡಿಸಿಕೊಳ್ಳೋದು. ಪಶುಥರ ದುಡಿಯೋದು. ಅವನು ದುಡಿಯೋದು ಅವನಿಗೆ ದಕ್ಕದೆ ಇರೋದು. ಇದರ ಜೊತೆಗೇನೆ ಹುಟ್ಟಿದ ತಪ್ಪಿಗೆ ಚೀ ಚೀ ಅನ್ನಿಸಿಕೊಳ್ಳೋದು ಕೂಡ ಸೇರುತ್ತದೆ.

ಇಷ್ಟೆಲ್ಲ ಆಗ್ತಾ ಇರೋದು ನನ್ನ ಸಂಬಂಧಿಗಳಿಗೇನೆ. ಈ ಸಂಬಂಧ ಇಲ್ಲದಿದ್ದರೆ ನನಗೆ ಭಾವನಾತ್ಮಕ ನೋವು ಇರ್ತ ಇರಲಿಲ್ಲವೇನೊ.

- ದೇವನೂರ ಮಹಾದೇವ





ಚಿಕ್ಕಿ, ಚಿಕ್ಕಿ ಎಲ್ಲಿಗೆ ಹೋಗಿದ್ದೆ, ಬ್ರಾಹ್ಮಣರ ಮನೆಗೆ ಯಾತಕೆ ಹೋಗಿದ್ದೆ?

ಟ್ಟು ಹೊರಟುಹೋದರು. ಆ ವರದಿಯೇ ಹೇಳುವಂತೆ ಎಲ್ಲಾ ಪ್ರಕರಣಗಳಲ್ಲಿ ಜಾತಿ ದೌರ್ಜನ್ಯಗಳನ್ನು ಅಲ್ಲಿಯ ್ರೋಣಾಚಾರ್ಯರ ವೃಂದ ಶಾಸ್ತ್ರಬದ್ಧವಾಗಿ ದಲಿತ ೌತಶಾಸ್ತ್ರದ ವಿದ್ಯಾರ್ಥಿಗಳ ವಿರುದ್ಧ ಕೈಗೆತ್ತಿಕೊಂಡಿತ್ತು. ೆಯ ನೀನೇ ಹೇಳಿದಂತೆ ಭೌತಶಾಸ್ತ್ರ ಕ್ಷೇತ್ರಕ್ಕೆ ದಲಿತ ದ್ಯಾರ್ಥಿಗಳು ಬರದಂತೆ ಬಹಳ ಕಟ್ಟುನಿಟ್ಟಿನ ಮಡಿ ೈಲಿಗೆಯನ್ನು ಹೈದರಾಬಾದ್ ವಿವಿಯು ಪಾಲಿಸಿಕೊಂಡು ಂದಿದೆ. ಎಲ್ಲಾದರೂ ಅಪ್ಪಿತಪ್ಪಿ ಈ ಆಯಕಟ್ಟಿನ ಸ್ಥಳಕ್ಕೆ ಂದಿದ್ದೇ ಆದರೆ ಶಾಸ್ತ್ರೋಕ್ತವಾಗಿ ಏಕಲವ್ಯ, ಶಂಭೂಕರ ಾದರಿಯಲ್ಲಿ ಕೊಲ್ಲಲಾಗುತ್ತಿದೆ. ಹೌದು ಮಿತ್ರ ವಿಜ್ಞಾನ ೇತ್ರದಲ್ಲಿ ಹಿಂದುಳಿದಿರುವ ಈ ದೇಶಕ್ಕೆ ದಲಿತತ್ವದ ಂತಃಕರಣದ ಅವಶ್ಯಕತೆ ಇದೆ. ಇಲ್ಲವಾದರೆ ಅರ್ಥವಿಲ್ಲದ ಂತ್ರಜ್ಞಾನಗಳ ಕಾರ್ಪೋರೇಟ್ ಕೃಪಾಪೋಷಿತ ಗ್ರಹಾರಗಳನ್ನು ನಿರ್ಮಿಸಿ ಅಲ್ಲಿ ನಮ್ಮನ್ನು ಕೊಲ್ಲುವ ಿಸೈಲ್‌ಗಳನ್ನು ತಯಾರಿಸಲಾಗುತ್ತಿದೆ.

ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ರಿಸೋರ್ಸ್ ಂಜಿನಿಯರಿಂಗ್‌ನಲ್ಲಿ ಸೋದರಿ ರಜನಿ ಮತ್ತು ಮಾದಿಗ ಮುದಾಯದಿಂದ ಇಂಡಿಯನ್ಸ್ ಇನ್‌ಸ್ಟಿಟ್ಯೂಟ್ ಆಫ್ ್ಸ್‌ನಲ್ಲಿ ಇಂಟಿಗ್ರೇಟೆಡ್ ಪಿಎಚ್.ಡಿ ಸೇರಿದ್ದ ಇನ್ನೊಬ್ಬ ೋದರ ಅಜಯಚಂದ್ರರು ಕೂಡ ಆತ್ಮಾಹುತಿ ಾಡಿಕೊಂಡಿದ್ದರು.

'ಜಾತಿಯ ವಕ್ರದೃಷ್ಟಿ, ವಿಜ್ಞಾನ ಕ್ಷೇತ್ರದಲ್ಲಿ ಅಸ್ಪೃಶ್ಯತೆಯ ಚರಣೆ ನಮ್ಮನ್ನು ನಡುಗಿಸಿದೆ' ಎಂದು ಹೇಳುತ್ತಲೇ ಮ್ಮನ್ನು ಅಗಲಿ ಬಿಟ್ಟುಹೋಗಿದ್ದರು. ಇಲ್ಲಿಯವರೆಗೆ ೋದರರಾದ ಬಾಲಮುಕುಂದ, ಜಸ್‌ಪ್ರೀತ್‌ಸಿಂಗ್, ಅನಿಲ್ ೀನಾ, ಮನಿಷ್ ಕುಮಾರ್‌ರಂತಹ ಸಾವಿರಾರು ದಲಿತ ್ಯಾರ್ಥಿಗಳನ್ನು ಜಾತಿವ್ಯವಸ್ಥೆಯ ಕ್ರೂರ ಮನಸ್ಸುಗಳು ಂದು ಹಾಕಿವೆ. ಜಾತಿವ್ಯವಸ್ಥೆಯ ಕ್ರೂರ ಮನಸ್ಸುಗಳ ುದ್ಧ ನೀವೆಲ್ಲರೂ ಕಂಡುಕೊಂಡ ಪರಿಭಾಷೆ 'ಆತ್ಮಾಹುತಿ.' ಯ ನಿಮ್ಮೆಲ್ಲರ ಸಾವಿನ ನೇಣುಹಗ್ಗವಾಗಿದ್ದು ಜಾತಿವ್ಯವಸ್ಥೆ ತ್ತು ಅದರ 21ನೇ ಶತಮಾನದ ಕ್ರೂರ ನರ್ತನ. ತಿ ವ್ಯವಸ್ಥೆಯ ಕ್ರೌರ್ಯತೆಯನ್ನು ಚಿತ್ರಿಸಲು ನೀವುಗಳು ಕಂಡುಕೊಂಡ ಸಾವಿನ ಪರಿಭಾಷೆಯನ್ನು ಅರಿಯುವ ಸಾಮರ್ಥ್ಯ ಈ ನೆಲದ ಆದಿಮತೆ ಮತ್ತು ದಲಿತತ್ವಕ್ಕೆ ಇದ್ದದ್ದೇ ಆದರೆ ಇಂದೇ ನಾವೆಲ್ಲರೂ ಪ್ರಬುದ್ಧ ಭಾರತದ ನಿರ್ಮಾಣಕ್ಕೆ ಕೈಜೋಡಿಸಬೇಕಾಗಿದೆ.

ಗೆಳೆಯ ಒಂದಂತೂ ಸಾಬೀತಾಗಿದೆ. ನಮ್ಮ ಹೃದಯದಲ್ಲಿನ ಒಳಗೊಳ್ಳುವಿಕೆ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಭಾವ ಈ ವಿಶ್ವವಿದ್ಯಾನಿಲಯಗಳ ಅಗ್ರಹಾರಗಳಿಗೆ ಅರ್ಥವಾಗುವುದಿಲ್ಲ. ಬಾಬಾ ಸಾಹೇಬರು ತಮ್ಮ ಕೊಲಂಬಿಯಾ ವಿವಿಯ ಸೇರ್ಪಡೆ 'ಗ್ರೇಟ್ ಎಸ್ಕೇಪ್' ಎಂದು ಕರೆದಿದ್ದರು. ಜಾನ್ ಡ್ಯೂಯಿ ಅದನ್ನು 'ಗ್ರೇಟ್ ಇಂಟಿಗ್ರೇಷನ್' ಎಂದು ಹೆಮ್ಮೆ ಪಟ್ಟಿದ್ದರು. ಸೋದರ ಸೇಂಥಿಲ್‌ನ ಬ್ಯಾಚ್‌ನಲ್ಲಿ ಆ ಅಗ್ರಹಾರದಿಂದ ಹೊರನೂಕಲ್ಪಟ್ಟ ದಲಿತ ಚೇತನಗಳು ಅಮೆರಿಕದ ಪ್ರತಿಷ್ಠಿತ ವಿವಿಗಳಲ್ಲಿ ಉನ್ನತ ಸ್ಥಾನ ಪಡೆದಿದ್ದಾರೆ. ಅವರ್‍ಯಾರೂ ಕೂಡ ಈ ಜಾತಿಯ ವಿಷವೃಕ್ಷಗಳಾಗಿ ಕುಳಿತಿರುವ ವಿವಿಗಳಿಗೆ ಮರಳುವ ಸಾಧ್ಯತೆ ಇಲ್ಲ. ಮೊನ್ನೆ ಬ್ರಾಂಡೈಸ್ ವಿವಿಯಲ್ಲಿ ಪಿಎಚ್.ಡಿ ಪದವಿಗೆ ಸೇರಿದ ಹಿರಿಯಣ್ಣ ತನೋಜ್ ಹೇಳುವಂತೆ ಅಮೆರಿಕದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ದಲಿತರನ್ನು ಕಂಡರೆ ತುಂಬಾ ಗೌರವ. ಏಕೆಂದರೆ ಅವರಲ್ಲಿ ಮಾತ್ರ ಈ ಜಗತ್ತಿನ ಮುಂದುವರಿಕೆಯ, ಸುಸ್ಥಿರತೆಗಾಗಿ ಬೇಕಾಗಿರುವ ಇಂಟೆಲೆಕ್ಚುಯಾಲಿಟಿಯನ್ನು ಅಲ್ಲಿನ ಪ್ರಾಧ್ಯಾಪಕರು ಕಾಣುತ್ತಿದ್ದಾರಂತೆ. ಇಲ್ಲಿಂದ ಹೋದ ಬಹುತೇಕ ಬ್ರಾಹ್ಮಣಾತ್ಮಗಳು ಪಿಎಚ್.ಡಿಯ ನಂತರ ಅಲ್ಲಿಂದ ತಳ್ಳಲ್ಪಟ್ಟು ಭಾರತಕ್ಕೆ ಮರಳುತ್ತಿದ್ದಾರೆ. ಅವರ ಜಾತೀಯ ವಿಷಬೀಜದ ವರ್ತುಲ ಅರಿತಿರುವ ಅಲ್ಲಿನ ಶಿಕ್ಷಣ ವ್ಯವಸ್ಥೆ ಇವರನ್ನು ಇವರ ಪಿಎಚ್.ಡಿ ನಂತರ ಅಲ್ಲಿ ಇಟ್ಟುಕೊಳ್ಳಲು ಬಯಸುತ್ತಿಲ್ಲ, ಅಲ್ಲಿ ಒಂದು ನೌಕರಿಯನ್ನು ಗಿಟ್ಟಿಸಲೂ ಸಾಮರ್ಥ್ಯವಿಲ್ಲ. ಈ ಚೆಡ್ಡಿಗಳು ಭಾರತಕ್ಕೆ ಮರಳಿ ಈ ಉನ್ನತ ಶಿಕ್ಷಣ ಸಂಸ್ಥೆಗಳೆಂಬ ಅಗ್ರಹಾರವನ್ನು ಸೇರುತ್ತಿದ್ದಾರೆ. ಇನ್ನು ಉಳಿದ ಕಾರ್ಪೋರೇಟ್ ಕಾಚಾಗಳು ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಉಳಿದವರು ಮೋದಿಯ ಕೃಪಾಪೋಷಿತ ಎನ್‌ಜಿಓಗಳನ್ನು ಸೇರಿಕೊಳ್ಳುತ್ತಿದ್ದಾರೆ. ಬಾಬಾ ಸಾಹೇಬರು ವಿದೇಶಕ್ಕೆ ಕಳುಹಿಸಿದ 25 ಜನ ದಲಿತ ವಿದ್ಯಾರ್ಥಿಗಳು ಏಕ ಭಾರತಕ್ಕೆ ಮರಳಲಿಲ್ಲ ಮತ್ತು ನಮ್ಮ ಇಡೀ ದಲಿತ ಸಮುದಾಯದ ಇಂಟೆಲೆಕ್ಚುಯಾಲಿಟಿಯ ಚಾರಿತ್ರಿಕ ಹತ್ಯೆಗಳಿಗೆ ಇಂದು ಬ್ರಾಹ್ಮಣ ಭಾರತ ಉತ್ತರ ನೀಡಬೇಕಾಗಿದೆ.

ನೀನು ಹಚ್ಚಿದ ಹಣತೆ, ಹೋರಾಟದ ಕಿಡಿ ಎಂದೂ ಆರದಿರಲಿ ಗೆಳೆಯ. ಆ ಹಣತೆಯ ಬೆಳಕಿನಲ್ಲಿ ಈ ದೇಶ ನಿಂತಿರುವ ಪಾದ ದರ್ಶನವಾಗಲಿ.

ಗಾಲಿಬ್ ಹೇಳುವಂತೆ,

"ಹಮ್ ಕೋ ಹೈ ಉನ್‌ಸೇ, ವಫಾ ಕೀ ಉಮ್ಮೀದ್,


ಜೋ ನಹೀ ಜಾನತೇ, ವಫಾ ಕ್ಯಾ ಹೈ"

(ನಾವು ಪ್ರೀತಿ ಮತ್ತು ಮಮತೆಯನ್ನು ಯಾರಿಂದ ನಿರೀಕ್ಷಿಸುತ್ತಿರುವೆವೋ ಅವರಿಗೆ ಪ್ರೀತಿ ಮಮತೆಯ ಅರ್ಥವೇ ತಿಳಿದಿಲ್ಲ)

ಗೆಳೆಯ ನಾವು ಇಷ್ಟು ವರ್ಷ ಈ ಪ್ರಭುತ್ವ ಮತ್ತು ಸಂವಿಧಾನದ ಮೇಲೆ ವಿಶ್ವಾಸವಿಟ್ಟು ಒಂದು ದಿನ ಜಾತಿವ್ಯವಸ್ಥೆಯ, ಅಸ್ಪೃಶತೆಯ ನಿರ್ಮೂಲನೆಯ ಕನಸು ಕಾಣುತ್ತಿದ್ದೆವು. ಆದರೆ ಜಾತಿವಿನಾಶಕ್ಕಿಂತ ಮಿಗಿಲಾಗಿ ಜಾತಿ ಉಲ್ಬಣತೆಯ ಪ್ರಕ್ರಿಯೆಯಲ್ಲಿ ತೊಡಗಿರುವ ಈ ದೇಶವನ್ನಾಳುವ ವರ್ಗ ಬ್ರಾಹ್ಮಣಿಕೆಯ ಸೊಕ್ಕಿನಲ್ಲಿ ಕೊಬ್ಬಿದ ನರಿಯಂತೆ ನಮ್ಮನ್ನು ಸಾಯಿಸಲು ವಿವಿಗಳನ್ನು ಕಸಾಯಿಖಾನೆಯಂತೆ ಬಳಸಿಕೊಳ್ಳುತ್ತಿವೆ. ಇನ್ನು ನಮ್ಮನ್ನು ತಡೆಯಲು ಈ ದೇಶವನ್ನಾಳುತ್ತಿರುವ ಬ್ರಾಹ್ಮಣಾತ್ಮಗಳಿಗೆ ಸಾಧ್ಯವಿಲ್ಲ. ನೀನು ನಮ್ಮೆಲ್ಲರ ಹೆಗಲ ಮೇಲೆ ಬಹುದೊಡ್ಡ ಜವಾಬ್ದಾರಿ, ಕಲ್ಪನೆಯನ್ನು ನಿನ್ನ ನಡೆ ಮತ್ತು ಪದಗಳ ಮುಖಾಂತರ ಬಿಟ್ಟುಹೋಗಿದ್ದೀಯ. ನಾವು ಈ ಜಾತಿವ್ಯವಸ್ಥೆಯ ಸರಳುಗಳಿಂದ ನಮ್ಮ ಪ್ರೀತಿಯ ಪ್ರಬುದ್ಧ ಭಾರತದ ನಿರ್ಮಾಣಕ್ಕೆ ಕೈಜೋಡಿಸಬೇಕಾಗಿದೆ. ಪ್ರಬುದ್ಧ ಭಾರತ ನೀನು ಬಿಟ್ಟುಹೋಗಿರುವ ದಲಿತತ್ವದ ಅಂತಃಕರಣದ, ಮಮತೆಯ, ಸಮತೆಯ ಆತ್ಮ ಒಂದಾಗಲಿ. ನಿನ್ನ ಹೋರಾಟ ಇಂದು ನಮ್ಮೆಲ್ಲರ ನಿತ್ಯ ನಡಿಗೆ.

ನಿನ್ನ ಪ್ರಬುದ್ಧ ಭಾರತದ ಕನಸಲ್ಲಿ

ಪ್ರದೀಪ



ಸಿದ್ದರಾಮಯ್ಯನವರು "ಬೇಕಿದ್ದರೆ ನಾನು ದನದ ಮಾಂಸ ತಿನ್ನುತ್ತೇನೆ, ನೀವ್ಯಾರು ಕೇಳೋಕೆ" ಎಂದದ್ದನ್ನು ರೋಹಿತ್ ಮೆಚ್ಚಿ ತನ್ನ ಫೇಸ್‌ಬುಕ್ ಪೇಜಿನಲ್ಲಿ ಹಾಕಿರುವುದು.

ಚೆಡ್ಡಿಗಳ ದಕ್ಷತೆಗೆ ರೋಹಿತ್ ಬಲಿ

ನರೇಂದ್ರಮೋದಿ ನೇತೃತ್ವದ ಸರಕಾರದ, ಅದರಲ್ಲೂ ವಿಶೇಷವಾಗಿ ಸ್ಮೃತಿ ಾನಿಯವರ ಸಚಿವಾಲಯದ ಕೆಲಸದ ವೇಗ ಮತ್ತು ದಕ್ಷತೆಯನ್ನು ಂಡಾಡಲೇಬೇಕು!!

ರೋಹಿತ ಚಕ್ರವರ್ತಿ ವೇಮುಲ ಮತ್ತವನ ಗೆಳೆಯರ ಮೇಲೆ ಜರುಗಿಸುವಂತೆ ಎಬಿವಿಪಿಯು ಕೇಂದ್ರಮಂತ್ರಿ ಬಂಡಾರು ದತ್ತಾತ್ರೇಯರಿಗೆ ವಿ ಸಲ್ಲಿಸುತ್ತದೆ. ಹೈದ್ರಾಬಾದ್ ವಿವಿ ಜಾತಿವಾದಿ ಮತ್ತು ರಾಷ್ಟ್ರವಿರೋಧಿ ಟುವಟಿಕೆಗಳ ಆಡುಂಬೊಲವಾಗಿದೆ ಎನ್ನುತ್ತಾ ರೋಹಿತ ಮತ್ತವನ ಗೆಳೆಯರ ಲೆ ತಕ್ಷಣ ಕ್ರಮಜರುಗಿಸುವಂತೆ ಸ್ವತಃ ಕೇಂದ್ರಮಂತ್ರಿ ಬಂಡಾರು ದತ್ತಾತ್ರೇಯ ್ತ ಮುತುವರ್ಜಿ ವಹಿಸಿ ಸ್ಮೃತಿ ಇರಾನಿಯವರ ಕಚೇರಿಗೆ ಪತ್ರ ಬರೆಯುತ್ತಾರೆ. ಕ್ಕೆ ಪ್ರತಿಕ್ರಿಯೆಯಾಗಿ ಕ್ರಮಜರುಗಿಸುವಂತೆ ಇರಾನಿಯವರ ಸಚಿವಾಲಯದಿಂದ ವ ವಿಳಂಬವೂ ಇಲ್ಲದೆ ವಿವಿಗೆ ಪತ್ರ ಬರುತ್ತದೆ. ಮಾತ್ರವಲ್ಲ 'ಕ್ರಮ ಗಿಸಿದಿರಾ? ಕ್ರಮ ಜರುಗಿಸಿದಿರಾ?' ಎಂದು ಬೆನ್ನು ಬೆನ್ನಿಗೆ ನಾಲ್ಕು ್ಯಂಡರ್ ಗಳು ಬರುತ್ತವೆ. ಅಂದರೆ ಆರು ವಾರಗಳಲ್ಲಿ ಈ ವಿದ್ಯಾರ್ಥಿಗಳ ಲೆ ಕ್ರಮಜರುಗಿಸುವಂತೆ ಆರು ಪತ್ರಗಳು ಹರಿದಾಡುತ್ತವೆ. ವಾವ್ ಎಂತಹ ತುವರ್ಜಿ, ದಕ್ಷತೆ ಮತ್ತು ವೇಗ!!. ಜನರಿಗೆ ಒಳ್ಳೆಯದು ಮಾಡುವ ಯಗಳಲ್ಲಿಯೂ ಇದೇ ಸಂವೇದನಾಶೀಲತೆಯನ್ನು ಈ ಮಂತ್ರಿಗಳು ಮತ್ತು ಾರ ತೋರುತ್ತಿದ್ದರೆ ಈ ದೇಶ ಯಾವತ್ತೋ ಉದ್ಧಾರವಾಗಿಬಿಡುತ್ತಿತ್ತು.

- ಶ್ರೀನಿವಾಸ ಕಾರ್ಕಳ

ನನಗೆ ಅಳು ಬರುತ್ತಿದೆ.

ಇದೊಂದು ಹೃದಯ ವಿದ್ರಾವಕ ಘಟನೆ.

ಇಂತಹ ಕಂದಮ್ಮಗಳು ಇನ್ನೂ ಎಷ್ಟಿವೆಯೋ?

ಈ ಶೋಷಣೆಗೆ ಅಂತ್ಯವೇ ಇಲ್ಲವೇ?

ಇತ್ತ ಉಡುಪಿಯಲ್ಲಿ ಪೇಜಾವರರು ಶೂದ್ರರ ಬೆನ್ನ ಮೇಲೆ ಕೂತು ವಿೇರಿದರೆ ಅತ್ತ ಆ ದಲಿತ ಹುಡುಗ ತನ್ನ ಪ್ರಾಣತ್ಯಾಗ ಮಾಡಿದ. ಎಲ್ಲರಿಗೂ ಪೇಜಾವರ ಶ್ರೀ ಉಡುಪಿ ಪರ್ಯಾಯ ಉತ್ಸವದ ಾಶಯಗಳು.

- ಚೇತನ್ ಎ ಕೃಷ್ಣಪ್ಪ

ಮೌನ ಯಾತನೆ

"... ಈ ಜಗತ್ತನ್ನು ಅರ್ಥ ಮಾಡಿಕೊಳ್ಳುವಲ್ಲಿ ನಾನೇ ಎಡವಿರಬಹುದು ಪ್ರೀತಿ, ನೋವು, ಜೀವನ, ಸಾವು ಎಲ್ಲದರಲ್ಲೂ ತಪ್ಪಿರಬಹುದು. ಆದರೆ ನಾನು ಹೊಸದೊಂದು ಜೀವನ ಆರಂಭಿಸುವುದಕ್ಕಾಗಿ ಹತಾಶೆಯಿಂದ ಮುನ್ನುಗ್ಗುತ್ತಲೇ ಇದ್ದೆ. ಆದರೆ ಈ ಎಲ್ಲದರ ನಡುವೆ ಕೆಲವು ಜನರಿಗೆ ಜೀವನವೇ ಒಂದು ಶಾಪ. ನಾನು ಎಂದೂ ನನ್ನ ಬಾಲ್ಯದ ಒಂಟಿತನದಿಂದ ಹೊರಬರುವುದು ಸಾಧ್ಯವಿಲ್ಲ.."

ರೋಹಿತ್ ವೇಮುಲ ಎಂಬ ಈ ಹುಡುಗ ಏನನ್ನು ಹೇಳಲು ಹೊರಟಿದ್ದಾನೆ..? ಸಾಲುಗಳ ನಡುವೆ ಓದಿದರೆ ಅರ್ಥವಾಗಬಹುದೆ..? ಈತನ 'ಡೆತ್ ನೋಟ್' ಇಂದು ಹೃದಯವಿರುವ ಪ್ರತಿಯೊಬ್ಬರನ್ನೂ ಕಲಕಿದೆ.. ಜಾತೀಯ ತಾರತಮ್ಯವನ್ನು ಅನುಭವಿಸಿದವರನ್ನು ನೋವಿನಿಂದ ಕಲಕಿದ್ದರೆ, ಜಾತಿವಂತರನ್ನು 'ಗಿಲ್ಟ್' ನಿಂದ ಕಲಕಿರಬಹುದೇನೋ..? ಗೊತ್ತಿಲ್ಲ..

ರೋಹಿತ್ ಅಧ್ಯಯನ ಮಾಡುತ್ತಾ ಜಾತಿಯ ಕ್ರೌರ್ಯಕ್ಕೆ ತುತ್ತಾದ ಅದೇ ಹೈದರಾಬಾದ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಹಾಗೂ ರೋಹಿತನ ಗೆಳೆಯ ಕಿರಣ್ ಕುಮಾರ್ ಗೌಡ್ ಎಂಬ ದಾವಣಗೆರೆಯ ಹುಡುಗ ಇದೀಗ ತಾನೆ ಹೈದರಾಬಾದಿನಿಂದ ಫೋನ್ ಮಾಡಿದ್ದ. ಕಳೆದ ತಿಂಗಳು ಗುಲ್ಬರ್ಗ ವಿ.ವಿ. ಯಲ್ಲಿ ಭಾಷಣವೊಂದಕ್ಕೆ ನಾನು ಹೋಗಿದ್ದಾಗ ಈ ಕಿರಣ್, ಚಿಕ್ಕಮಗಳೂರಿನ ಅಜರ್, ಆಂಧ್ರದ ರಾಜಶೇಖರ್, ರಾಕೇಶ್ ರೈನಾ ಹಾಗೂ ಪ್ರಸಾದ್ ಎಂಬ ಹುಡುಗರು ಪರಿಚಿತವಾಗಿದ್ದರು. ಹೈದರಾಬಾದಿನಿಂದ ಬಂದಿದ್ದ ಇವರೆಲ್ಲ ನಮ್ಮ ಬಿ.ವಿ.ಎಸ್ ಹುಡುಗರೊಂದಿಗೆ ಯಾವುದೋ ಅಧ್ಯಯನದಲ್ಲಿ ಕೆಲಸ ಮಾಡುತಿದ್ದರು. ಇವರು 'ಅಂಬೇಡ್ಕರ್ ಸ್ಟೂಡೆಂಟ್ಸ್ ಅಸೋಸಿಯೇಷನ್'ನಲ್ಲಿ ಕೆಲಸ ಮಾಡುತ್ತಾ, ASA ಹೋರಾಟಕ್ಕೆ ಬೆಂಬಲಿಸುತ್ತಾ ರೋಹಿತ್‌ನ ಸ್ನೇಹಿತರಾಗಿದ್ದರು.. ಈ ದಲಿತ, ಹಿಂದುಳಿದ ಹಾಗೂ ಮುಸ್ಲಿಂ ಹುಡುಗರು ಒಟ್ಟೊಟ್ಟಾಗಿ ಅಂಬೇಡ್ಕರ್ ಸಿದ್ಧಾಂತದ ಮೇಲೆ ಚಳವಳಿ ರೂಪಿಸುತ್ತಿರುವುದನ್ನು ಕಂಡು ರೋಮಾಂಚಿತನಾಗಿದ್ದೆ!

"..ASA ಯೊಂದಿಗೆ ನಮ್ಮ ವಿ.ವಿ.ಯಲ್ಲಿ ಪ್ರಗತಿಪರ ವಿದ್ಯಾರ್ಥಿ ಸಂಘ, ದಲಿತ ವಿದ್ಯಾರ್ಥಿ ಸಂಘ, ಪ್ರಗತಿಪರ ನಾಟಕ ಮಂಡಳಿ, ಓಬಿಸಿ ವಿದ್ಯಾರ್ಥಿ ಸಂಘ, ಎಸ್‌ಎಫ್‌ಐ, ಫುಲೆ ಸ್ಟಡಿ ಸರ್ಕಲ್ ಮುಂತಾಗಿ ನಾವು 14 ಗುಂಪುಗಳು ಒಂದಾಗಿ ಕೆಲಸ ಮಾಡುತ್ತೇವೆ.. ಮೇಲ್ಜಾತಿ, ಮೇಲ್ವರ್ಗದ ಎಬಿವಿಪಿಯನ್ನು ಹೊರತುಪಡಿಸಿ.." ಎಂದು ಅಂದು ಆ ಹುಡುಗರು ಹೇಳಿದ್ದರು.

ಇಂದು ನನಗೆ ಫೋನ್ ಮಾಡಿದ ಕಿರಣ್ ಧ್ವನಿಯಲ್ಲಿ ದುಃಖ ಮಡುಗಟ್ಟಿತ್ತು. "..ಅಂಕಲ್, ನಮ್ಮ ವಿ.ವಿ. ಮತ್ತೊಬ್ಬ ರೋಹಿತ್‌ನನ್ನು ಸೃಷ್ಟಿಸಲು ಸಾಧ್ಯವಿಲ್ಲ.. ಅವನಂತಹ ಬುದ್ಧಿಜೀವಿ ಇಡೀ ವಿ.ವಿ.ಯಲ್ಲೇ ಇಲ್ಲ.. ಮಾರ್ಕ್ಸ್, ಅಂಬೇಡ್ಕರ್, ಫುಲೆಗಳನ್ನು ಅವನಷ್ಟು ಆಳವಾಗಿ ಅರಿಯಲು ಅವನ ವಯಸ್ಸಿನವರಿಗೆ ಸಾಧ್ಯವಿಲ್ಲ.. ನಮ್ಮ ಎಲ್ಲಾ ಸಂಘಟನೆಗಳಿಗೂ ಅವನೇ ಸಿದ್ಧಾಂತದ ಗಣಿ!! ಧರಣಿ ಕುಂತಾಗಲೂ ಓದುತಿದ್ದ.ಸುಮ್ಮನೆ ನಿಂತಾಗಲೂ ಓದುತ್ತಲೇ ನಿಲ್ಲುತ್ತಿದ್ದ ಓದೇ ಅವನ ಉಸಿರು.. ಅಕಾಡೆಮಿಕ್ ಆಗಿ ಮೊಲಿಕ್ಯುಲರ್ ಕೆಮಿಸ್ಟ್ರಿಯಲ್ಲಿ ಎಂಎಸ್ಸಿ ಮುಗಿಸಿದ್ದ, ಅವನ ಆಸಕ್ತಿಗಾಗಿ ಓಪನ್ ಯೂನಿವರ್ಸಿಟಿಯಲ್ಲಿ ಸಮಾಜವಿಜ್ಞಾನದಲ್ಲಿ ಎಂಎ ಮಾಡಿದ್ದ..! ಈಗ ಫೆಲೋಶಿಪ್ ಪಡೆದು ಎರಡನೇ ವರ್ಷದಲ್ಲಿ ಪಿಎಚ್‌ಡಿ ಮಾಡುತ್ತಿದ್ದ.. ತಂದೆಯಿಲ್ಲದ ರೋಹಿತ್‌ನನ್ನು ತಾಯಿ ಟೈಲರಿಂಗ್ ಮಾಡಿ ಓದಿಸುತ್ತಿದ್ದಳು.. ಗುಂಟೂರಿನ ಸಾವಿತ್ರಿಬಾಯಿ ಫುಲೆ ಕಾಲೋನಿಯಲ್ಲಿದ್ದ ಅಮ್ಮ, ತಮ್ಮನಿಗೆ ರೋಹಿತ್‌ನ ಫೆಲೋಶಿಪ್ ಹಣವೇ ಆಧಾರವಾಗಿತ್ತು.. ಸಂಘಪರಿವಾರದ ಜಾತೀಯತೆ ನಮ್ಮ ರೋಹಿತ್‌ನನ್ನು ಬಲಿ ತೆಗೆದುಕೊಂಡಿತು ಅಂಕಲ್.." ಎಂದು ಕಿರಣ್ ಗದ್ಗದಿತನಾದ.


ನಾನು ಮತ್ತೆ ಮತ್ತೆ ರೋಹಿತ್‌ನ 'ಡೆತ್ ನೋಟ್' ಓದಿದೆ.. ಆತ ಹೇಳಿದ್ದಕ್ಕಿಂತಲೂ ಹೇಳದೇ ಉಳಿದಿದ್ದೇ ಹೆಚ್ಚು ಎನಿಸುತಿತ್ತು.. ಐದಾರು ವರ್ಷಗಳ ಹಿಂದೆ ಜೆಕೆವಿಕೆ ವಿಶ್ವವಿದ್ಯಾಲಯದಲ್ಲಿ ಇದೇ ಜಾತಿಹಿಂಸೆಗೆ ತುತ್ತಾದ ರಮೇಶ್ ನೆನಪಾದ. ಅದೇ ರೀತಿ ಸುಖದೇವ್ ಥೋರಟ್ ವರದಿಯಲ್ಲಿ ನಮೂದಿಸಿರುವ ಪ್ರತಿಷ್ಠಿತ ಐಐಎಂ, ಐಐಟಿ, ಏಮ್ಸ್‌ಗಳಲ್ಲಿ ಜಾತಿನಿಂದನೆ, ಜಾತಿ ಕಿರುಕುಳಕ್ಕೆ ತುತ್ತಾದ 18 ಮಂದಿ ಅಸ್ಪೃಶ್ಯ ಆತ್ಮಗಳು ನೆನಪಾದವು...


"... ನಾನು ಹೋದನಂತರ ನನ್ನ ಮಿತ್ರರಿಗಾಗಲಿ, ಶತ್ರುಗಳಿಗಾಗಲಿ ತೊಂದರೆ ಕೊಡಬೇಡಿ.." ಎಂಬ ಮಾತನ್ನು ರೋಹಿತ್‌ನ ಡೆತ್‌ನೋಟ್‌ನಲ್ಲಿ ಓದಿದಾಗ.. ಅಂದು ಬಾಬಾಸಾಹೇಬರು ಪೂನಾ ಒಪ್ಪಂದದ ನಂತರ ಪಟ್ಟಿರಬಹುದಾದ ಯಾತನೆಯ ಮೌನ ನೆನಪಾಯಿತು..

ರೋಹಿತ್ "ಜೈ ಭೀಮ್" ಎಂದು ಪತ್ರ ಮತ್ತು ತನ್ನ ಜೀವನ ಮುಗಿಸಿದ್ದು ಅನೇಕ ಪ್ರಶ್ನೆಗಳಿಗೆ ಉತ್ತರಿಸಿದ ಸಂಕೇತದಂತೆ ಕಾಣುತ್ತಿತ್ತು..


■ ಸಿ. ಎಸ್. ದ್ವಾರಕಾನಾಥ್

ಡಕಾಯಿತಿಗಿಳಿದ ಪೊಲೀಸ್ ಪೇದೆ


ಕ್ರಿಮಿನಲ್ ಪೇದೆ ಕೃಷ್ಣಮೂರ್ತಿ.



ಮಾದನಾಯಕನಹಳ್ಳಿ ಪೊಲೀಸ್ ಠಾಣೆ,


ಬೆಂಗಳೂರು ಗ್ರಾಮಾಂತರ ಎಸ್‌ಪಿ ರಮೇಶ್ ಬಾನೂತ್

ಕೈ ಕೆಟ್ಟರೆ ದಕಾಯಿತನಾಗಬಹುದು ಆದರೆ ಪೊಲೀಸ್ ಕೆಟ್ಟರೆ? ಈ ಪ್ರಶ್ನೆ ಕೇಳಿದ್ದು ಯಾರೋ ಮಾಮೂಲಿ ಪ್ರಜೆಯಲ್ಲ, ಹೈಕೋರ್ಟ್ ನ್ಯಾಯಮೂರ್ತಿಗಳು!

ಹರ ಕೊಲ್ಲಲ್ ಪರ ಕಾಯ್ವನೆ ಎಂಬಂತೆ ಬೆಂಗಳೂರು ಗ್ರಾಮಾಂತರ ಎಸ್‌ಪಿ ರಮೇಶ್ ಬಾನೂತ್ ಹೈಕೋರ್ಟ್ ಛೀಮಾರಿಗೀಡಾಗುವಂತೆ ಮಾಡಿದ ಪ್ರಳಯಾಂತಕ ಪೊಲೀಸ್‌ನಪ್ಪನ ಹೆಸರು ಕೃಷ್ಣಮೂರ್ತಿ!

ಈತನ ಕುಖ್ಯಾತಿ, ಕೈಚಳಕ, ಕೇಡಿಬುದ್ಧಿಗೆ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಾಹೇಬರೇ ಇಂಥಾದೊಂದು ಉದ್ಗಾರ ತೆಗೆಯುತ್ತಾರೆಂದರೆ ಇನ್ನು ಈತನ ಹಾವಳಿಗೀಡಾದ ಮಾದನಾಯಕನಹಳ್ಳಿ, ನೆಲಮಂಗಲ, ಬೆಂಗಳೂರಿನ ಪೀಣ್ಯ ಪ್ರದೇಶದ ಸರಕು ಸಾಗಾಣಿಕೆದಾರರು, ಲಾರಿ ಗೋಡೌನ್ ಮಾಲಿಕರು, ಇಸ್ಪೀಟು ದೊರೆಗಳು, ರೌಡಿಗಳು, ಜನಸಾಮಾನ್ಯರು ಮುಗ್ಧ ಗೃಹಿಣಿಯರ ಪಾಡು ಏನಾಗಿರಬೇಡ?

ಈತನ ಮೇಲಿರುವ ಆರೋಪವೇನೂ ಸಣ್ಣದ್ದಲ್ಲ. ಕುಖ್ಯಾತ ದರೋಡೆಕೋರನೊಬ್ಬನನ್ನು ಛೂಬಿಟ್ಟು ಗೃಹಿಣಿಯೊಬ್ಬಳ ಮನೆಗೆ ನುಗ್ಗಿಸಿದ್ದೇ ಆಕೆಯ ಒಡವೆ ಮಾಂಗಲ್ಯದ ದರೋಡೆ ಮಾಡಿಸಿದ್ದು!

ಹಾಗಂತ ಇದೊಂದೇ ಈತನ ಅಪರಾಧವಲ್ಲ. ನೆಲಮಂಗಲದ ರಕ್ತಪಿಪಾಸು ಚೆತ್ತನಗೆರೆ ಸೀನನ ಅಳಿದುಳಿದ ರೌಡಿ ಪಡೆಯನ್ನು ಜಮಾಯಿಸಿದ್ದೇ ಜೈಲಿಂದ ಬಿಡುಗಡೆಯಾಗಿ ಬಂದ ಎದುರಾಳಿ ಶಂಕ್ರನ ಪಡೆಯೊಂದಿಗೆ ರಾಜಿ ಮಾಡಿಸಿದ್ದೇನು? ಪೀಣ್ಯ ಸುತ್ತಮುತ್ತಲ ಕೇಡಿ ಕಿರಾತಕರಿಂದ ಹಿಡಿದು ನೆಲಮಂಗಲದ ತನಕದ ಸರಗಳ್ಳರು, ಮನೆಗಳ್ಳರು, ರಾಬರಿ, ಡಕಾಯಿತರೊಂದಿಗಿನ ನೆಂಟಸ್ತಿಕೆಯೇನು? ಬೆಂಗಳೂರು-ಪೂನಾ ರಾಷ್ಟ್ರೀಯ ಹೆದ್ದಾರಿಗುಂಟ ತುಮಕೂರಿನಿಂದೀಚೆಯ ಸ್ಕ್ರಾಪ್‌ದಂಧೆ, ಗೋಡೌನ್ ವಸೂಲಿ ದಂಧೆ, ಕಲಬೆರಕೆ, ಕಳ್ಳಮಾಲುಗಳ ಮಾಫಿಯಾ ಜೊತೆಗಿನ ವಹಿವಾಟೇನು? ಮತ್ತು ಇಂಥ ಸಕಲ ಸಮಾಜ ಕಂಟಕರಿಗೆಲ್ಲ ಲೈಸೆನ್ಸ್ ಕೊಡುವ, ಕಪ್ಪ ವಸೂಲಿ ಮಾಡುವ ಅಡ್ಡೆಯನ್ನಾಗಿ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಕುಖ್ಯಾತಿಗೆ ಕಾರಣಕರ್ತನಾಗಿದ್ದೇನು?

ಒಂಟಿ ಗೃಹಿಣಿಗೆ

ಒಬ್ಬ ಯಃಕಶ್ಚಿತ್ ಪೊಲೀಸ್ ಪೇದೆ ನಿಯತ್ತು ಕೆಟ್ಟನೆಂದರೆ ಏನೆಲ್ಲಾ ಅನಾಹುತ ಸಾಧ್ಯ ಎಂಬುದನ್ನು ಸಾಬೀತುಮಾಡಿ ತೋರಿಸಿದವನೇ ಈ ಕೃಷ್ಣಮೂರ್ತಿ. ಈತ ಸದ್ಯ ಬೆಂಗಳೂರು ಸೆರಗಿನ ಮಾದನಾಯಕನಹಳ್ಳಿಯ ಕ್ರೈಂ ಪೇದೆ. ಈತನ ಕುಖ್ಯಾತಿಗೆ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳೇ ದಂಗುಬಡಿದು ಹೋಗುವಂತಾಗಿದ್ದು ಇಲ್ಲಿಗೆ ವರ್ಷದ ಹಿಂದಷ್ಟೇ ನಡೆದ ಒಂಟಿ ಗೃಹಿಣಿಯೊಬ್ಬಳ ದರೋಡೆ ಪ್ರಕರಣ ಮತ್ತು ಅದರ ಮುಖ್ಯ ಆರೋಪಿ ಶೇಷ ಅಲಿಯಾಸ್ ಶಶಿಪ್ರಸಾದ್ ಎಂಬ ಕ್ರಿಮಿನಲ್. ಮಾಗಡಿ ರಸ್ತೆಯ ಶಿಗೇಹಳ್ಳಿ ಗೇಟ್ ಏರಿಯಾದ ರೌಡಿಯಾದ ಶೇಷನ ವಿರುದ್ಧ ತಾವರೆಕೆರೆ, ಕಾಮಾಕ್ಷಿಪಾಳ್ಯ, ಪೀಣ್ಯ ಪೊಲೀಸ್ ಠಾಣೆಗಳಲ್ಲಿ ರಾಬರಿ, ಡಕಾಯಿತಿ, ಕೊಲೆಯತ್ನ, ಅಪಹರಣದಂಥ ಗುರುತರ ಕ್ರಿಮಿನಲ್ ಪ್ರಕರಣಗಳಿವೆ. ಈತ ವರ್ಷದ ಹಿಂದಷ್ಟೇ ಪೊಲೀಸರ ಗುಂಡಿಗೆ ಬಲಿಯಾದ ನೆಲಮಂಗಲದ ಪಾತಕಿ ಚೆತ್ತನಗೆರೆ ಸೀನನ ಸಹಚರ. 2015ರ ಫೆಬ್ರವರಿಯಲ್ಲಿ ನೆಲಮಂಗಲದ ಸಮೀಪದ ಮನೆಯೊಂದಕ್ಕೆ ನುಗ್ಗಿದ್ದೇ ಆ ಮನೆಯಲ್ಲಿದ್ದ ಒಂಟಿ ಗೃಹಿಣಿಯ ಮೇಲೆ ದಾಳಿ ನಡೆಸಿ ಆಕೆಯ ಕತ್ತಿನಲ್ಲಿದ್ದ ಮಾಂಗಲ್ಯ ಒಡವೆಗಳನ್ನು ಕಿತ್ತೊಯ್ಯುವಾಗಲೇ ನೆರೆಹೊರೆಯ ಜನ ಸುತ್ತುವರಿದು ಈತನನ್ನು ಹಿಡಿದಿದ್ದಾರೆ. ಅದೇ ಹೊತ್ತಿಗೆ ಈತನ ಜೊತೆ ಮನೆಗೆ ನುಗ್ಗಿದ್ದ ಜಯರಾಮನೂ ಜನಕ್ಕೆ ಸಿಕ್ಕಿಬೀಳುತ್ತಾನೆ.

ನೆಲಮಂಗಲ ಪೊಲೀಸರು ಇಬ್ಬರನ್ನೂ ಠಾಣೆಗೆ ಎಳೆದೊಯ್ದು ಬಾಯಿ ಬಿಡಿಸಿದಾಗಲೇ ಗೊತ್ತಾಗಿದ್ದು; ಈ ದರೋಡೆಗೆ ಕಾರಣನಾದವನು ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಕ್ರೈಂ ಪೇದೆ ಕೃಷ್ಣಮೂರ್ತಿ!

ಹಕೀಕತ್ತೇನೆಂದರೆ ಪಾತಕಿ ಶೇಷನ ಜೊತೆ ದರೋಡೆಗೆ ಬಂದಿದ್ದ ಜಯರಾಮ ಬೇರೆ ಯಾರೂ ಅಲ್ಲ ಕ್ರೈಮ್ ಪೇದೆ ಕೃಷ್ಣಮೂರ್ತಿಯ ಖಾಸಾ ತಮ್ಮ!



ತನ್ನ ಒಡಹುಟ್ಟಿದ ತಮ್ಮನನ್ನೇ ಪಾತಕಿ ಶೇಷನ ಜೊತೆಮಾಡಿ ಒಂಟಿ ಗೃಹಿಣಿಯನ್ನು ದೋಚಿಸಿದ್ದ ಕ್ರೈಂ ಪೇದೆ ಕೃಷ್ಣಮೂರ್ತಿಗೂ ಆ ಗೃಹಿಣಿಗೂ ಯಾವುದೇ ಸಂಬಂಧವಿಲ್ಲದೆ ಹೋದರೂ ಕೇವಲ ದೋಚುವ ಉದ್ದೇಶದಿಂದಲೇ ಕೃಷ್ಣಮೂರ್ತಿ ಮರೆಯಲ್ಲಿ ನಿಂತು ಮಾಡಿಸಿದ್ದ. ಮುಖ್ಯ ಆರೋಪಿ ಶೇಷನ ಹೇಳಿಕೆಯನ್ನು ನೆಲಮಂಗಲ ಪೊಲೀಸರು ಯಥಾವತ್ತಾಗಿ ದಾಖಲಿಸಿಕೊಂಡರು. ಆ ಪ್ರಕಾರ ದರೋಡೆ ಪ್ರಕರಣದ ಅಪರಾಧಿಗಳಲ್ಲಿ ಪೇದೆ ಕೃಷ್ಣಮೂರ್ತಿಯೂ ಸೇರಬೇಕಿತ್ತಲ್ಲವೆ?

ಪೇದೆಯೇ ಸೂತ್ರಧಾರ

ಹಾಗಾಗಲಿಲ್ಲ, ನೆಲಮಂಗಲ ಪೊಲೀಸರು ಜಯರಾಮನ ಜೊತೆ ಶೇಷನನ್ನಷ್ಟೇ ಆರೋಪಿಯಾಗಿಸಿ ಚಾರ್ಜ್‌ಶೀಟ್ ಸಲ್ಲಿಸಿಬಿಟ್ಟರು. ನೆಲಮಂಗಲ ಜೆಎಂಎಫ್‌ಸಿ ಕೋರ್ಟು ಶೇಷನ ಜಾಮೀನು ಅರ್ಜಿಯನ್ನು ತಿರಸ್ಕರಿಸಿತು. ಸೆಷನ್ಸ್ ಕೋರ್ಟು ಕೂಡ ಅದನ್ನೇ ಎತ್ತಿಹಿಡಿಯಿತು. ವಿಧಿಯಿಲ್ಲದೆ ಹೈಕೋರ್ಟ್ ಮೆಟ್ಟಿಲೇರಿದ ಶೇಷ ತನಗೆ ಜಾಮೀನು ನೀಡುವಂತೆ ಪದೇ ಪದೇ ಅರ್ಜಿ ಹಾಕುತ್ತಿದ್ದಂತೆ ಇಡೀ ಪ್ರಕರಣವನ್ನು ಪರಿಶೀಲಿಸಿದ ನ್ಯಾಯಮೂರ್ತಿಗಳಿಗೆ ಇಡೀ ಪ್ರಕರಣವೇ ವಿಚಿತ್ರವೆನಿಸತೊಡಗಿತು. ಆತ ನೆಲಮಂಗಲ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಪೇದೆ ಕೃಷ್ಣಮೂರ್ತಿಯ ಹೆಸರಿತ್ತಲ್ಲ; ಆಗ ಹೈಕೋರ್ಟ್ ಇಡೀ ಪ್ರಕರಣವನ್ನೇ ಗಂಭೀರವಾಗಿ ಪರಿಗಣಿಸಿತು.

ಸರ್ಕಾರಿ ವಕೀಲರ ಪ್ರಕಾರ ಇಡೀ ಪ್ರಕರಣದ ಸೂತ್ರಧಾರನೇ ಪೇದೆ ಕೃಷ್ಣಮೂರ್ತಿ. ಆತನನ್ನೇ ಮೊದಲ ಆರೋಪಿಯನ್ನಾಗಿಸಬೇಕಿತ್ತು, ಬದಲಿಗೆ ಆತ ಇನ್ನೂ ಮಾದನಾಯಕನಹಳ್ಳಿಯಲ್ಲಿ ಪೇದೆಯಾಗಿಯೇ ಮುಂದುವರಿದಿದ್ದ. ಅಲ್ಲಿಗೆ ಇಲಾಖೆಯೇ ಏನೋ ಕಣ್ಣಾಮುಚ್ಚಾಲೆ ಆಡುತ್ತಿದೆಯೆಂಬುದು ಕೋರ್ಟಿಗೆ ಮನದಟ್ಟಾಗಿತ್ತು. ಬೆಂಗಳೂರು ಗ್ರಾಮಾಂತರ ಎಸ್‌ಪಿ ರಮೇಶ್ ಭಾನಂತ್‌ಗೆ ಸಮನ್ಸ್ ನೀಡಿದ್ದಾರೆ. ಪ್ರಕರಣದಲ್ಲಿ ಮುಖ್ಯ ಆರೋಪಿಯನ್ನಾಗಿ ದಾಖಲಿಸಬೇಕಿದ್ದ ಪೇದೆ ಕೃಷ್ಣಮೂರ್ತಿಯನ್ನು ಆರೋಪ ಪಟ್ಟಿಗೆ ಸೇರಿಸದೇ ಕೇವಲ ಅಮಾನತ್ತಿನಲ್ಲಿಟ್ಟು ತಿಪ್ಪೆ ಸಾರಿಸಿದ್ದಕ್ಕೆ ಎಸ್‌ಪಿ ಭಾನಂತ್ ಸಾಹೇಬರು ಹೈಕೋರ್ಟ್‌ನಿಂದ ಛೀಮಾರಿ ಮಾಡಿಸಿಕೊಳ್ಳಬೇಕಾಯಿತು!

ಪೊಲೀಸ್ ಪೇದೆಯೊಬ್ಬನ ನಿಯತ್ತು ಕೆಟ್ಟರೆ ಹೇಗೆ ಇಡೀ ಇಲಾಖೆಯೇ ತಲೆತಗ್ಗಿಸಬೇಕಾಗುತ್ತದೆ ಎಂಬುದಕ್ಕೆ ಇದು tip of the iceberg ಅಷ್ಟೆ. ಮಾದನಾಯಕನಹಳ್ಳಿ ಪೊಲೀಸ್ ಠಾಣೆ ಪ್ರಾರಂಭವಾಗಿದ್ದು ಇಲ್ಲಿಗೆ ಐದು ವರ್ಷದ ಹಿಂದೆ. ಬೆಂಗಳೂರು ನೆಲಮಂಗಲದ ತನಕ ವಿಸ್ತರಿಸುತ್ತಾ ಹೋದಂತೆಲ್ಲ ಪೀಣ್ಯ ಪೊಲೀಸ್ ಠಾಣೆಯ ಗಡಿಗೇ ಹೊಂದಿಕೊಂಡಂತಿದ್ದ ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ಎಲ್ಲಿಲ್ಲದ ಡಿಮ್ಯಾಂಡ್ ಸೃಷ್ಟಿಯಾಗಿತ್ತು. ಹೇಳಿಕೇಳಿ ರಿಯಲ್ ಎಸ್ಟೇಟ್ ಹುತ್ತವದು. ಬೆಂಗಳೂರು ನಗರ ಪೊಲೀಸ್ ಕಮೀಷನರ್ ವ್ಯಾಪ್ತಿಗೂ ಬಾರದೆ ಬೆಂಗಳೂರು ಗ್ರಾಮಾಂತರಕ್ಕೆ ಒಳಪಟ್ಟಿದ್ದರಿಂದ ಆಡಳಿತಾತ್ಮಕವಾಗಿ ಅಂಥಾ ಬಿಗಿಯೇನಿರಲಿಲ್ಲ, ನೆಲಮಂಗಲ ಡಿವೈಎಸ್‌ಪಿ ಬಿಟ್ಟರೆ ಪೊಲೀಸರು ತಲೆಬಾಗಬೇಕಿದ್ದದ್ದು ಬೆಂಗಳೂರು ಗ್ರಾಮಾಂತರ ಎಸ್‌ಪಿಗೆ ಮಾತ್ರ. ಇದರ ಲಾಭ ಪಡೆದವನು ಕ್ರೈಂ ಪೇದೆ ಕೃಷ್ಣಮೂರ್ತಿ.



ಚೆತ್ತನಗೆರೆ ಶಂಕರ-ಸೀನ

ಬಿಎಮ್ಮೆಲ್ ಹತ್ಯೆ

ಇದಕ್ಕೂ ಮುನ್ನ ತಾವರೆಕೆರೆ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿದ್ದು ಆಗ ಸುತ್ತ ಮುತ್ತಲ ರೌಡಿಗಳು, ನೆಲಕಂಟಕರು, ಇಸ್ಪೀಟ್ ಅಡ್ಡಾಗಳು, ಮೈಕಸುಬು ಮನೆಗಳೆಲ್ಲದರಿಂದಲೂ ಹಫ್ತಾ ವಸೂಲಿ ಮಾಡಿಯೇ ಕೊಬ್ಬಿದ ಈತ ಕೊನೆ ಕೊನೆಗೆ ಯಾವ ಮಟ್ಟಕ್ಕೆ ಬೆಳೆದನೆಂದರೆ ತಾವರೆಕೆರೆ ಪೊಲೀಸ್ ಠಾಣೆಗೆ ತನಗೆ ಬೇಕಾದ ಎಸ್‌ಐಯನ್ನೇ ಹಾಕಿಸಿಕೊಂಡು ಹಾವಳಿಯಿಡುತ್ತಿದ್ದ. ಹೇಳಿಕೇಳಿ ಈತ ಕೂಡ ಅದೇ ಸುತ್ತಮುತ್ತಲ ನಿವಾಸಿ. ಮಾಗಡಿರಸ್ತೆ ದೊಡ್ಡಬಿದರಕಲ್ಲು ಪಕ್ಕದ ಗಂಗೊಂಡನಹಳ್ಳಿ ಈತನ ಹುಟ್ಟೂರು. ತಾವರೆಕೆರೆ ಲಿಮಿಟ್ಟಿನಲ್ಲಿದ್ದಷ್ಟೂ ದಿನ ಕಡಬಗೆರೆ ಪಾಯ್ಸನ್ ರಾಮನ ಹೆಸರು ಬಳಸಿಕೊಂಡು ಸೈಟ್‌ಗೆ ಬೇಲಿ ಸುತ್ತುತ್ತಿದ್ದ. ಈತನ ಹಾವಳಿಗೆ ರೋಸತ್ತ ಜನ ಕೊಟ್ಟ ದೂರುಗಳು ಅಷ್ಟಿಷ್ಟಲ್ಲ, ಇನ್ನೇನು ಸಾರ್ವಜನಿಕರೇ


ಚೆತ್ತನಗೆರೆ ಗ್ಯಾಂಗ್‌ಗೆ ಈತನೇ ಗಾಡ್‌ಫಾದರ್


ಇಷ್ಟೆಲ್ಲಾ ಅಕ್ರಮವೆಸಗುತ್ತಿದ್ದರೂ ಪೇದೆ ಕೃಷ್ಣಮೂರ್ತಿಯ ಮೇಲೆ ಇಲಾಖೆ ಕಣ್ಣಿಟ್ಟಿರಲಿಲ್ಲವೇ?

ವಿಕಟವೆಂದರೆ ಬೆಂಗಳೂರು ಗ್ರಾಮಾಂತರ ಎಸ್‌ಪಿ ಭಾನೂತ್‌ರ ಛೇಂಬರಿಗೆ ಹೊತ್ತಲ್ಲದ ಹೊತ್ತಲ್ಲೂ ಹೋಗುವ ಸಲುಗೆಯಿದ್ದದ್ದು ಪೇದೆ ಕೃಷ್ಣಮೂರ್ತಿಗೆ ಮಾತ್ರ. ಎಸ್‌ಪಿ ಛೇಂಬರಿನಲ್ಲಿ ಪೇದೆಯೊಬ್ಬ ಕುರ್ಚಿ ಹಾಕಿಕೂತು ಹರಟೆ ಹೊಡೆಯುತ್ತಾನೆಂದರೆ ಅದರ ಮರ್ಮ ಏನಿರಬಹುದು? ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ಅನಭಿಷಕ್ತ ದೊರೆಯಂತಿದ್ದ ಕೃಷ್ಣಮೂರ್ತಿ ಗ್ರಾಮಾಂತರದ ಬೇರೆ ಬೇರೆ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲೂ ಇಸ್ಪೀಟ್ ದರೋಡೆ ನಡೆಸಲು ಹೇಗೆ ಸಾಧ್ಯ? ಈ ಬಗ್ಗೆ ಎಸ್‌ಪಿ ಸಾಹೇಬರು ಮಾತ್ರವೇ ಉತ್ತರಿಸಲು ಸಾಧ್ಯ!

ಇನ್ನು ನೆಲಮಂಗಲ ಗ್ಯಾಂಗ್‌ವಾರ್ ವಿಷಯಕ್ಕೆ ಬಂದರೆ ಚೆತ್ತನಗೆರೆ ಸೀನನ ಅಳಿದುಳಿದ ರೌಡಿ ಸಹಚರರೆಲ್ಲ ಆತನ ಜೊತೆಗೇ ಸುತ್ತಾಡಿಕೊಂಡಿರುತ್ತಾರೆ. ಇಲ್ಲಿಗೆ ಎಂಟು ತಿಂಗಳ ಹಿಂದೆ ಜೈಲಿಂದ ಬಿಡುಗಡೆಗೊಂಡ ಸೀನನ ಎದುರಾಳಿ ಚೆತ್ತನಗೆರೆ ಶಂಕರನಿಗೂ ಈತನೇ ಗಾಡ್‌ಫಾದರ್. ಸೀನನ ಗ್ಯಾಂಗಿಗೂ ಶಂಕರನ ತಂಡಕ್ಕೂ ಈತನೇ ರಾಜಿ ಮಾಡಿಸಿದ್ದು ರಹಸ್ಯವೇನಲ್ಲ. ಹ್ಯಾಡಾಳು ದೇವಿಯ ಮಗ ಹರ್ಷ ಮತ್ತು ಶಂಕರನನ್ನು ಒಂದೇ ಟೇಬಲ್ಲಿನಲ್ಲಿ ಕಲೆ ಹಾಕಿ ರಾಜಿ ಕುದುರಿಸಿದ ಪೇದೆ ಕೃಷ್ಣಮೂರ್ತಿಗೆ ಇಡೀ ನೆಲಮಂಗಲದ ಅಂಡರ್‌ವರ್ಲ್ಡ್‌ಗೆ ತಾನೇ ಅಧಿಪತಿಯಾಗುವ ಮೂಲಕ ರಿಯಲ್ ಎಸ್ಟೇಟ್ ದಂಧೆಗಿಳಿಯುವ ದುರಾಸೆ.


ಮೂರು ತಿಂಗಳ ಹಿಂದಷ್ಟೇ ಚೆತ್ತನಗೆರೆ ಶಂಕರನ ಮದುವೆಯಾಯಿತು. ಮದುವೆ ನಡೆದದ್ದು ಕೇರಳದಲ್ಲಿ, ಆ ಮದುವೆಗೆ


ಶಾಸಕ ವಿಶ್ವನಾಥ್


ವಡೇರಹಳ್ಳಿ ಜಯರಾಮ


ಪೇದೆ ಕೃಷ್ಣಮೂರ್ತಿಯೇ ಮುಖ್ಯ ಅತಿಥಿಯೆಂಬುದೂ ನಿಗೂಢವೇನಲ್ಲ, ಯಃಕಶ್ಚಿತ್ ಪೇದೆಯಾದರೂ ಈತನ ಅಣ್ಣ ಜಯರಾಮ ಐಷಾರಾಮೀ ಇನ್ನೋವಾ ಗಾಡಿಯಲ್ಲಿ ಬರುತ್ತಾನೆ. ಮಾದನಾಯಕನಹಳ್ಳಿ, ಮಾಗಡಿರಸ್ತೆಯ ಹಾರೋಹಳ್ಳಿ, ಪೀಣ್ಯ ಏರಿಯಾಗಳಲ್ಲಿ ದೋಚಿದ ಸೈಟುಗಳಲ್ಲೇ ಮನೆಯೆಬ್ಬಿಸುತ್ತಿದ್ದಾನೆ. ಅಷ್ಟಕ್ಕೂ ಪೇದೆ ಕೃಷ್ಣಮೂರ್ತಿಗೆ ಈ ಪಾಟಿ ರಾಜಕೀಯ ಗಾಡ್‌ಫಾದರ್ ಯಾರಾದರೂ ಇರಲೇ ಬೇಕಲ್ಲವೇ? ಆತನೇ ವಡೇಗಹಳ್ಳಿ ಜಯರಾಮ. ಸೀನ ಬದುಕಿದ್ದಷ್ಟೂ ಕಾಲ ಆತನ ರಾಜಕೀಯ ಉಸಾಬರಿ ನೋಡಿಕೊಳ್ಳುತ್ತಿದ್ದ ವಡೇರಹಳ್ಳಿ ಜಯರಾಮ ಈಗ ಈ ಪೇದೆಯನ್ನಿಟ್ಟು ಕೊಂಡು ಅಂಡರ್‌ವರ್ಲ್ಡ್ ನಿಯಂತ್ರಿಸುತ್ತಾನೆ.

ಕಳೆದ ಪಂಚಾಯ್ತಿ ಚುನಾವಣೆಯಲ್ಲಿ ಹುಸ್ಕೂರು ಪಂಚಾಯ್ತಿ ಅಧ್ಯಕ್ಷ ಚುನಾವಣೆಯ ಹಿಂದಿನ ದಿನವೇ ಕಾಂಗ್ರೆಸ್ಸಿನ ಆರು ಮಂದಿ ಪಂಚಾಯ್ತಿ ಸದಸ್ಯರನ್ನು ಅಪಹರಿಸಲಾಯಿತು. ಇದು ವಡೇರಹಳ್ಳಿ ಜಯರಾಮ ತನ್ನ ತಮ್ಮ ಸೋಮಶೇಖರನನ್ನು ಅಧ್ಯಕ್ಷನನ್ನಾಗಿಸಲು ಮಾಡಿದ ಅಪಹರಣವೆಂಬ ಬಗ್ಗೆ ಯಾರಿಗೂ ಅನುಮಾನವಿರಲಿಲ್ಲ. ಆದರೆ ಅಪಹರಿಸಿದ ಪಂಚಾಯ್ತಿ ಸದಸ್ಯರನ್ನು ತರೀಕೆರೆಗೊಯ್ದು ಅಡಗಿಸಿದ್ದು ಪೇದೆ ಕೃಷ್ಣಮೂರ್ತಿಯೆ. ಅದಕ್ಕೆ ಚೆತ್ತನಗೆರೆ ಶಂಕರ ಮತ್ತು ಮಂಜನ ಪಡೆಯನ್ನು ಕೃಷ್ಣಮೂರ್ತಿ ಬಳಸಿದ್ದ. ಪೊಲೀಸರು ದಾಳಿ ನಡೆಸಿ ಅಪಹೃತರನ್ನೆಲ್ಲ ಕರೆತಂದರಾದರೂ ಪೇದೆ ಕೃಷ್ಣಮೂರ್ತಿಯ ವಿರುದ್ಧ ಏನೇನೂ ಕ್ರಮ ಜರುಗಿಸಲಿಲ್ಲ, ಶಾಸಕ ವಿಶ್ವನಾಥ್‌ರೇ ಈ ಬಗ್ಗೆ ಪೇದೆ ವಿರುದ್ಧ ಎಸ್‌ಪಿಗೆ ದೂರುಕೊಟ್ಟರಾದರೂ ಈ ಹೊತ್ತಿಗೆ ಕಾಂಗ್ರೆಸ್ ಬಾವುಟ ಹಿಡಿದಿದ್ದ ಪೇದೆ ವಿರುದ್ಧ ಯಾರೂ ಕ್ರಮ ಜರುಗಿಸುವಂತಿರಲಿಲ್ಲ.


ಗೃಹಮಂತ್ರಿ ಪರಮೇಶ್ವರ್

ದರೋಡೆಗೊಳಗಾದ ಗೋಡೌನ್





...ಬೀದಿಗಿಳಿದಾರೆಂದು ಹೆದರಿದ ಇಲಾಖೆಯ ಸೂತ್ರಧಾರಿಗಳು ...ದಕ್ಕಿಂತಲೂ ಫಲವತ್ತು ಆಯಕಟ್ಟಿನ, ಅತೀ ಸೂಕ್ಷ್ಮವಾದ ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ಈತನನ್ನು ...ರಮಾಡಿಕೊಂಡರು.

ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ ಆಗಷ್ಟೇ ಶುರುವಾಗಿದ್ದ ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ಕಾಲಿಟ್ಟ ಕೃಷ್ಣಮೂರ್ತಿ ಠಾಣೆಗೆ ಬಂದ ಎಸ್‌ಐಗಳೆಲ್ಲರನ್ನೂ ತನ್ನ ತಾಳಕ್ಕೆ ತಕ್ಕಂತೆ ಆಡಿಸುತ್ತಿದ್ದ. ಮೊದಲೇ ವಸೂಲಿ ಟೆಕ್ನಿಕ್ ಗೊತ್ತಿತ್ತಲ್ಲ, ಮಾದನಾಯಕನಹಳ್ಳಿ ಠಾಣೆಯೆಂದರೆ ಅತ್ತ ಚಿತ್ತನಗೆರೆ ಸೀನ, ಬಂಡೆ ಮಂಜ, ಪಾಯ್ಸನ್ ರಾಮ, ಚಿತ್ತನಗೆರೆ ಶಂಕ್ರ, ರಾಮ-ಲಕ್ಷ್ಮಣ, ಮಹೇಶ್ ಗೌಡ ...ಯಂತಾದ ಘಟಾನುಘಟಿ ರೌಡಿಗಳೆಲ್ಲರ ಕರ್ಮಭೂಮಿಯಿದ್ದಂತೆ. ಈ ವ್ಯಾಪ್ತಿಯಲ್ಲೇ ಜೆಡಿಎಸ್ ನಾಯಕ ಬಿನ್ನಮಂಗಲ ಕೃಷ್ಣಪ್ಪನವರ ಹತ್ಯೆ ನಡೆದದ್ದು.

ಬಿನ್ನಮಂಗಲ ಕೃಷ್ಣಪ್ಪ ಹತ್ಯೆಯ ನಂತರ ಚಿತ್ತನಗೆರೆ ಸೀನನ ಇಡೀ ತಂಡದ ಬೆನ್ನು ಹತ್ತಿದ ಬೆಂಗಳೂರು ಗ್ರಾಮಾಂತರ ಅಡಿಷನಲ್ ಎಸ್‌ಪಿ ನಾಗರಾಜ್ ಸೀನ ಬಳಸುತ್ತಿದ್ದ ಎಲ್ಲಾ ಮೊಬೈಲ್‌ಗಳ ಕಾಲ್ ಡಿಟೇಲ್ಸ್ ತೆಗೆಸಿದಾಗ ಪೇದೆ ಕೃಷ್ಣಗೆ ಶೀನನ ಮೊಬೈಲಿನಿಂದ ಸರಿಸುಮಾರು ಎರಡು ಸಾವಿರದಷ್ಟು ಕರೆಗಳು ಬಂದಿದ್ದು ಪತ್ತೆಯಾಯಿತು. ಅದು ಕೃಷ್ಣಮೂರ್ತಿಯ ಕ್ರಿಮಿನಲ್ ...ನ್ನೆಲೆಗೆ ಪಕ್ಕಾ ಸಾಕ್ಷಿಯಂತಿತ್ತು. ಅಡಿಷನಲ್ ಎಸ್‌ಪಿ ನಾಗರಾಜ್ ಇನ್ನೇನು ಕೃಷ್ಣಮೂರ್ತಿಯ ಜಾತಕಕ್ಕೆ ಕೈಯಿಡಬೇಕೆನ್ನುವಷ್ಟರಲ್ಲೇ ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ್ ಈತನ ಬೆಂಬಲಕ್ಕೆ ನಿಂತಿದ್ದರು.

ನಕಲಿ ಟೊಮ್ಯಾಟೋ

ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಯ ...ಾಸನಪುರ, ಕಡಬಗೆರೆ, ಮಾದನಾಯಕನಹಳ್ಳಿ, ...ಡಕಮಾರನಹಳ್ಳಿ, ಅರಿಶಿನಕುಂಟೆ, ಇತ್ಯಾದಿ ಏರಿಯಾಗಳ ...ವಿಧ ದಂಧೆಗಳು, ದೋ ನಂಬರ್ ವಹಿವಾಟುಗಳದ್ದೇ ಪ್ರತ್ಯೇಕ ಪಟ್ಟಿಯಿದೆ. ಈ ಪೈಕಿ ಅತೀಹೆಚ್ಚು ಉತ್ಪತ್ತಿಯಿರು...ದು ಸ್ಟೀಲ್ ಸ್ಮಗ್ಲಿಂಗ್ ದಂಧೆಯಿಂದ. ಪೂನಾದಿಂದ ಹುಬ್ಬಳ್ಳಿ ಮಾರ್ಗವಾಗಿ ಬರುವ ಲಾರಿಗಳನ್ನು ಅರ್ಧಕ್ಕೇ ...ಡೆದು ಅದರಲ್ಲಿದ್ದ ಕಾಲು ಭಾಗ ಕಬ್ಬಿಣದ ಕಂಬಿ ಕದ್ದು ...ೇಬ್ರಿಡ್ಜುಗಳಲ್ಲಿ ಹಿಂದನಷ್ಟೇ ತೂಕವಿದೆ ಎಂಬಂತೆ ನಕಲಿ ...ಲ್ ಸೃಷ್ಟಿಸಿ ಯಾಮಾರಿಸುವುದು ನಡೆದೇ ಇದೆ. ಮುನ್ನಾ ...ಂಬಾತ ಈ ದಂಧೆಯ ಸೂತ್ರಧಾರನಾದರೆ ಇದಕ್ಕೆ ಬೆಂಗಾವಲಾಗಿ ನಿಂತವನು ಪೇದೆ ಕೃಷ್ಣಮೂರ್ತಿ.

ಇತ್ತೀಚೆಗೆ ನಕಲಿ ಟೊಮ್ಯಾಟೋ ಸಾಸ್‌ನ ಜಾಲವೊಂದನ್ನು ನ್ಯೂಸ್ ಚಾನಲ್ಲೊಂದು ಬಯಲಿಗೆಳೆಯಿತು. ಈ ದಂಧೆಗೆ ತಮಿಳುನಾಡು ಮೂಲದ ಶೇಖರ್ ಎಂಬಾತನೇ ಮೂಲಪುರುಷ. ನಕಲಿ ಟೊಮ್ಯಾಟೋ ಸಾಸ್‌ಗೆಂದು ಬಳಸುವ ನಿಷೇಧಿತ ರಾಸಾಯನಿಕವನ್ನು ಪೆಟ್ರೋಲ್ ಟ್ಯಾಂಕರ್‌ಗಳಲ್ಲಿ ಸಾಗಿಸಲಾಗುತ್ತದೆ. ತಿಂಗಳಿಗೊಮ್ಮೆ ಬಾಂಬೆಯಿಂದ ಟ್ಯಾಂಕರ್‌ಗಳಲ್ಲಿ ಬರುವ ಈ ಕೆಮಿಕಲ್ ಅನ್ನು ಚೆಕ್‌ಪೋಸ್ಟ್‌ಗಳಲ್ಲಿ ತಡೆಯದಂತೆ ಪೊಲೀಸ್ ಜೀಪ್ ಸಮೇತ ಬೆಂಗಾವಲಿತ್ತು ಗೋಡೌನಿಗೊಯ್ದು ಬಿಡುವುದೂ ಕೃಷ್ಣಮೂರ್ತಿಯೆ. ಮಾದನಾಯಕನಹಳ್ಳಿ ಠಾಣೆಯ ಇಬ್ಬರು ಪೇದೆಗಳನ್ನು ಟ್ಯಾಂಕರ್‌ನ ಡ್ರೈವರ್ ಸೀಟಿನ ಪಕ್ಕ ಕೂರಿಸಿ ಚೆಕ್‌ಪೋಸ್ಟ್ ದಾಟಿಸಿದ ದೃಶ್ಯಾವಳಿಗಳು ಅಲ್ಲಿನ ಸಿಸಿ ಟೀವಿಗಳಲ್ಲೇ ಯಥಾವತ್ತಾಗಿ ದಾಖಲುಗೊಂಡಿದೆ.

ಆರು ತಿಂಗಳ ಹಿಂದಷ್ಟೇ ಮಾದನಾಯಕನಹಳ್ಳಿ ವ್ಯಾಪ್ತಿಯ ಎಲೆಕ್ಟ್ರಾನಿಕ್ ಸರಕುಗಳಿದ್ದ ಗೋಡೌನಿಗೆ ಬೆಂಕಿಬಿತ್ತು. ಈ ಬಗ್ಗೆ ತನಿಖೆಗೆಂದು ಬಂದ ಇನ್ಶೂರೆನ್ಸ್ ಅಧಿಕಾರಿಗಳಿಗೆ ಪೇದೆ ಕೃಷ್ಣಮೂರ್ತಿ ಮತ್ತಾತನ ತಂಡ ಅಲ್ಲಿದ್ದ ಲ್ಯಾಪ್‌ಟಾಪ್‌ಗಳು ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಮೊದಲೇ ಸಾಗಿಸಿ ಗುಜರಿ ಐಟಂಗಳನ್ನಿಟ್ಟು ಬೆಂಕಿ ಹಚ್ಚಿದ್ದು ಗೊತ್ತಾಯಿತು. ಪೊಲೀಸರೇ ಈ ಮಟ್ಟಕ್ಕಿಳಿದ ಮೇಲೆ ಯಾರಿಗೆಂತ ದೂರು ಕೊಡುತ್ತಾರೆ?

ಸ್ಮಗ್ಲಿಂಗ್ ಲಾರಿಗಳು



ಮಾದನಾಯಕನಹಳ್ಳಿ ಸುತ್ತಮುತ್ತಲೇ ಮೂವತ್ತಕ್ಕೂ ಅಧಿಕ ಮೈಕಸಬು ಮನೆಗಳಿವೆ. ನಲವತ್ತರಷ್ಟು ಇಸ್ಪೀಟ್ ಕ್ಲಬ್ಬುಗಳಿವೆ. ಇದಲ್ಲದೆ ಊರ ಹೊರಭಾಗದ ಖಾಲಿ ತೋಪುಗಳೂ, ತೋಟದ ಮನೆಗಳಲ್ಲಿ ನಡೆಯುವ ಇಸ್ಪೀಟ್ ಪಾರ್ಟಿಗಳ ಉತ್ಪತ್ತಿಯೇ ಬೇರೆಯಿದೆ. ಹೊರಭಾಗದ ಖಾಲಿ ತೋಪುಗಳಲ್ಲಿ ವಾರಕ್ಕೆರಡು ಬಾರಿ ನಡೆಯುವ ಬಟ್ಟಾಬಯಲು ಇಸ್ಪೀಟ್ ಕೂಟಗಳಿಗೆಂದೇ ಬೆಂಗಳೂರಿನಿಂದ ಐಷಾರಾಮಿ ಕಾರುಗಳಲ್ಲಿ ಜೂಜುಕೋರರು ಬರುತ್ತಾರೆ. ಹೀಗೆ ಸೇರುವ ಇಸ್ಪೀಟ್ ಕೂಟದ ದಿನವೊಂದರ ವಹಿವಾಟೇ ಇಪ್ಪತ್ತೋ ಮೂವತ್ತೋ ಐವತ್ತೋ ಲಕ್ಷಗಳಲ್ಲಿರುತ್ತದೆ. ಜೂಜುಕೋರರಿಗೆ ಸಾಲ ನೀಡಲೆಂದೇ ಮೀಟರ್ ಬಡ್ಡಿ ದಂಧೆಕೋರರೂ ಬರುತ್ತಾರೆ. ಹೀಗೆ ಸೇರುವ ಇಸ್ಪೀಟ್ ಕೂಟದ ಮೇಲೆ ಇದ್ದಕ್ಕಿದ್ದಂತೆ ರೌಡಿ ಪಡೆಯೊಂದು ದಾಳಿಯಿಟ್ಟು ಬೆಟ್ಟಿಂಗ್‌ಗೆ ಹಾಕಿದ ದುಡ್ಡು, ಬಾಜಿಯ ಮೊತ್ತ, ಅಲ್ಲಿದ್ದವರ ಜೇಬಿನಲ್ಲಿದ್ದ ಕಾಸು ಎಲ್ಲವನ್ನೂ ದೋಚುತ್ತದೆ. ಇನ್ನೇನು ರೌಡಿ ಪಡೆ ದೋಚಿ ಪರಾರಿಯಾಗಬೇಕೆನ್ನುವಷ್ಟರಲ್ಲಿ ಇದ್ದಕ್ಕಿದ್ದಂತೆ ಪೊಲೀಸರ ಪ್ರವೇಶವಾಗುತ್ತದೆ. ಪೊಲೀಸರು ರೌಡಿಗಳ ಸಮೇತ ಜೂಜುಕೋರರು ಫೈನಾನ್ಶಿಯರ್‌ಗಳು ಎಲ್ಲರನ್ನೂ ಠಾಣೆಗೆ ಎಳೆದೊಯ್ಯಲೆತ್ನಿಸುತ್ತಿದ್ದಂತೆ ಬಾಜಿಕೋರರು ತಮ್ಮ ಮಾನಮರ್ಯಾದೆಗೆ ಅಂಜಿ ಬಿಟ್ಟುಬಿಡುವಂತೆ ಪೊಲೀಸರ ಕಾಲಿಗೆರಗುತ್ತಾರೆ.

ತನಿಖೆ ಮಾಡುವವರ್‍ಯಾರು?

ಇದು ಪೇದೆ ಕೃಷ್ಣಮೂರ್ತಿಯೇ ಹೆಣೆದ ಕಪಟ ನಾಟಕ. ಅಲ್ಲಿಗೆ ಜೂಜುಕೋರರ ದುಡ್ಡು ರೌಡಿಗಳ ಮೂಲಕ ಈತನ ಕೈಸೇರಿದಂತಾಯ್ತು. ಯಾರೂ ಠಾಣೆಗೆ ಬಂದು ದೂರು ಕೊಡದ ಹಾಗೆಯೂ ಆಯಿತು ಮತ್ತು ರೌಡಿಗಳನ್ನು ಠಾಣೆಗೆ ಎಳೆದೊಯ್ದ ನೆಪದಲ್ಲಿ ದಾರಿಮಧ್ಯೆ ಬಿಟ್ಟು ಕಳಿಸಿದ್ದೇ ದರೋಡೆಯ ಪಾಲು ಹಂಚಿಕೊಂಡಂತಾಯಿತು. ಗ್ರಾಮಾಂತರ ಎಸ್.ಪಿ. ಸಾಹೇಬರನ್ನೇ ಮರಳು ಮಾಡಿ ತನ್ನ ತಾಳಕ್ಕೆ ಕುಣಿಯುವಂತೆ ಮಾಡಿದ್ದ ಪೇದೆ ಕೃಷ್ಣಮೂರ್ತಿ ಕೇವಲ ಮಾದನಾಯಕನಹಳ್ಳಿ ಮಾತ್ರವಲ್ಲದೇ ಗ್ರಾಮಾಂತರ ಎಸ್‌ಪಿ ವ್ಯಾಪ್ತಿಯ ರಾಜಾನುಕುಂಟೆ, ಹೊಸಕೋಟೆ, ಮಾಗಡಿ, ಕನಕಪುರದ ವ್ಯಾಪ್ತಿಯಲ್ಲೂ ರೌಡಿಗ್ಯಾಂಗ್‌ಗಳನ್ನು ಬಳಸಿ ಇಂಥ ಅನೇಕ ದರೋಡೆಗಳನ್ನು ನಡೆಸಿದ ಬಗ್ಗೆ ಪೊಲೀಸರೇ ಮಾಹಿತಿ ನೀಡುತ್ತಾರೆ!

ಪಾಪದ ಕೊಡ ತುಂಬಿ ಬಂದಿರಬೇಕು. ಒಂಟಿ ಗೃಹಿಣಿಯನ್ನು ದೋಚಲೆಂದು ಪಾತಕಿ ಶೀಷನ ಜೊತೆ ತನ್ನ ಒಡಹುಟ್ಟಿದ ಅಣ್ಣ ಜಯರಾಮನನ್ನೇ ಜೊತೆ ಮಾಡಿ ಕಳಿಸಿದ್ದು ಉಲ್ಟಾ ಹೊಡೆದ ನೆರೆಹೊರೆಯ ಜನರೇ ದರೋಡೆಗೆ ಬಂದವರನ್ನು ಪೊಲೀಸರಿಗೆ ಹಿಡಿದುಕೊಡುವಂತಾಯ್ತು. ಈಗ ಗ್ರಾಮಾಂತರ ಎಸ್‌ಪಿ ಬಾನೂತ್ ತನಗೇನೂ ಗೊತ್ತೇ ಇಲ್ಲವೆಂಬಂತೆ ಹೈಕೋರ್ಟ್ ಕಟಕಟೆಯಲ್ಲಿ ನಿಂತು ತಲೆಕುಣಿಸುತ್ತಿದ್ದಾರೆ. ಕೋರ್ಟ್ ಆದೇಶದ ಪ್ರಕಾರವೇ ಪಾಪಿ ಪೇದೆ ದರೋಡೆಯ ಪ್ರಮುಖ ಆರೋಪಿ. ಸರಿ, ಇದೊಂದೇ ದರೋಡೆಯಾಗಿದ್ದರೆ ಆ ಮಾತು ಬೇರೆ. ಇಂಥ ಅದೆಷ್ಟು ದರೋಡೆಗಳನ್ನು ಈತ ಮಾಡಿಲ್ಲ? ಈತನಿಗೆ ದರೋಡೆಯಲ್ಲಿ ಸಾಥ್ ಕೊಡುತ್ತಿದ್ದ ರೌಡಿಗಳ್ಯಾರು? ಯಾವ್ಯಾವ ರೌಡಿಗಳೊಂದಿಗೆ ಈತನ ಸಂಪರ್ಕವಿತ್ತು? ಅಂಥಾ ರೌಡಿಗಳ ಮೂಲಕ ಏನೆಲ್ಲ ಕುಕೃತ್ಯವೆಸಗಿದ್ದಾನೆ. ಈತನ ಅಕ್ರಮ ಆಸ್ತಿಯೆಷ್ಟು? ಈ ಬಗ್ಗೆ ತನಿಖೆ ಮಾಡುವವರ್‍ಯಾರು?

- ರಾ. ಸೋಮನಾಥ್

ಕರ್ನಾಟಕ ಕೋಮು ಸೌಹಾರ್ದ ವೇದಿಕೆ

ಸಹಬಾಳ್ವೆ ಸಾಗರ

ಜನವರಿ 30. ಭಾರತಕ್ಕೆ ಮಹಾಘಾತವಾದ ದಿನ. ಗೋಡ್ಸೆ ಎಂಬ ಮತಾಂಧ ಮಹಾತ್ಮಗಾಂಧಿಯನ್ನು ಕೊಂದ ...ನ. ಗಾಂಧೀಜಿಯವರ ಹತ್ಯೆ ಅಂದು ಭುಗಿಲೆದ್ದಿದ್ದ ಧಾರ್ಮಿಕ ದ್ವೇಷದ ದ್ಯೋತಕ. ಭಾರತ-ಪಾಕಿಸ್ತಾನ ವಿಭಜನೆಯ ...ಸ್ಥಿತಿಯಲ್ಲಿ ಎರಡೂ ಕಡೆ ಮತಾಂಧರು ಸಹಸ್ರಾರು ಜನರ ಬದುಕನ್ನು ಛಿದ್ರಗೊಳಿಸಿದರು, ಧ್ವಂಸಗೊಳಿಸಿದರು. ...ರಡೂ ಕಡೆ ಹತ್ತಿ ಉರಿದ ದ್ವೇಷದ ಬೆಂಕಿ ಗಾಂಧೀಜಿಯವರನ್ನು ಸಹ ಬಲಿ ತೆಗೆದುಕೊಂಡಿತು. ಹಾಗೆ ನೋಡಿದರೆ ...ಂಧಿಯವರ ನಿಲುವುಗಳ ಕುರಿತು ಭಗತ್‌ಸಿಂಗ್, ಅಂಬೇಡ್ಕರ್, ಕಮ್ಯುನಿಸ್ಟರು, ಸೋಷಿಯಲಿಸ್ಟರು- ಹೀಗೆ ಅನೇಕರಿಗೆ ...ನ್ನಾಭಿಪ್ರಾಯವಿದ್ದಿತ್ತು. ಆದರೆ ವೈಚಾರಿಕ ಭಿನ್ನಾಭಿಪ್ರಾಯವೆಂದೂ ದೈಹಿಕ ಆಕ್ರಮಣಗಳಿಗೆ ಕಾರಣವಾಗಿರಲಿಲ್ಲ. ...ನ್ನಾಭಿಪ್ರಾಯಗಳನ್ನು ವೈಚಾರಿಕವಾಗಿ ಎದುರಿಸಲಾಗದ ಅಥವಾ ಸಹಿಸಿಕೊಳ್ಳಲಾಗದ ಸರ್ವಾಧಿಕಾರಿಗಳು ಇಂತಹ ...ಚಕೃತ್ಯಗಳಿಗೆ ಕೈಹಾಕುತ್ತಾರೆ. ಅಂದು ನಡೆದ ಗಾಂಧಿಯವರ ಕೊಲೆಗೂ ಇತ್ತೀಚೆಗೆ ನಡೆದ ದಾದ್ರಿಯ ಘಟನೆಗೂ ...ಮ್ಯತೆ ಇದೆ. ದಾದ್ರಿಯ ಘಟನೆ ಸಹ ದೇಶದಾದ್ಯಂತ ಬೆಳೆಯುತ್ತಿರುವ ಧಾರ್ಮಿಕ ದ್ವೇಷದ, ಸಾಂಸ್ಕೃತಿಕ ವೈಷಮ್ಯದ, ...ಪ್ರಚೋದಿತ ಹಿಂಸಾ ರಾಜಕೀಯ ದುರಾಲೋಚನೆಯ ಅಭಿವ್ಯಕ್ತಿಯಾಗಿದೆ.

ದೇಶವನ್ನು ಕಟ್ಟುವುದೆಂದರೆ ಜನರನ್ನು ಸಮುದಾಯವಾಗಿ ಒಗ್ಗೂಡಿಸುವುದು. ಜನರನ್ನು ಒಡೆದು ದೇಶವನ್ನು ...ಲು ಬರುವುದಿಲ್ಲ, ಆಂತರಿಕ ಕಲಹ ಬಾಹ್ಯ ದಾಳಿಗೆ ಆಹ್ವಾನ. ರಾಜತಂತ್ರವನ್ನು ಬೋಧಿಸಿದ ಚಾಣಕ್ಯ "ಪರರಾಜ್ಯವನ್ನು ...ಲು ಬರುವುದಿಲ್ಲ ... ಅಣ್ಣತಮ್ಮಂದಿರ ನಡುವೆ ಜಗಳವನ್ನು ಹುಟ್ಟುಹಾಕು" ಎನ್ನುತ್ತಾನೆ. ...ಪಡಿಸಿಕೊಳ್ಳಬೇಕಾದರೆ ಮೊದಲು ಅದರೊಳಗಿನ ಅಣ್ಣತಮ್ಮಂದಿರ ನಡುವೆ ಜಗಳವನ್ನು ಹುಟ್ಟುಹಾಕು ... ನಮ್ಮೊಳಗಿನ ಆಂತರಿಕ ...ಲಹ ಪದೇಪದೇ ಬಾಹ್ಯ ದಾಳಿಗಳಿಗೆ ಬಲಿಯಾಗಿದ್ದು ಆಕ್ರಮಣಕಾರರ ಬಲದ ಕಾರಣಕ್ಕಲ್ಲ, ನಮ್ಮೊಳಗಿನ ಆಂತರಿಕ ... ಛಿದ್ರ ಛಿದ್ರವಾಗಿ ಒಡೆದುಹೋಗಿದ್ದ ದೇಶ ಆಕ್ರಮಣಕ್ಕೆ ...ರ್ಬಲ್ಯದ ಕಾರಣಕ್ಕಾಗಿ. ಜಾತಿಗಳಾಗಿ, ಪಂಥಗಳಾಗಿ, ಪಾಳೆಪಟ್ಟುಗಳಾಗಿ ಒಡೆದುಹೋಗಿದ್ದ ದೇಶ ಆಕ್ರಮಣಕ್ಕೆ ...ಲಿಗೆ ಹಾಕಿಕೊಟ್ಟಿತು. ಕೇವಲ 30 ಸಾವಿರದಷ್ಟಿದ್ದ ಬ್ರಿಟಿಷ್ ಸೈನ್ಯ 30 ಕೋಟಿ ಜನರನ್ನು ದಾಸ್ಯಕ್ಕೆ ಒಳಪಡಿಸಲು ...ಧ್ಯವಾದದ್ದು ಸಹ ಇದೇ ದೌರ್ಬಲ್ಯದಿಂದ. ದೇಶ ಛಿದ್ರವಾಗಿದ್ದ ತನಕ ಬ್ರಿಟಿಷರನ್ನು ಹೊರಗಟ್ಟಲು ಸಾಧ್ಯವಾದದ್ದು ಸಹ ... ದೇಶ ಒಗ್ಗಟ್ಟಾದ ನಂತರ ಬ್ರಿಟಿಷರಿಗೆ ಕಾಲ್ಕೀಳದೆ ... ಜಾತಿ, ಧರ್ಮ, ಭಾಷೆಯ ಗಡಿಗಳನ್ನು ಮೀರಿ ದೇಶ ಒಗ್ಗಟ್ಟಾದ ನಂತರ ಬ್ರಿಟಿಷರಿಗೆ ಕಾಲ್ಕೀಳದೆ ...ಂತರವಿರಲಿಲ್ಲ. ಆದರೆ ಗೆಲುವಿನ ಬೆನ್ನಲ್ಲೇ ಬೆಳೆದ ಮತೀಯ ರಾಜಕಾರಣ ದೇಶವನ್ನು ಮೂರು ತುಂಡಾಗಿಸಿದ್ದಲ್ಲದೆ, ...ಸಾವಿರ ಬದುಕುಗಳನ್ನು, ಹಾಗೂ ಕೋಟ್ಯಂತರ ಮನಸುಗಳನ್ನು ಕತ್ತರಿಸಿಹಾಕಿತು.

ಇಂದು ಮತ್ತೆ ದೇಶ ವಿಪತ್ತಿನಲ್ಲಿದೆ. ಜಾಗತೀಕರಣದ ಹೆಸರಿನಲ್ಲಿ ದೇಶಿ ಹಾಗೂ ವಿದೇಶಿ ಕಾರ್ಪೋರೇಟ್ ಶಕ್ತಿಗಳೆರಡೂ ಕೂಡಿ ಜನರ ಬದುಕಿನ ಮೇಲೆ ಆಕ್ರಮಣ ಆರಂಭಿಸಿವೆ. ಕಾರ್ಪೋರೇಟ್ ಅವಲಂಬಿತ ಕೃಷಿ ಲಕ್ಷಾಂತರ ರೈತರನ್ನು ಈಗಾಗಲೆ ಬಲಿ ತೆಗೆದುಕೊಂಡಿದೆ, ಕೋಟ್ಯಂತರ ರೈತಾಪಿಯನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಕಾರ್ಮಿಕರ ಎಲ್ಲಾ ಹಕ್ಕುಗಳನ್ನು ಕಸಿದುಕೊಂಡು ಎಲ್ಲರನ್ನೂ ಗುತ್ತಿಗೆ ದುಡಿಮೆಗಾರರನ್ನಾಗಿ ಪರಿವರ್ತಿಸಲಾಗುತ್ತಿದೆ. ವಿಷದಂತೆ ಹರಡುತ್ತಿರುವ ಸೆಕ್ಸ್ ಮಾರುಕಟ್ಟೆ ಹೀನಾತಿಹೀನವಾಗಿ ಹೆಣ್ಣುಮಕ್ಕಳ ಲೈಂಗಿಕ ಬೇಟೆಗೆ ಕಾರಣವಾಗಿದೆ. ಬದುಕು ದುಬಾರಿಯಾಗುತ್ತಿದೆ. ನೀರು, ಶಿಕ್ಷಣ, ಆರೋಗ್ಯ- ಹೀಗೆ ಪ್ರತಿಯೊಂದು ಮೂಲ ಅಗತ್ಯಗಳನ್ನು ಸಹ ಮಾರಾಟಕ್ಕಿಡಲಾಗಿದೆ. ಗಾಳಿ ಮಾರಾಟವಾಗುವ ದಿನ ಸಹ ದೂರವಿಲ್ಲ. ಪರಿಸ್ಥಿತಿ ಹೀಗಿರುವಾಗ, ನಾಶವಾಗುತ್ತಿರುವ ನಮ್ಮನ್ನು, ನಮ್ಮ ನಾಡನ್ನು ನಮ್ಮ ಸಮುದಾಯವನ್ನು ಕಾಪಾಡಿಕೊಳ್ಳಲು ಒಗ್ಗೂಡಿ ಹೋರಾಡಬೇಕಿದ್ದ ಕಾಲಘಟ್ಟದಲ್ಲಿ ನಾವು ಏನು ಮಾಡುತ್ತಿದ್ದೇವೆ? ಜಾತಿ ಉತ್ಸವಗಳನ್ನು ನಡೆಸುತ್ತಾ ಪ್ರತ್ಯೇಕ ಗೂಡು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಮತೀಯ ಭಿನ್ನತೆಯನ್ನು ವೈಷಮ್ಯವನ್ನಾಗಿ ಮಾಡಿಕೊಂಡು ಹಗಲುರಾತ್ರಿ ಚರ್ಚಿಸುತ್ತಿದ್ದೇವೆ. ಯಾವುದೊ ಮೂಲೆಯಲ್ಲಿರುವ ಪುರಾತನ ಕಟ್ಟಡ ಮಂದಿರವೋ ಮಸೀದಿಯೋ ಎಂಬ ವಾಗ್ವಾದವನ್ನು ಹಿಡಿದುಕೊಂಡು ಇಡೀ ದೇಶ ಹತ್ತಿ ಉರಿಯುವಂತೆ ಮಾಡುತ್ತಿದ್ದೇವೆ. ಆಧುನಿಕತೆಯ ಅಬ್ಬರದಲ್ಲಿ ನಾಟಿ ರಾಸುಗಳೆ ಕಾಣೆಯಾಗಿ, ವ್ಯವಸಾಯದ ರಾಸುಗಳೆ ಕ್ಷೀಣಿಸಿ, ರೈತ ದನಗಳನ್ನು ಸಾಕುವುದು ಹೇಗೆ ಎಂಬ ಚಿಂತೆಯಲ್ಲಿರುವಾಗ, ಅವರ ಸಂಕಷ್ಟಗಳ ಬಗ್ಗೆ ತಲೆಕೆಡಿಸಿಕೊಳ್ಳದೆ "ದನದ ಮಾಂಸ ತಿನ್ನದಂತೆ ತಡೆಯುವುದು ಹೇಗೆ?" ಎಂಬ ಚರ್ಚೆಯಲ್ಲಿ ಮುಳುಗಿದ್ದೇವೆ. ಭಿನ್ನ ಆಹಾರದ ಅಭಿರುಚಿಯನ್ನೇ ನೆಪ ಮಾಡಿಕೊಂಡು ಆಕ್ರಮಣವೆಸಗುತ್ತಿದ್ದೇವೆ. ಯುವ ಜನಾಂಗದ ಜಾತಿ-ಧರ್ಮದಾಚೆಯ ಪ್ರೇಮಸಂಬಂಧಗಳನ್ನು ಕತ್ತರಿಸಲು ಕತ್ತಿಹಿಡಿದು ಓಡಾಡುತ್ತಿದ್ದೇವೆ.

ಸಾರಾಂಶದಲ್ಲಿ ಬುದ್ಧ ಬಸವ, ಕಬೀರ, ಗುರುನಾನಕ್, ಸೂಫಿ, ವಿವೇಕಾನಂದ ಮುಂತಾದ ಸಂತರು, ಫುಲೆ, ಗಾಂಧಿ, ಅಂಬೇಡ್ಕರ್, ಪೆರಿಯಾರ್, ಭಗತ್‌ಸಿಂಗ್, ಆಜಾದ್, ಸುಭಾಷ್ ಚಂದ್ರ ಬೋಸ್ ಮುಂತಾದ ಸ್ವಾತಂತ್ರ್ಯ ಸೇನಾನಿಗಳು ಹಾಕಿಕೊಟ್ಟ ತತ್ವಾದರ್ಶಗಳಿಗೆ ವಿರುದ್ಧವಾದ ದಿಕ್ಕಿನಲ್ಲಿ (ಹಲವೊಮ್ಮೆ ಅವರ ಹೆಸರುಗಳನ್ನೇ ಬಳಸಿಕೊಂಡು) ದೇಶವನ್ನು ಕೊಂಡೊಯ್ಯಲು ಪ್ರಯತ್ನಿಸುತ್ತಿದ್ದೇವೆ. ದೇಶದಲ್ಲಿ ಬೆಳೆಯುತ್ತಿರುವ ಜಾತಿ ಮತ್ತು ಧರ್ಮಗಳ ನಡುವಿನ ಅಂತರ ಹಾಗೂ ದ್ವೇಷ ನಮ್ಮನ್ನು ದಿಕ್ಕುತಪ್ಪಿಸುತ್ತಿದೆ. ದ್ವೇಷ ರಾಜಕಾರಣವನ್ನು ಬೆಳೆಸುತ್ತಿರುವವರು ಜನರನ್ನು ಒಡೆದು ರಾಜಕೀಯ ಅಧಿಕಾರವನ್ನು ಕಬಳಿಸುತ್ತಿದ್ದಾರೆ. ಇವರನ್ನು ಬೆಂಬಲಿಸುತ್ತಿರುವ ಶಕ್ತಿಗಳು ತಮ್ಮ ದೋಚುವ ಕೆಲಸವನ್ನು ನಿರಾತಂಕವಾಗಿ ಮುನ್ನಡೆಸಿದ್ದಾರೆ.

ಬದುಕು ಮತ್ತಷ್ಟು ನಾಶಗೊಳ್ಳುವ ಮೊದಲು, ಮನಸ್ಸುಗಳು ಮತ್ತಷ್ಟು ಭಗ್ನಗೊಳ್ಳುವ ಮೊದಲು, ದೇಶ ಮತ್ತಷ್ಟು ನಷ್ಟಕ್ಕೆ ಗುರಿಯಾಗುವ ಮೊದಲು ಎಚ್ಚರಗೊಳ್ಳಬೇಕಿದೆ. ನಮ್ಮ ನಡುವೆ ಬೆಂಕಿ ಹಚ್ಚಿ ಚಳಿ ಕಾಯಿಸಿಕೊಳ್ಳುವ ರಾಜಕೀಯ ಕೇದಿಗಳನ್ನು ಮಣಿಸಿ, ಸಹಜೀವನವನ್ನಾಧರಿಸಿ ಸೌಹಾರ್ದ ಸಮಾಜವನ್ನು ಉಳಿಸಿಕೊಳ್ಳಬೇಕಿದೆ.

ಭಾರತದಲ್ಲಿ ಸ್ವಾತಂತ್ರ್ಯ ಮತ್ತು ಕೋಮು ಸೌಹಾರ್ದಕ್ಕಾಗಿ ... ಹುತಾತ್ಮರಾದ ಗಾಂಧೀಜಿಯವರ ಹತ್ಯೆಯ ದಿನದಂದು ಈ ವಿಶಿಷ್ಟ ಸಮಾವೇಶ ಜರುಗುತ್ತಿದೆ. ಸರ್ವ ಧರ್ಮದ ಸೌಹಾರ್ದಪ್ರಿಯ ಮನಸ್ಸುಗಳು ... ಸಾವಿರ ಸಂಖ್ಯೆಯಲ್ಲಿ ಆಗಮಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಸ್ವಾತಂತ್ರ್ಯ ಚಳವಳಿ, ತ್ರಿವರ್ಣ ಧ್ವಜ ಮತ್ತು ಸಂಘ ಪರಿವಾರ

ಭಾರತದ ಮದರಸಾಗಳಲ್ಲಿ "ಉಗ್ರವಾದ" ಮತ್ತು "ಲವ್ ಜಿಹಾದ್" ಕಲಿಸಲಾಗುತ್ತಿದೆ ಎಂಬ ಸಂಘ ಪರಿವಾರದ ಆಧಾರರಹಿತ ಆರೋಪ ಹೊಸದೇನೂ ಅಲ್ಲ. ಅದು ಹಲವಾರು ವರ್ಷಗಳಿಂದಲೂ ಕೇಳಿಬರುತ್ತಿರುವಂತಹ ಆಪಾದನೆ. ಆದರೆ ಅಂದಿಗೂ ಇಂದಿಗೂ ಇರುವ ದೊಡ್ಡ ವ್ಯತ್ಯಾಸವೆಂದರೆ ಇದೀಗ ದಿಲ್ಲಿಯಲ್ಲಿ ಅವರದೇ ಮೋದಿ ಸರ್ಕಾರ ಪ್ರತಿಷ್ಠಾಪಿತವಾಗಿದೆ. ಸಾವರ್ಕರ್‌ರ ಸಿದ್ಧಾಂತ, ಗೋಲ್ವಲ್ಕರ್‌ನ ಆದೇಶಗಳನ್ನು ಯಥಾವತ್ತಾಗಿ ಜಾರಿಗೊಳಿಸಲು ಸಹಲೆಂಟು ಯತ್ನಗಳನ್ನು ಮಾಡುತ್ತಲೇ ಬಂದಿರುವ ಸಂಘ ಪರಿವಾರಕ್ಕೆ ಈಗಲಂತೂ ಮುಕ್ತ ರಹದಾರಿ ದೊರೆತಂತಾಗಿದೆ. ಪರಿಣಾಮವಾಗಿ ಇಂದು ಅದರ ಆರೋಪಗಳ ಸಂಖ್ಯೆ ಮತ್ತು ಆರ್ಭಟಗಳೆರಡೂ ಜೋರಾಗಿ ಮುಗಿಲುಮುಟ್ಟುತ್ತಿವೆ. ಅಲ್ಪಸಂಖ್ಯಾತರನ್ನು, ದಲಿತರನ್ನು ದ್ವಿತೀಯದರ್ಜೆಗೆ ತಳ್ಳುವ ಯೋಜನೆ ಭಾರಿ ವೇಗ ಪಡೆದುಕೊಂಡಿದ್ದು ಅದರ ಭಾಗವಾಗಿ ಒಂದು ಕಡೆ ಗಾಂಧೀಜಿ, ಅಂಬೇಡ್ಕರ್, ಫುಲೆ ದಂಪತಿ ಮುಂತಾದವರನ್ನು ತೆಕ್ಕೆಗೆ ತೆಗೆದುಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿದ್ದರೆ ಇನ್ನೊಂದು ದಿಕ್ಕಿನಲ್ಲಿ ಮುಸ್ಲಿಂ ಸಮುದಾಯವನ್ನು ಓಲೈಸಿ ಅವರನ್ನು ಬಗ್ಗಿಸುವ ಪ್ರಯತ್ನವೂ ಶುರುವಾಗಿದೆ. ಆರೆಸ್ಸೆಸ್ ವೃಕ್ಷದಲ್ಲಿ ಚಿಗುರಿರುವ ಹೊಸ ಕೊಂಬೆ ಮುಸ್ಲಿಂ ರಾಷ್ಟ್ರೀಯ ಮಂಚ್ ಸದ್ಯ ಎರಡು ವಿಷಯಗಳನ್ನು ಎತ್ತಿಕೊಂಡು ಮುಸ್ಲಿಂ ಸಮುದಾಯದ ನಡುವೆ ತನ್ನ ಕಾರ್ಯಾರಂಭ ಮಾಡಿದೆ. ಒಂದು, ರಾಮಮಂದಿರ ನಿರ್ಮಾಣಕ್ಕೆ ಒಪ್ಪಿಗೆ ಪಡೆಯುವುದು. ಎರಡು, ಗಣರಾಜ್ಯ ಮತ್ತು ಸ್ವಾತಂತ್ರ್ಯ ದಿನಾಚರಣೆಗಳಂದು ಮದರಸಾ ಗಳಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸಿ ರಾಷ್ಟ್ರಗೀತೆಯನ್ನು ಹಾಡಿಸುವುದು.




ವಾಸ್ತವದಲ್ಲಿ ಇಂಥಾ ಮಹತ್ವದ ಸಂದರ್ಭಗಳಲ್ಲಿ ದೇಶದ ಹೆಚ್ಚುಕಡಿಮೆ ಎಲ್ಲಾ ಮದರಸಾಗಳೂ ತ್ರಿವರ್ಣ ಧ್ವಜವನ್ನು ಹಾರಿಸುವ ಸಂಪ್ರದಾಯವನ್ನು ಲಾಗಾಯ್ತಿನಿಂದಲೂ ತಪ್ಪದೆ ಅನುಸರಿಸುತ್ತಾ ಬರುತ್ತಿವೆ. ಆದರೆ ಸಂಘ ಪರಿವಾರ? ಸಂಘ ಪರಿವಾರದ ಇತಿಹಾಸವನ್ನು ಕೆದಕಿದಾಗ ರಾಷ್ಟ್ರ ಧ್ವಜ ಮತ್ತು ಸ್ವಾತಂತ್ರ್ಯ ಚಳವಳಿಗಳಿಗೆ ಸಂಬಂಧಿಸಿದಂತೆ ಭಾರಿ ಸ್ವಾರಸ್ಯಕರ ಅಂಶಗಳು ಹೊರಬೀಳುತ್ತವೆ. 1925ರಲ್ಲಿ ಆರೆಸ್ಸೆಸ್ ಸ್ಥಾಪನೆಯಾದ ಸಮಯದಲ್ಲಿ ಅದಕ್ಕೆ ಸ್ಫೂರ್ತಿಯಾಗಿರುವುದೆ ಅಂದು ಯುರೋಪಿನ ಫ್ಯಾಸಿಸ್ಟ್ ಮತ್ತು ನಾಜಿ ಪಕ್ಷಗಳು ಅಳವಡಿಸಿಕೊಂಡಿದ್ದ 'ಏಕಧ್ವಜ, ಏಕನಾಯಕ, ಏಕ ಸಿದ್ಧಾಂತ' ಎಂಬ ರಣಘೋಷ. ಅಲ್ಲಿಂದಲೆ 'ಭಗವಾಧ್ವಜ, ಸರ್ವಾಧಿಕಾರ ಮತ್ತು ಹಿಂದೂರಾಷ್ಟ್ರ' ಎಂಬ ಗುರಿ ಹುಟ್ಟಿಕೊಂಡಿದೆ. 1929ರಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಸಭೆ ತ್ರಿವರ್ಣ ಧ್ವಜವನ್ನು ರಾಷ್ಟ್ರ ಧ್ವಜವೆಂದು ಘೋಷಿಸುವ ನಿರ್ಣಯ ಕೈಗೊಂಡಾಗ ಆರೆಸ್ಸೆಸ್ ಕ್ಯಾಂಪ್‌ನಿಂದ ಕಟುವಾದ ಟೀಕೆಗಳು ವ್ಯಕ್ತವಾಗಿದ್ದವು. ಆರೆಸ್ಸೆಸ್‌ನ ಸಂಸ್ಥಾಪಕನೂ ಅಂದಿನ ಮುಖ್ಯಸ್ಥನೂ ಆಗಿದ್ದ ಹೆಡ್ಗೇವಾರ್ ಎಲ್ಲಾ ಶಾಖೆಗಳಿಗೆ ಸುತ್ತೋಲೆಯೊಂದನ್ನು ಕಳುಹಿಸಿ ಭಗವಾಧ್ವಜವನ್ನೆ ರಾಷ್ಟ್ರ ಧ್ವಜವೆಂದು ಆರಾಧಿಸುವಂತೆ ಕರೆ ಕೊಟ್ಟಿದ್ದ. ಆರೆಸ್ಸೆಸ್ ಮುಖವಾಣಿ 'ಆರ್ಗನೈಸರ್' ಕೂಡಾ ರಾಷ್ಟ್ರ ಧ್ವಜವನ್ನು ಹೀಗಳೆಯುವ ಲೇಖನ, ಸಂಪಾದಕೀಯಗಳನ್ನು ಮುಂಖಾನು ಮುಂಖವಾಗಿ ಪ್ರಕಟಿಸುತ್ತಾ ಬಂದಿತ್ತು. ಉದಾಹರಣೆಗೆ 1947ರ ಆಗಸ್ಟ್ 14ರ ಸಂಚಿಕೆ ದೆಹಲಿಯ ಕೆಂಪುಕೋಟೆಯಲ್ಲಿ ಭಗವಾಧ್ವಜವನ್ನೆ ಹಾರಿಸಬೇಕೆಂದು ಒತ್ತಾಯಿಸುತ್ತಾ "ವಿಧಿಲೀಲೆಯ ಫಲವಾಗಿ ಅಧಿಕಾರಕ್ಕೆ ಬಂದಿರುವ ಜನ ತ್ರಿವರ್ಣ ಧ್ವಜವನ್ನು ನಮ್ಮ ಕೈಗಿತ್ತರೂ ಹಿಂದೂಗಳೆಂದೂ ಅದನ್ನು ತಮ್ಮದೆಂದು ಪರಿಗಣಿಸುವುದಿಲ್ಲ, ಅದನ್ನು ಗೌರವಿಸುವುದಿಲ್ಲ, ತ್ರಿವರ್ಣದತ್ರಿ ಎಂಬ ಪದವೆ ಅನಿಷ್ಟಕಾರಕ. ಮೂರು ಬಣ್ಣಗಳ ಬಾವುಟ ಮಾನಸಿಕವಾಗಿ ತುಂಬಾ ಕೆಟ್ಟ ಪರಿಣಾಮ ಉಂಟುಮಾಡಲಿದೆ. ಅದು ರಾಷ್ಟ್ರಕ್ಕೆ ಹಾನಿಕಾರಕ" ಎಂದೆಲ್ಲ ಬರೆದಿತ್ತು. ಸಂಘ ಪರಿವಾರದ ಧೋರಣೆಯಲ್ಲಿ ಎಳ್ಳಷ್ಟೂ ಬದಲಾವಣೆಯಾಗಿಲ್ಲ ಎಂಬುದಕ್ಕೆ ಆರೆಸ್ಸೆಸ್‌ನ ಅಖಿಲ ಭಾರತ ಪ್ರಚಾರ ಪ್ರಮುಖ್ ಆಗಿರುವ ಮನಮೋಹನ ವೈದ್ಯ ಎಂಬಾತನ ಇತ್ತೀಚಿನ ಹೇಳಿಕೆಯೆ ಸಾಕ್ಷಿ. 2015ರ ಸೆಪ್ಟಂಬರ್‌ನಲ್ಲಿ ಚೆನ್ನೈ ನಗರದಲ್ಲಿ ದಕ್ಷಿಣ ವಲಯದ ಸುಮಾರು 80 ಸುಪ್ರಸಿದ್ಧ ಅಂಕಣಕಾರರಿಗಾಗಿ ನಡೆಸಿದ ವಿಚಾರಸಂಕಿರಣವೊಂದರ ವೇಳೆ ತ್ರಿವರ್ಣಧ್ವಜಕ್ಕೆ ಆಕ್ಷೇಪ ಎತ್ತಿದ ವೈದ್ಯ, ಭಾರತೀಯ ಸಮಾಜದ ವಿಶಿಷ್ಟತೆಯ ಪ್ರತೀಕವಾಗಿ ಭಗವಾಧ್ವಜವೆ? ರಾಷ್ಟ್ರ ಧ್ವಜವಾಗಿದ್ದರೆ? ಅತ್ಯುತ್ತಮವಿತ್ತು ಎಂದಿದ್ದಾನೆ. ಇಲ್ಲಿ ಆತ ಆರೆಸ್ಸೆಸ್‌ನ ಮಾಜಿ ಸರಸಂಘಚಾಲಕ ಗೋಲ್ವಲ್ಕರ್ 1946ರಲ್ಲಿ "ನಮ್ಮ ಶ್ರೇಷ್ಠ ಸಂಸ್ಕೃತಿಯನ್ನು ಸಂಪೂರ್ಣವಾಗಿ ಪ್ರತಿನಿಧಿಸುವುದೆ ಭಗವಾಧ್ವಜ" ಎಂದು ಹೇಳಿರುವುದನ್ನೆ ಪುನರುಚ್ಚರಿಸಿರುವುದನ್ನು ಗಮನಿಸಬೇಕು.

1948ರಲ್ಲಿ ಗಾಂಧಿ ಹತ್ಯೆಯ ನಂತರದಲ್ಲಿ ಸಿಹಿ ಹಂಚಿಕೊಂಡು ಹುಚ್ಚೆದ್ದು ಕುಣಿದಿದ್ದ ಚೆಡ್ಡಿಗಳು ದೇಶದ ಹಲವಾರು ಭಾಗಗಳಲ್ಲಿ ತ್ರಿವರ್ಣ ಧ್ವಜವನ್ನು ಕಾಲಿನಿಂದ ಮೆಟ್ಟಿ ತುಳಿದಿದ್ದ ವಿಚಾರ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಗಾಂಧಿ ಹತ್ಯೆಯ ಬಳಿಕ ಆರೆಸ್ಸೆಸ್ ಮೇಲೆ ಹೇರಲಾಗಿದ್ದ ನಿಷೇಧಾಜ್ಞೆಯನ್ನು ಭಾರತ ಸರ್ಕಾರ ಹಿಂದೆಗೆದುಕೊಂಡದ್ದೆ ರಾಷ್ಟ್ರ ಧ್ವಜವನ್ನು ಗೌರವಿಸುವ ಷರತ್ತಿನ ಮೇರೆಗೆ. ಆದರೂ ನಂತರದ ದಿನಗಳಲ್ಲಿ ಭಗವಾಧ್ವಜವೆ ತಮ್ಮ 'ಹಿಂದೂ' ರಾಷ್ಟ್ರ ಧ್ವಜ ಎಂದು ಪ್ರತಿಪಾದಿಸುತ್ತ ರಾಷ್ಟ್ರ ಧ್ವಜವನ್ನು ಹಾರಿಸುವಾಗಲೂ ಅದನ್ನು ರಾಷ್ಟ್ರ ಧ್ವಜಕ್ಕಿಂತಲೂ ಹೆಚ್ಚು ಎತ್ತರದಲ್ಲಿ ಹಾರಿಸುತ್ತ ಬರಲಾಗಿದೆ. ನಾಗಪುರದಲ್ಲಿರುವ ಆರೆಸ್ಸೆಸ್‌ನ ಕೇಂದ್ರ ಕಚೇರಿ ರೇಶಮ್ ಬಾಗ್‌ನಲ್ಲಿ ಇಂದಿಗೂ ರಾಷ್ಟ್ರ ಧ್ವಜವನ್ನು ಹಾರಿಸುವ ಕ್ರಮ ಇಲ್ಲ.


ಸಂವಿಧಾನವನ್ನು ಧಿಕ್ಕರಿಸಿ ಮನುಸ್ಮೃತಿಯನ್ನು ಎತ್ತಿ ಹಿಡಿಯುವ, ತ್ರಿವರ್ಣ ಧ್ವಜವನ್ನು ತಿರಸ್ಕರಿಸಿ ಭಗವಾಧ್ವಜಕ್ಕೆ ವಂದಿಸುವ ಸಂಘ ಪರಿವಾರ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಕೊಟ್ಟಿರುವ ಕೊಡುಗೆ ಶೂನ್ಯ. ವಾಸ್ತವವಾಗಿ ಋಣಾತ್ಮಕ. ಏಕೆಂದರೆ ಇವರು ಸ್ವಾತಂತ್ರ್ಯ ಹೋರಾಟವನ್ನು ವಿರೋಧಿಸಿ ಬ್ರಿಟಿಷರಿಗೆ ಸಹಾಯ ಮಾಡಿದವರು. ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಅಲ್ಲಲ್ಲಿ ನೇಮಕಾತಿ ಕೇಂದ್ರಗಳನ್ನು ತೆರೆದು ಬ್ರಿಟಿಷ್ ಸೇನೆಗೆ ಭಾರತೀಯ ಯುವಕರನ್ನು ಭರ್ತಿ ಮಾಡಿಕೊಟ್ಟವರಿವರು! ಗೋಲ್ವಲ್ಕರ್ ಕೊಟ್ಟಿದ್ದ ಕರೆಯೊಂದನ್ನು ನೋಡಿ: "ಹಿಂದೂಗಳೆ! ಬ್ರಿಟಿಷರ ವಿರುದ್ಧ ಕಾದಾಡಿ ನಿಮ್ಮ ಶಕ್ತಿಯನ್ನು ಪೋಲು ಮಾಡುವ ಬದಲು ಅದನ್ನು ಆಂತರಿಕ ಶತ್ರುಗಳಾದ ಮುಸ್ಲಿಮರು, ಕ್ರೈಸ್ತರು ಮತ್ತು ಕಮ್ಯೂನಿಸ್ಟರ ವಿರುದ್ಧ ಬಳಸಿ". ಈ ಹಿನ್ನೆಲೆಯಲ್ಲಿ 1942ರ 'ಕ್ವಿಟ್ ಇಂಡಿಯ' ಚಳವಳಿಯ ಕಾಲದಲ್ಲಿ ಸಿಂಧ್, ಬಂಗಾಳ ಪ್ರಾಂತ್ಯಗಳಲ್ಲಿ ಮುಸ್ಲಿಂ ಲೀಗ್ ಜೊತೆಗೂಡಿ ಸಮ್ಮಿಶ್ರ ಸರಕಾರ ನಡೆಸುತ್ತಿದ್ದವರು ಯಾರೆಂದು ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ.

ಆರೆಸ್ಸೆಸ್‌ನ ಸಂಸ್ಥಾಪಕ ಹೆಡ್ಗೆವಾರ್ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ತಿರಸ್ಕಾರಯುತವಾಗಿ "ಜೈಲು ಶಿಕ್ಷೆ ಅನುಭವಿಸುವುದು ನಕಲಿ ದೇಶಪ್ರೇಮ" ಎಂದು ಹೇಳಿದಾತ. ಜೈಲು ಶಿಕ್ಷೆ ತಪ್ಪಿಸುವುದಕ್ಕೋಸ್ಕರ ಬ್ರಿಟಿಷರ ಅಡಿಯಾಳಾಗಲು ಸಿದ್ಧ ಎಂಬರ್ಥದ ಪತ್ರ ಬರೆದಿದ್ದ ಸಾವರ್ಕರ್‌ನನ್ನು ಆತನ ಅನುಯಾಯಿಗಳು "ವೀರ"ನೆಂದು ಕೊಂಡಾಡುವುದು ಬಹುಶಃ ಇದೇ ಕಾರಣಕ್ಕಾಗಿ ಇರಬೇಕು. ಇನ್ನು ಗೋಲ್ವಲ್ಕರ್ ಅಂತೂ ಭಗತ್ ಸಿಂಗ್, ಚಂದ್ರಶೇಖರ್



ಆಜಾದ್, ಅಶ್ಫಕುಲ್ಲಾ ಖಾನ್‌ರಂತಹ ಹೋರಾಟಗಾರರರನ್ನು "......ಇಂಥವರು ಆದರ್ಶನೀಯ ವ್ಯಕ್ತಿಗಳಲ್ಲ, ಆದರ್ಶವನ್ನು ಸಾಧಿಸುವಲ್ಲಿ ವಿಫಲರಾದ ಅವರಲ್ಲಿ ಮಾರಣಾಂತಿಕ ದೋಷ ಇದೆ" ಎಂದು ಮೂದಲಿಸಿದ್ದ. ದೊಡ್ಡ ವಿಪರ್ಯಾಸ ಏನೆಂದರೆ ಇದೇ ಸಂಘ ಪರಿವಾರಿಗರು ಇಂದು ಹೋದಲ್ಲಿಬಂದಲ್ಲಿ ಅದೇ ಭಗತ್ ಸಿಂಗ್ ಫೋಟೊ ಇಟ್ಟುಕೊಂಡು ಭಜನೆ ಮಾಡಲಾರಂಭಿಸಿದ್ದಾರೆ! ಕಪಟ ನಾಟಕಗಳಿಗೂ ಒಂದು ಮಿತಿ ಬೇಡವೆ! ಮಸೀದಿಗಳ ಮೇಲೆ ತ್ರಿವರ್ಣಧ್ವಜವನ್ನು ಹಾರಿಸಲೆತ್ನಿಸುವವರೇ ಬಾಬರಿ ಮಸೀದಿ ಕೆಡವಿದ ಮೇಲೆ ಭಗವಾಧ್ವಜವನ್ನು ಊರುತ್ತಾರೆ! ತ್ರಿವರ್ಣಧ್ವಜವನ್ನು ವಿರೋಧಿಸುತ್ತಲೇ ಕಾಶ್ಮೀರದಲ್ಲಿ ಅದೇ ತ್ರಿವರ್ಣ ಧ್ವಜವನ್ನು ಹಾರಿಸಲೆತ್ನಿಸುತ್ತಾರೆ! ಗಾಂಧಿ, ಅಂಬೇಡ್ಕರ್, ಭಗತ್ ಸಿಂಗ್, ಫುಲೆ ದಂಪತಿ ಮೊದಲಾದವರ ಚಿಂತನೆಗಳ ಬಗ್ಗೆ ತೀವ್ರ ಅಸಹಿಷ್ಣುತೆ ಹೊಂದಿರುವವರಿಂದಲೇ ಇಂದು ಅವರ ಆರಾಧನೆ ನಡೆಯುತ್ತದೆ! ಅಷ್ಟಕ್ಕೇ ನಿಲ್ಲಿಸದೆ ಇತಿಹಾಸವನ್ನೂ ತಿರುಚಲು ಹೊರಡುತ್ತಾರೆ. ಉದಾಹರಣೆಗೆ ಅಂಬೇಡ್ಕರರ ಸಂಕಲಿತ ಕೃತಿಗಳನ್ನು ಪ್ರಕಟಿಸುವಾಗ ಹಿಂದೂ ಧರ್ಮ ಮತ್ತು ಜಾತಿಪದ್ಧತಿ ಬಗ್ಗೆ ತೀಕ್ಷ್ಣ ಟೀಕೆಗಳಿರುವ ಅನೇಕ ಕೃತಿಗಳನ್ನೆ ಕಿತ್ತುಹಾಕುತ್ತಾರೆ! ಇಂತಹ ಬನಾವಟಗಳನ್ನು ಮತ್ತು ದುಷ್ಕೃತ್ಯಗಳನ್ನು ಬುದ್ಧಿವಂತರಾದ ಮತದಾರರು ಅರ್ಥ ಮಾಡಿಕೊಳ್ಳದೆ ಇರಲಾರರೆಂದು ಆಶಿಸೋಣ.

(ಆಧಾರ: ಶಂಕರ ನಾರಾಯಣನ್‌ರ ಲೇಖನ: RSS, freedom movement and the tricolour)



ಆಲಿಸಿರಿ ಪಾಲಿಸಿರಿ

ಶುಕ್ರವಾರದ ಪ್ರವಚನ ನಡೆಯುತ್ತಿತ್ತು. "ಆಲಿಸಿರಿ... ಪಾಲಿಸಿರಿ..." ಖಲೀಫ ಉಮರ್ ಪ್ರವಚನ ನೀಡಲು ಶುರು ಮಾಡಿದಾಗಲೇ ತುಂಬಿದ ಸಭೆಯ ಮಧ್ಯದಿಂದ ಯುವಕನೋರ್ವ ಎದ್ದು ನಿಂತು ಗಟ್ಟಿ ಧ್ವನಿಯಲ್ಲಿ "ನಾವು ಆಲಿಸುವುದೂ ಇಲ್ಲ, ಪಾಲಿಸುವುದೂ ಇಲ್ಲ" ಎಂದ. ಅಲ್ಲಿ ಸೇರಿದ್ದ ಜನಸ್ತೋಮ ಆಶ್ಚರ್ಯಚಕಿತರಾಗಿ ಧ್ವನಿ ಬಂದೆಡೆಗೆ ತಿರುಗಿದರು. ಸಭೆಯಲ್ಲಿ ಕೆಲವು ಕ್ಷಣ ನೀರವ ಮೌನ.

ಪ್ರವಚನ ನೀಡುತ್ತಿದ್ದ ಖಲೀಫ ಪ್ರವಚನ ನಿಲ್ಲಿಸಿ ಕೇಳಿದರು "ಕಾರಣವೇನು?"

"ಉಪದೇಶ ನೀಡುವವನು ಪಾಲಿಸುವವನಾಗಿರಬೇಕು, ನ್ಯಾಯ ನಿಷ್ಠನಾಗಿರಬೇಕು, ಅಂತಹ ನಾಯಕನನ್ನು ಮಾತ್ರ ನಾವು ಅನುಸರಿಸುವೆವು."

ಸಭೆಗೆ ಸಭೆಯೇ ಸ್ತಂಭೀಭೂತವಾಯಿತು. "ಉಮರನ ನಾಲಗೆಯಿಂದ ಸತ್ಯ ಮಾತ್ರ ಹೊರಬರಬಲ್ಲುದು" ಎಂದು ಪ್ರವಾದಿಯವರೇ ಪ್ರಶಂಸಿಸಿದ್ದರು. ಹಾಗಾದರೆ ಇದೇನಾಶ್ಚರ್ಯ?

ಉಮರ್ ಉದ್ವೇಗಗೊಳ್ಳಲಿಲ್ಲ,

"ಸಹೋದರ, ನನ್ನ ತಪ್ಪೇನೆಂದು ತಿಳಿಸುವಿರಾ?"

ಆ ಯುವಕ ಸಭೆಯ ಮುಂಭಾಗಕ್ಕೆ ಬಂದ.

"ಮೊನ್ನೆ ಕಾಣಿಕೆಯಾಗಿ ಬಂದ ಯಮನೀ ಬಟ್ಟೆಯನ್ನು ಸಮಾನವಾಗಿ ಹಂಚಲಾಗಿತ್ತಲ್ಲವೇ? ಅದರಲ್ಲಿ ಯಾರೊಬ್ಬನಿಗೂ ಇದೀ ನಿಲುವಂಗಿ ಹೊಲಿಸಲು ಸಾಧ್ಯವಾಗಿರಲಿಲ್ಲ. ನೀವು ಇಂದು ಅದೇ ಬಟ್ಟೆಯಿಂದ ನಿಲುವಂಗಿ ಹೊಲಿಸಿರುವಿರಲ್ಲಾ? ಇದು ಭ್ರಷ್ಟಾಚಾರವಲ್ಲದೇ ಮತ್ತೇನು? ನಿಮ್ಮನ್ನು ನಾವ್ಯಾಕೆ ಆಲಿಸಬೇಕು ಮತ್ತು ಪಾಲಿಸಬೇಕು?"

ಉಮರ್ ನಸುನಗುತ್ತಾ ತನ್ನ ಮಗ ಅಬ್ದುಲ್ಲಾನನ್ನು ಕರೆದು "ಉತ್ತರ ನೀಡು" ಎಂದರು.

"ಅಪ್ಪನಿಗೆ ಸರಿಯಾದ ಒಂದೇ ಒಂದು ನಿಲುವಂಗಿಯಿರಲಿಲ್ಲ, ಆದುದರಿಂದ ನನ್ನ ಪಾಲಿಗೆ ಬಂದ ಬಟ್ಟೆಯನ್ನೂ ಅಪ್ಪನಿಗೆ ನೀಡಿದ್ದೆ. ಅದನ್ನು ಸೇರಿಸ್ಕೊಂಡು ನಿಲುವಂಗಿ ಹೊಲಿಸಿದ್ದಾರೆ" ಎಂದ ಅಬ್ದುಲ್ಲಾ.

ಅಷ್ಟರಲ್ಲಿ ಸಭೆ "ನಾವು ಆಲಿಸುವೆವು... ನಾವು ಪಾಲಿಸುವೆವು" ಎಂಬ ಘೋಷ ಮೊಳಗಿಸಿತು.

* * * * *

ಗುರುಗಳು

ಒಮ್ಮೆ ಪ್ರಸಿದ್ಧ ಸೂಫಿ ಸಂತ ಇಮಾಂ ಶಾಫಿ ತನ್ನ ಶಿಷ್ಯರಿಗೆ ವಿದ್ಯೆ ಹೇಳಿಕೊಡುತ್ತಿದ್ದರು. ದಾರಿಯಲ್ಲಿ ಕೆದರಿದ ತಲೆಗೂದಲಿನ, ಜಡೆಗಟ್ಟಿದ ಗಡ್ಡದ, ವಿಚಿತ್ರವಾಗಿ ವರ್ತಿಸುವ ಹುಚ್ಚನೊಬ್ಬ ನಡೆದುಬರುತ್ತಿದ್ದ. ಸಂತರು ಎದ್ದು ನಿಂತು ಆತನಿಗೆ ಅಭಿವಂದಿಸಿದರು. ಇದನ್ನು ಕಂಡ ಶಿಷ್ಯರು ಅಚ್ಚರಿಯಿಂದ "ಇದೇನು ಗುರುಗಳೇ? ಹುಚ್ಚನಿಗೆ ಎದ್ದು ನಿಂತು ಅಭಿವಂದನೆ?" ಎಂದರು.

"ನಿಮ್ಮ ಪಾಲಿಗೆ ಆತ ಕೇವಲ ಹುಚ್ಚನಿರಬಹುದು, ನನ್ನ ಪಾಲಿಗೆ ಆತ ಗುರುವೂ ಹೌದು."

"ಅದ್ಹೇಗೆ ಗುರುಗಳೇ?"

"ನಾಯಿ ಪ್ರೌಢ ವಯಸ್ಕ ಆಗುವುದರ ಸಂಕೇತವೇನು ಎಂಬುದಕ್ಕೆ ಉತ್ತರ ಸಿಗದೇ ನಾನು ಚಿಂತಿತನಾಗಿದ್ದೆ. ಒಮ್ಮೆ ದಾರಿಯಲ್ಲಿ ನಡೆದಾಡುತ್ತಿರುವಾಗ ಈಗ ಹೋದ ನೀವು ಹೇಳಿದ ಹುಚ್ಚನಲ್ಲಿ ನನ್ನ ಸಂಶಯವನ್ನು ಅರುಹಿದೆ. ಅದಕ್ಕಾತ 'ನಾಯಿ ಎಂದು ಕಾಲೆತ್ತಿ ಉಚ್ಚೆ ಹೊಯ್ಯಲು ಪ್ರಾರಂಭಿಸುತ್ತದೋ, ಅಂದು ಅದು ಪ್ರೌಢವಯಸ್ಕ ಆಗುತ್ತದೆ' ಎಂದ. ವಿದ್ಯೆ ಯಾವುದಿದ್ದರೂ ವಿದ್ಯೆಯೇ ಸರಿ, ಅತಿರಥ ಮಹಾರಥ ಪಂಡಿತೋತ್ತಮರಲ್ಲಿ ಪರಿಹಾರ ಸಿಗದ ನನ್ನ ಸಂಶಯಕ್ಕೆ ಪರಿಹಾರ ನೀಡಿದವರು ಈ ಗುರುಗಳು."

* * * * *

ನಾಣ್ಯ

ಮಂಗಳೂರಿನ ಉಳ್ಳಾಲದ ಪ್ರಸಿದ್ಧ ಸೂಫಿಸಂತ ಸೆಯ್ಯದ್ ಮದನಿಯವರಿಗೆ ಸಂತಾನವಿರಲಿಲ್ಲ. ಅವರ ಮರಣ ಸನ್ನಿಹಿತವಾದಾಗ ಪತ್ನಿಯನ್ನು ಕರೆದು ಹೇಳಿದರು: "ನನ್ನ ಮರಣಾನಂತರ ನಿತ್ಯ ಜೀವನದ ಖರ್ಚಿಗೇನು ಮಾಡುವುದೆಂದು ಚಿಂತಿತಳಾಗಬೇಡ. ಪ್ರತಿದಿನ ನನ್ನ ಸಮಾಧಿಯ ಬಳಿಗೆ ಹೋಗು ಅಲ್ಲಿ ನಿನಗೆ ಪ್ರತಿನಿತ್ಯವೂ ನಿನ್ನ ದೈನಂದಿನ ಖರ್ಚಿಗೆ ಬೇಕಾದ ವ್ಯವಸ್ಥೆ ಸಿಗುತ್ತದೆ."

ಸಂತರ ಮರಣಾನಂತರ ಸಂತರ ಮಾತಿನಂತೆಯೇ ಬೀಬಿಯವರಿಗೆ ಪ್ರತೀದಿನ ಒಂದೊಂದು ನಾಣ್ಯ ಅವರ ಸಮಾಧಿಯ ಬಳಿ ಸಿಗುತ್ತಿತ್ತು. ಹೀಗೆ ಸಿಗುತ್ತಿರಲು ಬೀಬಿಯವರ ದೈನಂದಿನ ಖರ್ಚು ಕಳೆದು ಅರ್ಧದಷ್ಟು ಮೌಲ್ಯದ ದುಡ್ಡು ಉಳಿಸಬಹುದಿತ್ತು. ಬೀಬಿ ಒಂದು ದಿನ ಖರ್ಚು ಕಳೆದು ಉಳಿದುದನ್ನು ಉಳಿತಾಯ ಮಾಡಿದರು. ಮರುದಿನ ಬೀಬಿ ಸಂತರ ಸಮಾಧಿಯ ಬಳಿಗೆ ತೆರಳಿದಾಗ ಮೊದಲು ಸಿಗುತ್ತಿದ್ದುದಕ್ಕಿಂತ ಅರ್ಧ ಮೌಲ್ಯದ ನಾಣ್ಯವಷ್ಟೇ ಇತ್ತು. ಬೀಬಿಗೆ ವಾಸ್ತವ ಮನವರಿಕೆಯಾಯಿತು.

ಸಂತರು ಎಷ್ಟು ಸಾಧ್ಯವೋ ಅಷ್ಟು ಸರಳವಾಗಿ ಬದುಕಬೇಕು. ಮಿಗತೆಯಿದ್ದರೆ ದಾನ ಮಾಡಬೇಕೇ ಹೊರತು ನಾಳೆಗಾಗಿ ಬಚ್ಚಿಡಬಾರದು. ಸೂಫಿಗಳು ಎಂದೂ ನಾಳೆಯ ಬಗ್ಗೆ ಯೋಚಿಸಬಾರದು.

* * * * *

ಕತ್ತರಿ ಮತ್ತು ಸೂಜಿ

ಉತ್ತರ ಭಾರತದ ಪ್ರಸಿದ್ಧ ಸೂಫಿ ಸಂತ ಅಲ್ಲಾಮಾ ಸರ್‌ಹಿಂದೀಯವರು ಒಮ್ಮೆ ಹೀಗೆ ತಿರುಗಾಡುತ್ತಾ ಪಕ್ಕದ ರಾಜ್ಯವೊಂದಕ್ಕೆ ತೆರಳಿದರು. ಆ ರಾಜ್ಯದ ರಾಜ ಅಲ್ಲಾಮಾ ಸರ್‌ಹಿಂದೀಯವರ ದೊಡ್ಡ ಅಭಿಮಾನಿಯಾಗಿದ್ದ. ಮೂಲತಃ ದರ್ಜಿ ವೃತ್ತಿಯ ಕುಟುಂಬದ ಹಿನ್ನೆಲೆಯವರಾದ ಅವರಿಗೆ ರಾಜ ವಜ್ರ ವೈಢೂರ್ಯಗಳ ಮಣಿಗಳಿಂದ ಸಿಂಗರಿಸಲ್ಪಟ್ಟ ಚಿನ್ನದ ಕತ್ತರಿಯೊಂದನ್ನು ಕಾಣಿಕೆಯಾಗಿ ನೀಡಲು ಮುಂದಾದ.

ಅಲ್ಲಾಮಾ ಸರ್‌ಹಿಂದೀಯವರು ಆತನಲ್ಲಿ ಹೇಳಿದರು: "ನಿಮ್ಮ ಈ ಚಿನ್ನದ ಕತ್ತರಿ ನನಗೆ ಬೇಡವೇ ಬೇಡ. ಅಷ್ಟಕ್ಕೂ ನನಗೆ ಕಾಣಿಕೆ ನೀಡಬೇಕೆಂದಿದ್ದರೆ ಒಂದು ಸೂಜಿ ಕೊಡಿ ಸಾಕು."

ರಾಜನಿಗೆ ಆಶ್ಚರ್ಯವಾಯಿತು. ಮುಂದುವರಿದು ಸರ್‌ಹಿಂದೀಯವರು ಹೇಳಿದರು "ರಾಜನೇ, ಕತ್ತರಿ ಎಂದರೆ ಕತ್ತರಿಸಿ ತುಂಡು ಮಾಡುವ ಸಾಧನ. ಸೂಜಿಯು ತುಂಡಾದುದನ್ನು ಹೊಲಿಯುವ ವಸ್ತು, ಈಗ ಮನುಷ್ಯ ಕುಲಕ್ಕೆ ಬೇಕಾಗಿರುವುದು ಬೇರ್ಪಡಿಸುವ ವಸ್ತುವಲ್ಲ, ಜೋಡಿಸುವ ವಸ್ತು."

ರಾಜ ಮತ್ತು ನೆರೆದವರೆಲ್ಲಾ ಆಶ್ಚರ್ಯಚಕಿತರಾದರು. ಅಲ್ಲಾಮಾರ ಮಾತಿನಲ್ಲೇ "ಕೋಮು ಸೌಹಾರ್ದತೆ" ಕಾಪಾಡುವ ಮಹತ್ತರ ಪಾಠ ಅಡಗಿತ್ತು.

● ಇಸ್ಮತ್ ಫಜೀರ್



ಯೋಗೇಶ್ ಮಾಸ್ಟರ್


ಪುರಾಣದ ಹೂರಣ

ಅಯ್ಯಪ್ಪನ ಬೆನ್ನಿಗೆ ಹಲವು ಕಥೆಗಳು

ಅಯ್ಯಪ್ಪನ ಬೆನ್ನಿಗೆ ನಾನಾ ಕಥೆಗಳಿವೆ. ಅವುಗಳಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಆಂಶಿಕ ಭಾಗಗಳೆಂದರೆ, ಅಯ್ಯಪ್ಪ ಹರಿ ಮತ್ತು ಹರನ ಮಗನೆಂಬುದು. ಅವನು ಪಂದಳ ರಾಜನಿಗೆ ಕಾಡಿನಲ್ಲಿ ದೊರಕಿದವನೆಂದು. ಅವನ ಕುತ್ತಿಗೆಯಲ್ಲಿ ಗಂಟೆಯನ್ನು ಕಟ್ಟಿದ್ದದ್ದು. ತನ್ನ ಸಾಕುತಾಯಿಯ ತಲೆನೋವು ನಿವಾರಣೆಗೆ ಅವನು ಹುಲಿಯ ಹಾಲನ್ನು ಕರೆದುಕೊಂಡು ಬರಲು ಹೋಗಿ ಹುಲಿಗಳನ್ನೇ ತಂದದ್ದು. ಮಹಿಷಾಸುರನನ್ನು ಚಾಮುಂಡೇಶ್ವರಿಯು ಕೊಂದಾದ ಮೇಲೆ, ಅವನ ಸೋದರಿ ಮಹಿಷಿಯನ್ನು ಅಯ್ಯಪ್ಪ ಕೊಂದದ್ದು. ಶಬರಿಮಲೆಯಲ್ಲಿ ನೆಲಸಿದ್ದು, ಇತ್ಯಾದಿ. ಸಾಂಸ್ಕೃತಿಕ ಮತ್ತು ಸಾಮಾಜಿಕ ಅಧ್ಯಯನಕ್ಕೆ ಈ ಎಲ್ಲವೂ ಮುಖ್ಯವೇ. ಆದಕ್ಕೆ ಮುನ್ನ ಕೆಲವು ಕಥೆಗಳನ್ನು ಗಮನಿಸೋಣ.

ಮಹಿಷಿಯ ಹುಟ್ಟಿನ ಹಿಂದಿನ ಕಥೆ

ಸಮುದ್ರ ಮಥನಕ್ಕೂ ಪೂರ್ವಭಾಗದಲ್ಲಿ ಪಾರ್ವತಿ ಮತ್ತು ಇತರ ದೇವತೆಯರು ಇಡೀ ಭೂಲೋಕದಲ್ಲಿ



ಅತ್ಯಂತ ಶ್ರೇಷ್ಠವಾದ ಪತಿವ್ರತೆ ಯಾರು ಎಂದು ಚರ್ಚೆ ಮಾಡುತ್ತಿದ್ದರಂತೆ. ನಮಗಿಂತ ಯಾರು ಶ್ರೇಷ್ಠರು ಎಂಬ ಭಾವವೇ ಅಹಂಕಾರದ ಪರಮಾವಧಿಯೆಂದು ಅರ್ಥ. ಸಕಲ ಸದ್ಗುಣ ಸಂಪನ್ನ ದೇವತೆಗಳು ಅದ್ಯಾಕೋ ಆಗಾಗ ಇಂತಹ ಪೈಪೋಟಿಗಳಿಗೆ ಬಿದ್ದು ಮಾನವರ ಮುಂದೆ ಸೋತು ಬರುತ್ತಿರುತ್ತಾರೆ. ಅದೊಂದು ಕಡೆ ಇರಲಿ, ಪಾರ್ವತಿಯ ಚರ್ಚೆಯಲ್ಲಿ ವಿಷ್ಣುವು ಮೂಗು ತೂರಿಸಿ, "ಇಡೀ ಜಗತ್ತಿನಲ್ಲಿ (ಆ ಕಾಲಕ್ಕೆ) ಅತ್ರಿ ಮಹರ್ಷಿಯ ಹೆಂಡತಿಯಾದ ಸತಿ ಅನುಸೂಯಳೇ ಮಹಾಪತಿವ್ರತೆ" ಎಂದು ಹೇಳುತ್ತಾನೆ. ಅದನ್ನು ನಿರೂಪಿಸಲು ತ್ರಿಮೂರ್ತಿಗಳು (ಬ್ರಹ್ಮ, ವಿಷ್ಣು ಮಹೇಶ್ವರ) ಅತ್ರಿ ಮಹರ್ಷಿಯು ಇಲ್ಲದ ಸಮಯದಲ್ಲಿ ಅನಸೂಯೆಯ ಬಳಿಗೆ ಹೋಗಿ ಆತಿಥ್ಯ ಬಯಸುತ್ತಾರೆ. ಅತಿಥಿಗಳನ್ನು ಆದರದಿಂದ ಕಾಣುವ ಬದ್ಧತೆಯುಳ್ಳ ಅವಳು ಆತಿಥ್ಯದ ಧರ್ಮದಂತೆ ಅವರಿಗೆ ಬೇಕಾದ್ದನ್ನು ಬಡಿಸಲು ಮುಂದಾದಾಗ ಈ ತ್ರಿಮೂರ್ತಿಗಳು ಆಕೆಯು ನಗ್ನಳಾಗಿ ತಮಗೆ ಉಣಬಡಿಸಬೇಕೆಂದು ತಮ್ಮ ಅಭಿಲಾಷೆ ವ್ಯಕ್ತಪಡಿಸುತ್ತಾರೆ. ಅಂದರೆ, ತನ್ನ ಪತಿವ್ರತಾ ಧರ್ಮದಂತೆ ತಾನು ಗಂಡನ ಮುಂದಲ್ಲದೇ ಪರಪುರುಷರ ಮುಂದೆ ನಗ್ನಳಾಗಬಾರದು. ಹಾಗೆಯೇ ಗೃಹಿಣಿಯ ಆದ್ಯ ಕರ್ತವ್ಯವಾದ ಆತಿಥ್ಯದ ಆದರಕ್ಕೂ ಬದ್ಧಳಾಗಿರಬೇಕು. ಈಗ ಇವಳು ಯಾವುದನ್ನು ಬಿಡುವಳು? ಯಾವುದಕ್ಕೆ ಬದ್ಧಳಾಗುವಳು ಎಂದು ನೋಡಬೇಕಾಗಿತ್ತು, ಆದರೆ ಜಾಣೆ ಮತ್ತು ಪಾತಿವ್ರತ್ಯದ ಮಹಾಶಕ್ತಿಯನ್ನು ಹೊಂದಿದ್ದ ಅನುಸೂಯೆಯು ಆ ಮೂವರನ್ನೂ ಕೈಗೂಸುಗಳನ್ನಾಗಿ ರೂಪಾಂತರಿಸಿ, ಮೂರೂ ಮಕ್ಕಳಿಗೆ ಉಣ್ಣಿಸಿದಳು. ತಮ್ಮ ಗಂಡಂದಿರು ಮರಳಿ ಬಾರದ್ದನ್ನು ಕಂಡು ಸರಸ್ವತಿ, ಲಕ್ಷ್ಮೀ ಮತ್ತು ಪಾರ್ವತಿಯರು ಅಲ್ಲಿಗೇ ಹೋಗಿ ಭಯಂಕರ ಷಾಕ್‌ಗೆ ಒಳಗಾದರು. ತಮ್ಮೊಡನೆ ಸರಸದಿಂದಾಡ ಬೇಕಾಗಿರುವ ಗಂಡಂದಿರು ಎಳೆಯ ಮಕ್ಕಳಾಗಿ ಆಡುತ್ತಿದ್ದಾರೆ. ಇನ್ನು ಅವರನ್ನು ಹೊತ್ತುಕೊಂಡು ಮಾಡುವುದೇನು? ತಮ್ಮ ಗಂಡಂದಿರನ್ನು ಮೊದಲಿನ ಹಾಗೆ ಮಾಡಿ ಕಳುಹಿಸೆಂದು ಅನುಸೂಯೆಯನ್ನು ಬೇಡಿಕೊಂಡರು. ಅನುಸೂಯೆ ಅವರಿಂದ ಅದಕ್ಕೊಂದು ವರವನ್ನು



ವಸೂಲಿ ಮಾಡಿಕೊಳ್ಳಲು ಇಷ್ಟಪಟ್ಟಳು. ಅದೇನೆಂದರೆ, ತ್ರಿಮೂರ್ತಿಯರ ಅವತಾರವಾಗಿ ತನಗೊಂದು ಮಗು ಬೇಕೆಂದು, ಅದರಲ್ಲೂ ಮುಂದೆ ಕೊಳ್ಳಿ ಇಡಕ್ಕೆ ಪಿಂಡವಿಡಕ್ಕೆ ಗಂಡು ಮಗುವೇ ಜನಿಸಬೇಕು ಎಂದು ಶರತ್ತು ಒಡ್ಡಿದಳು. ಆ ಅಗ್ರೀಮೆಂಟಿಗೆ ಮೂವರು ಹೆಂಡಿರುಗಳು ಒಪ್ಪಿದ ನಂತರ ಮೂರು ಮಕ್ಕಳನ್ನು ಗಂಡಂದಿರನ್ನಾಗಿಯೇ ಮೊದಲ ರೂಪಕ್ಕೆ ಮಾರ್ಪಡಿಸಿ ಕಳುಹಿಸಿದಳು. ವರವೂ ಫಲಿಸಿತು. ದತ್ತಾತ್ರೇಯ ಹುಟ್ಟಿದ. ತ್ರಿಮೂರ್ತಿ ರೂಪ ದತ್ತಾತ್ರೇಯನು ಹುಟ್ಟಿದ ಮೇಲೆ ಸಕಲ ಶಾಸ್ತ್ರ ಪಾರಂಗತನಾಗಿ ಬೆಳೆದ. ಅವನು ಬೆಳೆದಾದ ಮೇಲೆ ಲೀಲಾವತಿ ಎಂಬಾಕೆಯನ್ನು ಮದುವೆಯಾದ. ದತ್ತಾತ್ರೇಯ ಮದುವೆಯಾದ ಮೇಲೆ ಆಧ್ಯಾತ್ಮದ ಆನಂದದ ಕಡೆಗೆ ಒಲವು ತೋರಿಸಿದನಲ್ಲದೆ, ಅದರ ಸಾಧನೆಯಲ್ಲೇ ಮುಂದುವರಿಯುತ್ತಾ ಸಚ್ಚಿದಾನಂದದ ಕಡೆಗೆ ನಡೆದ. ಅವನ ಹೆಂಡತಿ ಮತ್ತು ಅವನ ನಡುವೆ ಮಾಯ ಮತ್ತು ಆನಂದ; ಇವುಗಳ ಕುರಿತಾಗಿ ದೊಡ್ಡ ಚರ್ಚೆ ನಡೆಯಿತು. ದತ್ತಾತ್ರೇಯನಿಗೆ ಕೆಟ್ಟಕೋಪ ಬಂದು ರಾಕ್ಷಸರಲ್ಲಿ ಮಹಿಷಿಯಾಗಿ ಹುಟ್ಟು ಎಂದು ಶಪಿಸಿದ. ಅವಳಿಗೂ ರೇಗಿ, ನೀನೂ ಅದೇ ರಾಕ್ಷಸ ಕುಲದಲ್ಲಿ ಹುಟ್ಟಿ ನನ್ನನ್ನು ಸೇರುವಂತಾಗಲಿ ಎಂದು ಪ್ರತಿಶಾಪ ನೀಡಿದಳು.

ಚಿಕ್ಕಮಗಳೂರಿನ ಬಾಬಾ ಬುಡನ್ ಗಿರಿಯಲ್ಲಿ ಅಲ್ಲಿನ ಸೂಫಿ ಸಂತ ದಾದಾ ಪೀರ್‌ನ ಸಹೋದರಿಯನ್ನಾಗಿ, ಅಲ್ಲಿ ನಿತ್ಯ ಬರುತ್ತಿದ್ದ ಜನರಿಗೆ ತೆರೆಯಮರೆಯಿಂದ ರೊಟ್ಟಿಯನ್ನು ಕೊಡುತ್ತಿದ್ದ ದಾನಿಯನ್ನಾಗಿ ಅನುಸೂಯಳನ್ನು ಗುರುತಿಸುವ ಪುರಾಣವೂ ಇದೆ. ಈಗ ವಿಷಯಾಂತರ ಮಾಡದೇ ಅದನ್ನು ಮುಂದೆ ಯಾವಾಗಲಾದರೂ ನೋಡೋಣ.

ಕಥೆ

ಸಮುದ್ರ ಮಥನ ಕಾಲದಲ್ಲಿ ನೆರವು ಪಡೆದು, ಮಾತು ಕೊಟ್ಟಂತೆ ಪಾಲು ಕೊಡದೇ ರಾಕ್ಷಸರಿಗೆ ಮೋಸ ಮಾಡಲೆತ್ನಿಸುತ್ತಿದ್ದ ದೇವತೆಗಳಿಗೆ ನೆರವಾಗಲು ತನ್ನ ಲಿಂಗ ಬದಲಿಸಿಕೊಂಡು ವಿಷ್ಣು ಮೋಹಿನಿಯಾದ ಕಥೆ ಗೊತ್ತಿದೆ. ಅದೇ ಮೋಹಿನಿಯು ಶಿವನಿಗೊಮ್ಮೆ ನೆರವಾದಳು.

ಒಬ್ಬ ಅಸುರ ಶಿವನನ್ನು ಕುರಿತು ತಪಸ್ಸು ಮಾಡಿದ. ಅವನ ಭಕ್ತಿ ಮತ್ತು ತಪಸ್ಸನ್ನು ಮೆಚ್ಚಿ ಶಿವ



ಪ್ರತ್ಯಕ್ಷನಾಗಿ ಏನು ವರ ಬೇಕು ಎಂದು ಕೇಳಿದ. ದೇವತೆಗಳ ಪಾಲಿಗೆ ಉಗ್ರನಾದ ಈ ಅಸುರ ಬೇಡಿದ್ದಾದರೂ ಏನು? ತಾನು ಯಾರ ತಲೆ ಮೇಲೆ ಕೈಯಿಟ್ಟರೂ ಅವರು ಭಸ್ಮವಾಗಬೇಕು ಎಂದು. ಆ ವರ ಹೇಗೆ ಫಲಿಸುವುದೆಂದು ಅವನು ತಿಳಿದಿದ್ದನೋ. ತಲೆಯ ಮೇಲೆ ಕೈಯಿಟ್ಟು ಸುಟ್ಟು ಭಸ್ಮ ಮಾಡುವುದು ಶತ್ರುವಿನ ನಾಶಕ್ಕೆ. ಶತ್ರುವಿನ ಬಳಿಗೆ ಹೋಗಿ ಅವನ ತಲೆಯ ಮೇಲೆ ಕೈಯಿಡುವವರೆಗೂ ಆಯುಧಧಾರಿಯಾಗಿರುವ ಶತ್ರುವು ತನ್ನ ಶತ್ರುವು ತನ್ನ ತಲೆಯ ಮೇಲೆ ಕೈಯಿಟ್ಟು ನೇವರಿಸಲಿ ಎಂದು ಮಜ ತೆಗೆದುಕೊಳ್ಳುತ್ತಾ ಸುಮ್ಮನಿರುವನೇ? ತನ್ನ ತಲೆಯ ಮೇಲೆ ಕೈಯಿಡಲು ಬರುವ ಶತ್ರುವನ್ನು ನೋಡಿಕೊಂಡು ಆ ಶತ್ರು ಏನು ಮಾಡುತ್ತಿರುತ್ತಾನೆ? ಅದೇನೇ ಇರಲಿ, ಶಿವ ವರ ಕೊಟ್ಟ. ಅಸುರ ಅದನ್ನು ಪರೀಕ್ಷಿಸಲು ಶಿವನ ತಲೆಯ ಮೇಲೆ ಕೈಯಿಡಲು ಹೋದ. ಶಿವ ಬೆದರಿ ಅಲ್ಲಿಂದ ಓಡಿಹೋದ. ತಲೆಯ ಮೇಲೆ ಕೈಯಿಟ್ಟು ಭಸ್ಮಗೊಳಿಸುವ ವರವನ್ನು ಪಡೆದ ಅಸುರನು ಭಸ್ಮಾಸುರನೆಂಬ ಹೆಸರು ಪಡೆದು ಶಿವನನ್ನು ಅಟ್ಟಿಸಿಕೊಂಡೇ ಹೋದ. ಮೋಹಿನಿ ಅವತಾರದಲ್ಲಿರುವ ವಿಷ್ಣುವು ಅವನ ನೆರವಿಗೆ ಬಂದ. ಮೋಹಿನಿಯ ರೂಪಕ್ಕೆ ಮರುಳಾದ ಭಸ್ಮಾಸುರ ಅವಳನ್ನು ಬಯಸಿದ. ತನ್ನಂತೆಯೇ ನರ್ತಿಸಿ ನನ್ನ ಸೋಲಿಸಿದವರೊಂದಿಗೆ ನಾನು ಬೆರೆಯುತ್ತೇನೆ ಎಂದ



ಮೋಹಿನಿಯ ಮಾತನ್ನು ನಂಬಿ ಅವಳು ಕುಣಿದಂತೆ ಕುಣಿಯತೊಡಗಿದ. ಅವಳೂ ಕುಣಿಯುತ್ತಾ ಕುಣಿಯುತ್ತಾ ತನ್ನ ಕೈಯನ್ನು ತನ್ನ ತಲೆಯ ಮೇಲಿಟ್ಟುಕೊಂಡಳು. ಭಸ್ಮಾಸುರನೂ ಅಂತೆಯೇ ತನ್ನ ತಲೆಯ ಮೇಲೆ ಕೈಯಿಟ್ಟುಕೊಂಡು ಭಸ್ಮನಾಗಿ ಉರಿದುಬಿದ್ದ.



ಕಥೆ ಇಷ್ಟಕ್ಕೇ ಮುಗಿಯುವುದಿಲ್ಲ.

ಆ ಮೋಹಿನಿಯ ಒನಪು ವಯ್ಯಾರಕ್ಕೆ ನಮ್ಮ ಬೋಳಾ ಶಂಕರನೂ ಬಲಿಬಿದ್ದ. ಬೆನ್ನು ಬಿದ್ದ. ಬಿಡಲಿಲ್ಲ. ಸೇರಿಯೇ ಬಿಟ್ಟರು. ಮಗುವೂ ಹುಟ್ಟಿ ಬಿಟ್ಟಿತು. ಆ ಮಗುವೇ ಹರಿಹರ ಸುತನಾದ ಸ್ವಾಮಿ ಅಯ್ಯಪ್ಪ. ಶಾಸ್ತನ ಅವತಾರವಾದ ಅಯ್ಯಪ್ಪ.

ಇಲ್ಲೊಂದು ಟ್ವಿಸ್ಟು ಮತ್ತು ಒಂದು ಫ್ಲಾಶ್ ಬ್ಯಾಕ್.

ನೇಪಾಳದ ರಾಜ್ಯಾಧಿಪತಿ ಪಳಿಂಜನ ಮಹಾ ಶಿವಭಕ್ತ. ಇವನು ಮಹಾಕಾಳಿಗೆ ಕನ್ಯೆಯೊಬ್ಬಳನ್ನು ಬಲಿ ನೀಡಿ ತನ್ನ ಅಭೀಷ್ಟವನ್ನು ನೆರವೇರಿಸಿಕೊಳ್ಳುವುದರಲ್ಲಿದ್ದ. ಆಗ ಶಾಸ್ತ (ಶಬರಿಮಲೆಯ ಧರ್ಮಶಾಸ್ತ) ಪಳಿಂಜನ ಮಾಡುತ್ತಿರುವ ತಪ್ಪನ್ನು ಮನವರಿಕೆ ಮಾಡಿಕೊಟ್ಟ. ತನ್ನ ಬುದ್ಧಿಗೇಡಿತನಕ್ಕೆ ನಾಚಿದ ಪಳಿಂಜನ ಕ್ಷಮೆ ಕೋರಿ, ತನ್ನ ಮಗಳನ್ನು ಕೊಟ್ಟು ಶಾಸ್ತನಿಗೆ ಮದುವೆ ಮಾಡಿದ. ಆಗಲೇ ಮಲಯಾಳ ದೇಶದ ಅಧಿಪತಿ ಪಿಂಜಕನ್‌ನ ಸಾಮ್ರಾಜ್ಯವು ಬೇತಾಳಗಳ ಕಾಟಕ್ಕೆ ಒಳಗಾಗಿತ್ತು. ಆಗ



ಶಾಸ್ತನು ಪಿಂಜಕನ್ ಸಾಮ್ರಾಜ್ಯವನ್ನು ಬೇತಾಳ ಬಾಧೆಯಿಂದ ಬಿಡುಗಡೆ ಮಾಡಿದ. ಪಿಂಜಕನ್ ತನ್ನ ಮಗಳನ್ನು ಮದುವೆಯಾಗಲು ಶಾಸ್ತನನ್ನು ಬೇಡಿಕೊಂಡ. ಶಾಸ್ತ ಅವಳನ್ನೂ ಮದುವೆಯಾದ. ಇದನ್ನು ತಿಳಿದ ನೇಪಾಳದ ರಾಜ ಪಳಿಂಜನನಿಗೆ ಕೋಪ ಬಂದು ತನ್ನ ಮಗಳನ್ನು ಮದುವೆಯಾಗಿರುವಾಗ ಮತ್ತೊಬ್ಬಳನ್ನು ಹೇಗೆ ಮದುವೆಯಾದೆ ಎಂದು ಪ್ರಶ್ನಿಸಿದ. ಆಗ ಪಳಿಂಜನ ಅದೇ ಕೋಪದಿಂದ ಶಾಸ್ತನಿಗೆ ಭೂಮಿಯಲ್ಲಿ ಮನುಷ್ಯನಾಗಿ ಹುಟ್ಟಿ ಹನ್ನೆರಡು ವರ್ಷಗಳು ಬಾಳು ಎಂದು ಶಾಪ ಕೊಟ್ಟ. ಶಾಸ್ತನಿಗೂ ಕೋಪ ಬಂದು ಪಳಿಂಜನನಿಗೆ ಶಾಪ ಕೊಟ್ಟ. ಅದೇನೆಂದರೆ, ಪಂದಳ ಸಾಮ್ರಾಜ್ಯದಲ್ಲಿ ಮಕ್ಕಳ ಭಾಗ್ಯವಿಲ್ಲದ ರಾಜನಾಗಿ ಹುಟ್ಟು ಎಂದು. ನಂತರ ಪಳಿಂಜನನಿಗೆ ತನ್ನ ಮೂರ್ಖತನದ ಅರಿವಾಗಿ ಕ್ಷಮೆ ಯಾಚಿಸಿದ. ನಂತರ ಶಾಸ್ತ ಅವನಿಗೆ ಮಾತು ಕೊಟ್ಟ: "ನಿನಗೆ ನಿನ್ನದೇ ಮಗುವು ಹುಟ್ಟುವವರೆಗೂ, ಭೂಮಿಯಲ್ಲಿ ನಾನೇ ನಿನ್ನ ಮಗನಾಗಿರುತ್ತೇನೆ."

ಹಾಗಾಗಿ, ಪಳಿಂಜನ ರಾಜನು ಪಂದಳ ರಾಜನಾಗಿ ಜನಿಸಿದ. ಶಾಸ್ತನೋ ಮಣಿಕಂಠನಾಗಿ ಹುಟ್ಟಿದ. ಮಗುವಿನ ಕೊರಳಲ್ಲಿ ಗಂಟೆಯನ್ನು ಕಟ್ಟಿರುವುದನ್ನು ನೋಡಿ ಅಗಸ್ತ್ಯ ಮಹರ್ಷಿಯು ಅವನಿಗೆ ಮಣಿಕಂಠನೆಂದು ಹೆಸರಿಟ್ಟ. ಅವನೋ ಪಂದಳ ರಾಜನಿಗೆ ದೊರಕುವುದು ಪಂಪಾ ನದಿಯ ದಡದಲ್ಲಿ.

ಹಾಗೆಯೇ ಈ ಕಥೆಗಳ ಜೊತೆಜೊತೆಯಲ್ಲಿ ನೀವು ನೆನಪಿಟ್ಟಿರಬೇಕಾಗಿರುವುದು ಏನೇನೆಂದರೆ, ಮಹಿಷಿ (ಮಹಿಷಾಸುರನ ಸೋದರಿ) ಬ್ರಹ್ಮನಿಂದ ವರ ಪಡೆದಿರುತ್ತಾಳೆ. ಅದೇನೆಂದರೆ, ಹರಿಹರರಿಂದ ಅವಳಿಗೆ ಮರಣ ಬರಬಾರದು. ಜಾತಸ್ಯ ಮರಣಂ ಧ್ರುವಂ ಎಂದು ಬ್ರಹ್ಮ ಹೇಳಿದ್ದರಿಂದ, ಪ್ರಕೃತಿಗೆ ವಿರುದ್ಧವಾಗಿ ಗಂಡಸು ಮತ್ತು ಗಂಡಸಿಂದ ಮಗುವು ಹುಟ್ಟುವುದಿಲ್ಲವಾದ್ದರಿಂದ, ಹರಿ ಮತ್ತು ಹರ, ಅವರಿಬ್ಬರಿಂದ ಹುಟ್ಟುವ ಮಗುವಿನಿಂದ ತನಗೆ ಮರಣ ಸಂಭವಿಸಬೇಕು. ಆ ಮಗುವು ಮನುಷ್ಯ ರೂಪದಲ್ಲಿದ್ದು, ಸುಮಾರು ಹನ್ನೆರಡು ವರ್ಷದವನಾಗಿದ್ದಿರಬೇಕು. (ಮೊದಲನೆಯದಾಗಿ ಇಬ್ಬರು ಗಂಡಸರು ಕೂಡಿದರೆ ಮಗುವು ಹುಟ್ಟುವುದೇ ಇಲ್ಲ ಎಂಬ ಖಾತ್ರಿ ಇತ್ತು ಅವಳಿಗೆ.)


ಕಥೆ ಮುಂದುವರಿಯಲೇ ಬೇಕು

ಮಹಿಷಾಸುರನ ಕೊಂದಾದ ಬಳಿಕ ಅಸುರ ರಾಜಕುಮಾರಿ ಮಹಿಷಿಗೆ ತನ್ನ ಸೋದರನ ವಧೆಯಿಂದಾಗಿ ಕೋಪವುಂಟಾಗುತ್ತದೆ. ಮಹಿಷಿಯು ಕೂಡ ತನ್ನ ತಪಸ್ಸಿನಿಂದ ಬ್ರಹ್ಮನನ್ನು ಒಲಿಸಿಕೊಳ್ಳುತ್ತಾಳೆ. ವಿಶ್ವವನ್ನು ಆಳುವಂತಹ ವರವನ್ನು ಪಡೆಯುವುದಲ್ಲದೇ ಮಹಿಳೆಯ ಗರ್ಭದಿಂದ ಹುಟ್ಟುವ ಯಾವನಿಂದಲೂ ತನಗೆ ಸಾವು ಬರಬಾರದೆಂದು ವರ ಪಡೆಯುತ್ತಾಳೆ. ಅಂತಹದ್ದೊಂದು ವ್ಯಕ್ತಿಯು ಹುಟ್ಟಲಿಕ್ಕೇ ಸಾಧ್ಯವಿಲ್ಲದ ಕಾರಣ ತಾನು ಅಮರಳಾಗುವಳೆಂದು ಅವಳ ಲೆಕ್ಕಾಚಾರ.

ಆ ಹೊತ್ತಿಗೇ ಭಸ್ಮಾಸುರನ ಎಪಿಸೋಡೂ ಆಗಿ, ಹರಿ ಮತ್ತು ಹರ ಇಬ್ಬರೂ ಸೇರಿ ಮಗುವು ಹುಟ್ಟೇ ಬಿಟ್ಟಿತು. ಪ್ರಕೃತಿಗೆ ವಿರುದ್ಧವಾಗಿ ಮತ್ತು ಮಹಿಷಿಯ ಲೆಕ್ಕಾಚಾರವು ತಿರುಗುಮುರುಗಾಗಿ ಗಂಡಸರಿಬ್ಬರ ಮಗು ಜನಿಸಿತ್ತು. ಹುಟ್ಟಿದ ಮಗುವನ್ನು ಪಂಪಾ ನದಿಯ ದಂಡೆಯ ಮೇಲೆ ಬಿಟ್ಟುಹೋದರು.

ಮುಂದಾಗುವುದೇ ಸ್ವಾಮಿ ಅಯ್ಯಪ್ಪ ಲೀಲೆ.

ಸರ್ವಸಂಗ ಪರಿತ್ಯಾಗಿ ಸನ್ಯಾಸಿಗಳಿಗೆ ಒಡ್ಡೋಲಗ ಬೇಕೇ?



ಉಡುಪಿ ಪರ್ಯಾಯದ ದರ್ಬಾರ್ ವೇದಿಕೆ ಈ ಬಾರಿ ಡಾ.ಮೋಹನ್ ಆಳ್ವಾರ ಪರಿಕಲ್ಪನೆಯಲ್ಲಿ ಬಂಟರ ಗುತ್ತಿನ ಮನೆಯ ಚಾವಡಿ ರೂಪ ತಳೆಯಲಿದೆ ಹಾಗೂ ಕರಾವಳಿಯ ಮಣ್ಣ ಪರಂಪರೆಯನ್ನು ಬಿಂಬಿಸಿ ಭಕ್ತಾದಿಗಳ ಕಣ್ಮನ ಸೆಳೆಯಲಿದೆ ಎಂದು ಮಠದ ವಕ್ತಾರರು ಹೇಳಿದ್ದಾರೆ. ದರ್ಬಾರ್ ಮತ್ತು ಗುತ್ತಿನ ಮನೆಯ ಚಾವಡಿ ಇವೆರಡೂ ಊಳಿಗಮಾನ್ಯ ವ್ಯವಸ್ಥೆ ಅಥವಾ ಪಾಳೆಗಾರಿಕೆ ವ್ಯವಸ್ಥೆಯ ಪ್ರತೀಕ. ತುಳುವಿನಲ್ಲಿ ಗುತ್ತಿನ ಮನೆ ಎಂದರೆ ದೊಡ್ಡ ಜಮೀನ್ದಾರರ ಮನೆ. ಹಿಂದಿನ ಕಾಲದಲ್ಲಿ ಗುತ್ತಿನ ಮನೆಯ ಚಾವಡಿಯಲ್ಲಿ ಗುತ್ತಿನ ಯಜಮಾನ ಕುಳಿತುಕೊಳ್ಳುತ್ತಿದ್ದ ಹಾಗೂ ಕೃಷಿ ಕಾರ್ಮಿಕರು ಮತ್ತು ರೈತರು ಚಾವಡಿಗಿಂತ ಆರು ಅಡಿ ತಗ್ಗಿರುವ ಅಂಗಳದಲ್ಲಿ ನಿಂತುಕೊಂಡು ಜಮೀನುದಾರನ ಹತ್ತಿರ ಮಾತನಾಡಬೇಕಿತ್ತು. ಸಾಮಾನ್ಯ ರೈತರು ಮತ್ತು ಕೆಳಜಾತಿಯವರು ಯಾವುದೇ ಕಾರಣಕ್ಕೆ ಚಾವಡಿ ಮೇಲೆ ಬರುವ ಹಾಗಿರಲಿಲ್ಲ.

ನನ್ನ ತಂದೆ ಹುಬ್ಬಳ್ಳಿ ಡಿವಿಜನ್‌ನಲ್ಲಿ ರೇಲ್ವೆ ಸ್ಟೇಷನ್ ಮಾಸ್ಟರ್ ಆಗಿದ್ದು ವರ್ಷಕ್ಕೊಮ್ಮೆ ಮಂಗಳೂರು ಹತ್ತಿರವಿದ್ದ ನಮ್ಮ ಹಿರಿಯರ ಗುತ್ತಿನ ಮನೆಗೆ ಬೇಸಿಗೆ ರಜೆಯಲ್ಲಿ ಬರುತ್ತಿದ್ದೆವು. ಸುಮಾರು 54 ವರ್ಷಗಳ ಹಿಂದೆ ಅಂದರೆ ನಾನು ಕೇವಲ ಹತ್ತು ವರ್ಷದ ಹುಡುಗನಾಗಿದ್ದಾಗ ನನ್ನದೇ ವಯಸ್ಸಿನ ರೈತರ ಹುಡುಗರ ಜೊತೆ ಆಡುವಾಗ ಒಬ್ಬ ಕೆಳಜಾತಿಯ ಹುಡುಗನನ್ನು ಮನೆಯ ಚಾವಡಿಯ ಮೇಲೆ ನಾನು ಕರೆತಂದೆ. ಅದನ್ನು ನೋಡಿದ ನನ್ನ ಸೋದರಮಾವ ಆ ಹುಡುಗನನ್ನು ಬೈದು ಓಡಿಸಿದ್ದಲ್ಲದೇ ನಾನು ಕೆಳಜಾತಿಯವನನ್ನು ಚಾವಡಿಗೆ ಕರೆತಂದಿದ್ದಕ್ಕೆ ನನ್ನ ಬೆನ್ನಿಗೆ ಬಾಸುಂಡೆ ಬರುವ ಹಾಗೆ ಬಾರಿಸಿದ್ದರು. ಇದು ಗುತ್ತಿನ ಮನೆ ಚಾವಡಿಯ ಕರಾಳ ಜಾತಿವಾದಿ ಮುಖ.

ಹಾಗೆ ನೋಡಿದರೆ ದೇವಸ್ಥಾನಗಳೂ ಪಾಳೇಗಾರಿಕೆ ವ್ಯವಸ್ಥೆಯ ಅಂಗಗಳೇ ಎಂಬುದು ನಿಜ. ಹಿಂದಿನ ಕಾಲದಲ್ಲಿ ಕೇವಲ ಸ್ಥಳೀಯ ಗುತ್ತಿನ ಜಮೀನ್ದಾರರು ಮಾತ್ರ ಸ್ಥಳೀಯ ದೇವಸ್ಥಾನಗಳ ಧರ್ಮದರ್ಶಿಗಳಾಗುವ ಅವಕಾಶ ಇತ್ತು. ಕೇವಲ ಈಗಿನ ಉಡುಪಿ ಪರ್ಯಾಯ ಮಾತ್ರವಲ್ಲ ನಮ್ಮ ಕರಾವಳಿಯ ಇತರೆಡೆ ಮತ್ತು ಮುಂಬೈಯಲ್ಲಿಯೂ ಕರಾವಳಿಯ ತುಳು ಸಂಸ್ಕೃತಿ ಬಿಂಬಿಸುವಾಗ ಕೇವಲ ಜಮೀನ್ದಾರರ ಗುತ್ತಿನ ಮನೆ ಚಾವಡಿ ಮತ್ತು ಶ್ರೀಮಂತ ಬಂಟರ ಮನೆಯಲ್ಲಿ ಹಿಂದಿನ ಕಾಲದಲ್ಲಿ ಉಪಯೋಗಿಸುತ್ತಿದ್ದ ಮರದ ಪರಿಕರಗಳನ್ನು ಹಾಗೂ ಕೃಷಿಯ ಸಾಧನಗಳನ್ನು ಮಾತ್ರ ಪ್ರದರ್ಶಿಸಲಾಗುತ್ತದೆ. ಮೀನುಗಾರರು ಮೂರ್ತೆದಾರರು ಮತ್ತು ಇತರ ಕುಲಕಸುಬು ಮಾಡುವವರು ತುಳು ಸಂಸ್ಕೃತಿಯ ಠೇಕೇದಾರರಿಗೆ ಕಾಣಿಸುವುದು ಕಡಿಮೆ. ಶತಮಾನಗಳಿಂದ ಉಡುಪಿ ಮಠದ ಬಿಟ್ಟಿ ಸೇವೆ ಮಾಡುತ್ತಿದ್ದವರು ಮೊಗವೀರರು ಅಂದರೆ ಬೆಸ್ತ ಸಮುದಾಯದವರೇ ಹೆಚ್ಚು. ಆದರೆ ಈಗೀಗ ಮುಂಬೈಯ ಮಾಂಸಾಹಾರಿ ಬಾರ್ ಮಾಲಿಕ ಬಂಟರು ಉಡುಪಿ ಮಠಕ್ಕೆ ಹತ್ತಿರವಾದ ಕೂಡಲೇ ಮಠದವರಿಗೆ ಬಂಟರ ಗುತ್ತಿನ ಮನೆ ಚಾವಡಿ ತುಂಬಾ ಪ್ರಿಯವಾಯಿತು ಹಾಗೂ ಬಡ ಮೊಗವೀರರು ದೂರವಾದರು. ಪೇಜಾವರರ ಚಾತುರ್ಮಾಸ್ಯ ಸಮಾರೋಪ ಕೆಲವರ್ಷಗಳಿಂದ ಮುಂಬೈಯ ಬಂಟರ ಭವನದಲ್ಲಿ ಶರಾಬು ಬಾರ್ ಮಾಲಿಕರ ಪಾದಪೂಜೆಯಿಂದಲೇ ಆಗುತ್ತಿದೆ.

ಕೃಷ್ಣನಿಗೆ ಸುಧಾಮ ಅತ್ಯಂತ ಪ್ರಿಯ ಮಿತ್ರ ಹಾಗೂ ಭಕ್ತನಾಗಿದ್ದ. ಈ ಕುಚೇಲ ತಂದ ಒಣ ಅವಲಕ್ಕಿ ಕೃಷ್ಣನಿಗೆ ಮೃಷ್ಟಾನ್ನ ಎನಿಸಿತು. ಕೃಷ್ಣನೇ ತನ್ನ ಗೆಳೆಯನ ಕಾಲು ತೊಳೆದು ಪಾದಪೂಜೆ ಮಾಡಿ ಕಾಣಿಕೆ ಕೊಟ್ಟನು. ಆದರೆ ಇಂದು ಅದೇ ಕುಚೇಲ ಪರ್ಯಾಯಕ್ಕೆ ಬಂದರೆ ಅವನು ಯಾವುನೋ ಭಿಕ್ಷುಕ ಎಂದು ಉಡುಪಿ ಪೊಲೀಸರು ಅವನನ್ನು ಓಡಿಸುವುದು ಖಂಡಿತ. ಕೊನೆಗೆ ಹೇಗೋ ಮಾಡಿ ಸುಧಾಮ ಪೇಜಾವರರನ್ನು ಭೇಟಿಯಾದರೂ ಪೇಜಾವರರು ಅವನ ಪಾದಪೂಜೆ ಮಾಡುವುದು ಒತ್ತಟ್ಟಿಗಿರಲಿ ತಾವೇ ಅವನಿಂದ ಪಾದ ಪೂಜೆ ಮಾಡಿಸಿಕೊಂಡು ಕಾಣಿಕೆ ಪೀಕಿಸಬಹುದು. ಪೇಜಾವರರಷ್ಟು ಪಾದಪೂಜೆ ಮಾಡಿಸಿಕೊಳ್ಳುವ ಗೀಳು ಬೇರೆ ಯಾವುದೇ ಸನ್ಯಾಸಿಗಿಲ್ಲ. ದರ್ಬಾರ್ ಎಂಬ ಹೆಸರು ಇರುವುದು ನವಾಬರ ಮತ್ತು ರಾಜರ ಒಡ್ಡೋಲಗಕ್ಕೆ. ಸರ್ವಸಂಗ ಪರಿತ್ಯಾಗಿಯಾಗಿರುವ ಸನ್ಯಾಸಿಗಳಿಗೆ ಒಡ್ಡೋಲಗ ಬೇಕೇ? ಇಳಿವಯಸ್ಸಿನ ಸನ್ಯಾಸಿಗಳಿಗೂ ಆಡಂಬರ ವೈಭೋಗದ ಆಸೆಯೇಕೆ? ವೈಭೋಗದಲ್ಲಿ ಮುಳುಗಿದ ಕೃಷ್ಣನ ಎಲ್ಲಾ ಒಂದೂವರೆ ಲಕ್ಷ ಮಕ್ಕಳು ಕೊನೆಗೆ ಏನಾದರು ಎಂದು ಪುರಾಣವೇ ಹೇಳುತ್ತದೆ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಪರ್ಯಾಯ ಒಂದು ಅಮಲಿನ ಕಾರ್ಯಕ್ರಮ

ತುಳುಭಾಷೆಯಲ್ಲಿ ಪರ್ಯ ಎಂದರೆ ಕುಡಿ ಎಂದು ಅರ್ಥ. ನೀರ್ ಪರ್ಯ ಅಂದರೆ ನೀರು ಕುಡಿ ಎಂದರ್ಥ. ಪರ್ಯಾಯ ಎಂದರೆ ಕುಡಿದಿದ್ದೀಯಾ ಎಂದರ್ಥ. ಪರ್ಯಾಯಗು ಪೋಪಿನಿ ಅಂದರೆ ಕುಡಿಯಲು ಹೋಗುವುದು ಎಂಬ ಅರ್ಥವೂ ಆಗುತ್ತದೆ ಪರ್ಯಾಯ ಸಮಾರಂಭಕ್ಕೆ ಹೋಗುವುದು ಎಂಬ ಅರ್ಥವೂ ಆಗುತ್ತದೆ. ಕಾರ್ಲ್‌ಮಾರ್ಕ್ಸ್ ಹೇಳಿದಂತೆ ಧರ್ಮ ಎಂದರೆ ಒಪಿಯಮ್ ಅಮಲು ಇದ್ದಂತೆ. ಇದು ಜಗತ್ತಿನ ಎಲ್ಲಾ ಧರ್ಮಗಳಿಗೂ ಅನ್ವಯ. ಹಾಗಾಗಿ ಸರ್ವಧರ್ಮ ಸಮ್ಮೇಳನ ಎಂದರೆ ಸರ್ವ ಕುಡುಕರ ಸಮ್ಮೇಳನ ಎನ್ನಬೇಕು. ಉಡುಪಿಯ ಪರ್ಯಾಯ ಸಮಾರಂಭಕ್ಕೆ ತುಳುವಿನ ಅರ್ಥ ತುಂಬಾ ಸರಿಹೊಂದುತ್ತದೆ. ಅಂದರೆ ಅದು ಕುಡಿತದ (ಧರ್ಮದ ಅಮಲಿನ) ಸಮಾರಂಭ. ಯಾಕೆಂದರೆ ಈ ಧಾರ್ಮಿಕ ನಾಟಕ ಸಂಬಂಧವಿಲ್ಲದವರಿಗೆಲ್ಲಾ ಅಮಲು ಬರಿಸಿ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಿದೆ. ಕೆಳಜಾತಿಯವರಿಗಂತೂ ಅದು ಹೆಚ್ಚು ಅಮಲು ಏರಿಸಿ ವಿಪರೀತ ಉತ್ಸಾಹದಿಂದ ಪಾಲ್ಗೊಳ್ಳುವಂತೆ ಮಾಡಿದೆ. ಹಾಗಾದರೆ ಇದಕ್ಕೆ ಏನನ್ನಬೇಕು? ತುಳುವ ಜನ ಮರುಳೋ ಮುದಿಯ ಸ್ವಾಮಿ ಮರುಳೋ ಪರ್ಯಾಯವೆಂಬ ಎಲ್ಲಮನ ಜಾತ್ರೆಯಲ್ಲಿ ಉಣ್ಣದವ ಮರುಳೋ?

ಈ ಸೋಮವಾರ ಸಂಜೆ ಪರ್ಯಾಯ ಮುಕ್ತಾಯವಾದ ಮೇಲೆ ಉಡುಪಿ ನಗರ ಮತ್ತು ಸುತ್ತಮುತ್ತಲಿನ ಹಳ್ಳಿಯ ಜನರು ದೊಡ್ಡ ಬಿಡುಗಡೆಯ ನಿಟ್ಟುಸಿರು ಬಿಟ್ಟರು. ಯಾಕೆಂದರೆ ಹಿಂದಿನ ಒಂದು ತಿಂಗಳಿನಿಂದ ವಾಹನ ಸಂಚಾರ ನಿರ್ಬಂಧದಿಂದಾಗಿ ಸ್ಥಳೀಯ ನಾಗರಿಕರ, ವಿದ್ಯಾರ್ಥಿಗಳ ಹಾಗೂ ಹೊರಗಿನಿಂದ ನಗರಕ್ಕೆ ದಿನಾಲೂ ಬಂದುಹೋಗುವವರ ಜೀವನ ಅತೀ ದುರ್ಭರವಾಗಿತ್ತು.

- ವೀರಪ್ಪ ದಿ ನಾಯ್ಕ್, ಮಂಗಳೂರು

ಧಾರ್ಮಿಕತೆಯ ಮೂಸೆಯಲ್ಲಿ ರಾಜಕೀಯ ಲೇಪನವೇ ಕೃಷ್ಣ

ಉಡುಪಿಯಲ್ಲಿ ಇತ್ತೀಚೆಗೆ ಆಚರಿಸಲಾದ ಪೇಜಾವರ ಶ್ರೀ ವಿಶ್ವೇಶ ತೀರ್ಥರ ಪಂಚಮ ಪರ್ಯಾಯೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಸಮಾಗಮ, ವಿವಿಧ ಸ್ತರಗಳ ಸ್ತಬ್ಧ ಚಿತ್ರಗಳ ಮೆರವಣಿಗೆ, ವಾದ್ಯ ಘೋಷ, ವಿವಿಧ ರಾಜ್ಯಗಳ ವಿಶೇಷ ನೃತ್ಯಗಳು, ಈ ಪರಿಯ ಸೊಬಗು ಇನ್ನಾವ ಉತ್ಸವದಲ್ಲೂ ಕಾಣೆ ಎನ್ನುವಂತಿತ್ತು, ಕೃಷ್ಣ ಮಠದ ಇತಿಹಾಸದಲ್ಲೇ ಇದು ನಃ ಭೂತೋ ನಃ ಭವಿಷ್ಯತಿ ಎಂದರೆ ತಪ್ಪಾಗಲಾರದು. ಮಾಧ್ವ ಮತದ ಅಷ್ಟ ಪರಂಪರೆಯಲ್ಲಿ ಸೋಂಧೆ ವಾದಿರಾಜರು ನಾಲ್ಕು ಅವಧಿಗೆ ಕೃಷ್ಣ ಕೈಂಕರ್ಯ ಮಾಡಿದ ನಂತರ ಪಂಚಮ ಪರ್ಯಾಯದ ಅವಧಿಗೆ ಕೃಷ್ಣ ಕೈಂಕರ್ಯಕ್ಕೆ ಪೇಜಾವರ ಶ್ರೀಗಳಿಗೆ ಲಭಿಸಿರುವುದು ಇಂತಹ ಇಳಿ ವಯಸ್ಸಿನಲ್ಲಿ ಎಂತಹ ಲವಲವಿಕೆ ಎನ್ನುವ ಅತೀವ ಸಂತೋಷವಿದೆ. ಶ್ರೀಗಳ ಸಾಮಾಜಿಕ ಕಳಕಳಿ, ಸೇವಾ ಮನೋಭಾವ ಅಮೋಘ.

ಆದರೆ, ಸಡಗರದ ಉತ್ಸವದಲ್ಲಿ ಕೇಂದ್ರ ಬಿಜೆಪಿ ಪ್ರಮುಖರು, ನೇತಾರರು ಹಾಗೂ ಬಿಜೆಪಿಯ ಬೇರು ಸಂಘಟನೆಗಳ ಸಂಚಲನವೇ ಆವರಿಸಿತ್ತು. ಹಾಗಾಗಿ, ಉಡುಪಿಯಲ್ಲಿ ಇಡೀ ದೇಶದ ಹಾಗೂ ರಾಜ್ಯದ ರಾಜಕೀಯ ಶಕ್ತಿ ಕೇಂದ್ರೀಕೃತವಾಗಿತ್ತು. ಹಾಗಾಗಿ ವೈಭವದ ಕಾರ್ಯಕ್ರಮ ಧಾರ್ಮಿಕತೆಯಲ್ಲಿ ರಾಜಕೀಯವೋ ಅಥವಾ ರಾಜಕೀಯದಲ್ಲಿ ಧಾರ್ಮಿಕತೆಯೋ ಎಂಬ ಶಂಕೆ ಮೂಡದಿರದು. ರಾಜಕೀಯಕ್ಕೂ ಪರ್ಯಾಯೋತ್ಸವಕ್ಕೂ ಏನಾದರೂ ನಂಟೆ. ಇತ್ತೀಚಿನ ದಿನಗಳಲ್ಲಿ ಪೇಜಾವರ ಶ್ರೀಗಳು ಬಿಜೆಪಿ ರಾಜಕೀಯ ಭ್ರಷ್ಟಾಚಾರಿಗಳ ಪರ ಬ್ಯಾಟಿಂಗ್ ಮಾಡಿದನ್ನು ಇಲ್ಲಿ ಸ್ಮರಿಸಬಹುದು. ರಾಜಕೀಯ ಲೇಪನವಿಲ್ಲದ, ಸಾಮಾಜಿಕ ಸೇವೆಯ ಉಡುಪಿ ಕೃಷ್ಣನಿಗೆ ಎಂದೆಂದಿಗೂ ಪ್ರಿಯ.

- ಆರ್.ಎನ್.ಸತ್ಯನಾರಾಯಣ ರಾವ್, ಮೈಸೂರು

ಪೇಜಾವರರ ಕುತ್ಸಿತ ಪ್ರಶ್ನೆ


ಎರಡು ವಾರಗಳ ಹಿಂದೆ ಪೇಜಾವರ ಸ್ವಾಮಿಗಳು ತಮ್ಮ ಪರ್ಯಾಯಕ್ಕಾಗಿ ವಂತಿಗೆ ಕಾಣಿಕೆ ವಸೂಲು ಮಾಡಲು ಧಾರವಾಡಕ್ಕೆ ಭೇಟಿ ಕೊಟ್ಟಾಗ ದಿವಂಗತ ಕಲಬುರ್ಗಿಯವರ ಕೊಲೆಯ ಬಗ್ಗೆ ಮಾತನಾಡುತ್ತಾ "ಅವರ ಈ ಕೊಲೆಗೆ ಕಾರಣ ಉಗ್ರ-ಹಿಂದುತ್ವವೋ ಅಥವಾ ಉಗ್ರ-ವೀರಶೈವತ್ವವೋ" ಎಂಬ ಕುತ್ಸಿತ ಪ್ರಶ್ನೆ ಹಾಕಿ ಜನರನ್ನು ಗೊಂದಲದಲ್ಲಿ ಕೆಡವಿದರು. ಉಗ್ರ-ವೀರಶೈವತ್ವ ಎಂಬ ಹೊಸ ಶಬ್ದ ಹುಟ್ಟು ಹಾಕಿ ಪೇಜಾವರ ಸ್ವಾಮಿಗಳು ಏನನ್ನು ಹೇಳಲು ಬಯಸಿದ್ದರು? ಡಾ.ಕಲಬುರ್ಗಿ ಅವರನ್ನು ಕೊಂದಿದ್ದು ಹಿಂದೂತ್ವವಾದಿಗಳಾಗಿರದೇ ಲಿಂಗಾಯತರೇ ಅವರನ್ನು ಕೊಂದಿದ್ದು ಎಂದು ಪರೋಕ್ಷವಾಗಿ ಅವರು ಆಪಾದಿಸುವಂತಿತ್ತು. ಇಷ್ಟು ನಿಖರವಾಗಿ ಅವರಿಗೆ ಕೊಲೆಗಾರರ ಜಾತಿಯ ಬಗ್ಗೆ ಗೊತ್ತಿದ್ದರೆ ಅವರೇಕೆ ಇದನ್ನು ಪೊಲೀಸರಿಗೆ ತಿಳಿಸಲಿಲ್ಲ? ಎಲ್ಲಾ ವಿಷಯಗಳಲ್ಲೂ ಪೇಜಾವರರ ಇಬ್ಬಂದಿತನ ಜಗಜ್ಜಾಹೀರವಾಗಿದೆ. ಈಗ ವಿಚಾರವಾದಿಯೊಬ್ಬರ ದುಃಖಕರ ಕೊಲೆಯ ವಿಷಯದಲ್ಲೂ ಅವರು ಇಂತಹ ಇಬ್ಬಂದಿತನ ತೋರಿಸುತ್ತಿರುವುದು ಶೋಚನೀಯ.

ಇನ್ನೂ ಮುಂದುವರಿದು ಈ ಸ್ವಾಮಿ ಹೇಳಿದ್ದೇನೆಂದರೆ "ಈಗಿನ ಕರ್ನಾಟಕದ ಕಾಂಗ್ರೆಸ್ ಸರಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ, ಆದರೆ ಬಹುಸಂಖ್ಯಾತರನ್ನು ಮತ್ತು ಅಲ್ಪಸಂಖ್ಯಾತರನ್ನು ಸಮಾನತೆಯಿಂದ ಕಾಣಬೇಕು. ಯಾವುದೇ ಗುಂಪಿನ ಓಲೈಕೆಗೆ ಇಳಿಯಬಾರದು" ಎಂದು ಸ್ವಾಮೀಜಿ ಸರಕಾರಕ್ಕೆ ಬಿಟ್ಟಿ ಸಲಹೆ ನೀಡಿದರು. ಇದರ ಪರೋಕ್ಷ ಅರ್ಥ ಕಾಂಗ್ರೆಸ್ ಸರಕಾರ ಅಲ್ಪಸಂಖ್ಯಾತರ ತುಷ್ಟೀಕರಣ ಮಾಡಿ ಬಹುಸಂಖ್ಯಾತರ ಅನಾದರ ಮಾಡುತ್ತಿದೆ ಎಂದು ತಾನೇ? ಇದುವೇ ಸರ್ವಜ್ಞ ಪೀಠ ಏರಲಿರುವವರ ಮನಸ್ಥಿತಿ. ಸ್ವತಃ ಸ್ವಾಮೀಜಿಯೇ ಒಂದು ರಾಜಕೀಯ ಪಕ್ಷದ ಓಲೈಕೆಗೆ ಇಳಿದಿರುವುದನ್ನು ತಾನೇ ಮರೆತಿರುವುದು ಅವರ ದ್ವಂದ್ವ ವ್ಯಕ್ತಿತ್ವ ತೋರಿಸುತ್ತದೆ.

ಇಡೀ ಭಾರತದಲ್ಲಿಯೇ ಅತೀಹೆಚ್ಚು ಪ್ರಚಾರಪ್ರಿಯ ಸನ್ಯಾಸಿ ಎಂದು ಕುಪ್ರಸಿದ್ಧಿ ಪಡೆದಿರುವ ಪೇಜಾವರರ ಸ್ವ-ವೈಭವದ ಚಪಲ ತೀರಿಸಲು ಕೋಟ್ಯಾಂತರ ರೂಪಾಯಿ ಖರ್ಚು ಮಾಡಲಾಗುತ್ತಿದೆ. ಆಸ್ಕರ್ ಫರ್ನಾಂಡಿಸ್‌ನಂತಹ ನಿಷ್ಪ್ರಯೋಜಕ ವ್ಯಕ್ತಿಯ ಕೈಯಲ್ಲಿ ಕರ್ನಾಟಕದ ಕಾಂಗ್ರೆಸ್ ಸಿಕ್ಕಿ ಬಿದ್ದಿದ್ದು ಅವರು ಸಂಘ ಪರಿವಾರದೊಂದಿಗೆ ಒಳಒಪ್ಪಂದ ಮಾಡಿಕೊಂಡು ಸಿದ್ದು ಸರಕಾರದ ಮೇಲೆ ಒತ್ತಡ ಹಾಕಿ ಉಡುಪಿ ಪರ್ಯಾಯಕ್ಕೆ ಎರಡು ಕೋಟಿ ಕೊಡಿಸಿದ್ದಾರೆ. ಕರ್ನಾಟಕ ಸರಕಾರ ನೇರವಾಗಿ ಎರಡು ಕೋಟಿ ಕೊಟ್ಟಿದ್ದರೆ ಇತರ ಇಲಾಖೆಗಳು ಪರೋಕ್ಷವಾಗಿ 7-8 ಕೋಟಿ ಕೊಟ್ಟಿವೆ. ಆದರೆ ಉಡುಪಿ ಪರ್ಯಾಯಕ್ಕೆ ಸರಕಾರ ಮತ್ತು ಜನರು ಕೊಡುವ ವಂತಿಕೆಗಳು ಕೃಷ್ಣ ದೇವರ ಸೇವೆಗೆ ಹೋಗುತ್ತದೆ ಎಂದು ಪರಿಗಣಿಸುವುದು ತಪ್ಪು. ಪರ್ಯಾಯವೆಂದರೆ ಅದು ಒಬ್ಬನೇ ಒಬ್ಬ ಸ್ವಾಮೀಜಿಯ ವೈಯಕ್ತಿಕ ಸಮಾರಂಭ. ಪರ್ಯಾಯಕ್ಕೆ ಅರ್ಪಿತವಾದ ವಂತಿಕೆ ಹೋಗುವುದು ದೇವರ ಸೇವೆಗಲ್ಲ, ಅದು ಸ್ವಾಮೀಜಿಗಳ ವೈಯಕ್ತಿಕ ಗೀಳಿನ ಆಡಂಬರ ವೈಭೋಗಕ್ಕೆ ಮಾತ್ರ ಹೋಗುತ್ತದೆ.

ಪ್ರತಿ ಎರಡು ವರ್ಷಕ್ಕೊಮ್ಮೆ ಒಂದೇ ಖಾಸಗಿ ಮಠದೊಳಗಿರುವ ಎರಡು ಸ್ವಾಮಿಗಳ ನಡುವೆ ಪೂಜೆಯ ಅಧಿಕಾರ ಬದಲಾವಣೆಯ ಸರಳ ವಿಧಿಗಾಗಿ ಸರಕಾರ ಮತ್ತು ಸಂಘಸಂಸ್ಥೆಗಳು ಕನಿಷ್ಠ ನೂರು ಕೋಟಿ ಖರ್ಚು ಮಾಡುತ್ತವೆ. ವಿಪರ್ಯಾಸವೆಂದರೆ ತ್ಯಾಗ ಜೀವಿಗಳಾಗಿರಬೇಕಿದ್ದ ಸ್ವಾಮೀಜಿಗಳೇ ತಮ್ಮ ವೈಯಕ್ತಿಕ ಆಡಂಬರಕ್ಕಾಗಿ ಉದ್ಯಮಿಗಳಿಗೆ ಮತ್ತು ರಾಜಕಾರಣಿಗಳಿಗೆ ದುಂಬಾಲು ಬಿದ್ದು ಒತ್ತಾಯದಿಂದ ಇವನ್ನು ಮಾಡಿಸುತ್ತಾರೆ. ಇದನ್ನು ಅನುತ್ಪಾದಕ ವೆಚ್ಚ ಮತ್ತು ಕ್ರಿಮಿನಲ್ ವೇಸ್ಟ್ ಎನ್ನದೇ ವಿಧಿಯಿಲ್ಲ. ರಾಜ್ಯ ಸರಕಾರದ ಮತ್ತು ಸಂಘ ಸಂಸ್ಥೆಗಳಿಂದ ದೊರೆತ ಇದೇ ನೂರು ಕೋಟಿ ರೂಪಾಯಿಯನ್ನು ಸಾಲಬಾಧಿತ ರೈತರ ಸಹಾಯಕ್ಕೆ ಕೊಟ್ಟಿದ್ದರೆ ಆತ್ಮಹತ್ಯೆ ಮಾಡಿಕೊಂಡಿರುವ ಎಲ್ಲಾ ಒಂದು ಸಾವಿರ ನೇಗಿಲಯೋಗಿ ರೈತರ ಜೀವ ಉಳಿಸಬಹುದಿತ್ತು ಹಾಗೂ ನೇಗಿಲು ಹೊತ್ತಿರುವ ಬಲರಾಮ-ಶ್ರೀಕೃಷ್ಣರು ಇಡೀ ನಾಡನ್ನೇ ಹರಸುತ್ತಿದ್ದರು. ಇದೆಲ್ಲ ಸ್ವಾರ್ಥಭರಿತ ಧಾರ್ಮಿಕ ನೇತಾರರಿಗೆ ಅರ್ಥವಾದರೆ ಸಮಾಜ ಉದ್ಧಾರವಾಗಬಹುದು.

- ಹರೀಶ್ ಎಂ.ಆರ್, ಉಡುಪಿ



ಪರ್ಯಾಯವೂ, ಮೂರ್ಖ ಶೂದ್ರರೂ

ಉಡುಪಿಯ ಪರ್ಯಾಯವನ್ನು "ನಾಡಹಬ್ಬ" ಎಂದು ಉಡುಪಿಯ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಮಾರ್ ಸೊರಕೆಯವರು ಅಧಿಕೃತವಾಗಿ ಕರೆದಿರುವುದಲ್ಲದೇ ಕುಂದಾಪುರದಿಂದ ಮಂಗಳೂರುವರೆಗಿನ 80 ಕಿ.ಮೀ ದೂರ ಹೆದ್ದಾರಿಯ ಎರಡೂ ಬದಿಗೆ 20 ಅಡಿ ಉದ್ದಗಲದ ಹತ್ತಾರು ಭಾರಿ ಫ್ಲೆಕ್ಸ್ ಸಹ ಸರಕಾರಿ ವೆಚ್ಚದಲ್ಲಿ ಸೊರಕೆ ಹಾಕಿಸಿದ್ದಾರೆ. ಕರ್ನಾಟಕಕ್ಕೆ ಇರುವುದು ಒಂದೇ ಒಂದು ಅಧಿಕೃತ ನಾಡಹಬ್ಬ, ಅದುವೇ ದಸರಾ. ಹಾಗಿರುವಾಗ ಈಗಿನ ಕರ್ನಾಟಕ ಸರಕಾರ ಉಡುಪಿಯ ಒಂದು ಸಣ್ಣ ಬ್ರಾಹ್ಮಣ ಪಂಗಡದ ಖಾಸಗಿ ಮಠದ ವ್ಯಕ್ತಿಗತ ಸಮಾರಂಭವೊಂದಕ್ಕೆ ನಾಡಹಬ್ಬ ಎಂಬ ಅಧಿಕೃತ ಮಾನ್ಯತೆ ಯಾವಾಗ ಕೊಟ್ಟಿದ್ದು? ಈ ರೀತಿ ಫ್ಲೆಕ್ಸ್ ಹಾಕಿರುವ ಜಿಲ್ಲಾ ಉಸ್ತುವಾರಿ ಸಚಿವ ಸೊರಕೆಯವರು ರಾಜ್ಯದ ಜನತೆಗೆ ವಿವರಣೆ ಕೊಡಲು ಬಾಧ್ಯರು.

ನನ್ನ ಪರಿಚಯದ ಸ್ಥಳೀಯ ದೇವಸ್ಥಾನದ ಅರ್ಚಕರೊಬ್ಬರು ಪರ್ಯಾಯದ ದಿನದಂದು ನನಗೆ ರಸ್ತೆಯಲ್ಲಿ ಸಿಕ್ಕಿದರು. "ಯಾಕೆ ಭಟ್ರೆ ನಿಮ್ಮ ಜಾತಿಯ ಪರ್ಯಾಯಕ್ಕೆ ನೀವೇ ಹೋಗಲಿಲ್ಲ?" ಎಂದು ನಾನು ವಿಚಾರಿಸಿದಾಗ ಅವರು ಹೇಳಿದ್ದೇನೆಂದರೆ "ಪರ್ಯಾಯದ ಗೌಜಿ ಗದ್ದಲಗಳೆಲ್ಲಾ ಇರುವುದು ನಿಮ್ಮಂತಹ ಶೂದ್ರರನ್ನು ಮಂಗ ಮಾಡಲು. ನಮಗೆ ಅಲ್ಲಿ ಹೋಗುವ ಅವಶ್ಯಕತೆಯೇ ಇಲ್ಲ, ನಮ್ಮ ಶ್ರೀಕೃಷ್ಣ ಇಲ್ಲಿಯೇ ಇದ್ದಾನೆ ನೋಡಿ" ಎಂದು ತಮ್ಮ ಸೊಂಟದಲ್ಲಿ ಕಟ್ಟಿಕೊಂಡಿದ್ದ ಸಾಲಿಗ್ರಾಮವನ್ನು ತೋರಿಸಿದರು. "ನಾವು ಯಾವುದೇ ದೇವರ ಪೂಜೆ ಮಾಡಿ ಮುಗಿಸಿದಾಗ ಕೃಷ್ಣಾರ್ಪಣಮಸ್ತು ಎಂದು ಹೇಳಿ ನಾವು ಮಾಡಿದ ಪೂಜೆಯ ಫಲ ಅರ್ಪಿಸುವುದು ಇದೇ ಕೃಷ್ಣನಿಗೆ. ನಮಗೆಲ್ಲಾ ಅಲ್ಲಿ ಮಠಕ್ಕೆ ಹೋಗಿ ಪೂಜಿಸುವ ಅಗತ್ಯ ಇಲ್ಲ, ಅದೆಲ್ಲಾ ಬೇಕಿರುವುದು ಶೂದ್ರರಿಗೆ. ನಿಮ್ಮಂತಹ ವಿದ್ಯಾವಂತ ಶೂದ್ರರ ಕಣ್ಣು ಕುಕ್ಕಿಸಲು ಮತ್ತು ಸಮಾಜವನ್ನು ಅನವರತ ನಮ್ಮ ಮುಷ್ಟಿಯೊಳಗೆ ಇಟ್ಟುಕೊಳ್ಳಲು ಇಂತಹ ದುಬಾರಿ ಕೃತಿಮ ಸಮಾರಂಭಗಳ ಅಗತ್ಯವಿದೆ. ಕನಕನ ಕಿಂಡಿಯಂತೆ ಅವೆಲ್ಲಾ ನಮ್ಮ ಟ್ರೇಡ್ ಸೀಕ್ರೆಟುಗಳು. ನಿಮಗೆಲ್ಲಾ ಅವು ಅರ್ಥವಾಗಲಿಕ್ಕಿಲ್ಲ ಬಿಡಿ. ಎಲ್ಲಾ ಪೂಜೆಗಳಿಗೂ ನಾವು ಹೇಳುವುದು ಒಂದೇ ಮಂತ್ರವನ್ನು, ಆದರೆ ಈ ಗುಟ್ಟು ನಿಮಗೆ ಎಂದಾದರೂ ಗೊತ್ತಾಗಿದೆಯೇ?" ಎಂದು ಅರ್ಚಕರು ಒಂದು ಟ್ರೇಡ್

ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಸೀಕ್ರೆಟ್ ಬಾಯಿತಪ್ಪಿ ಬಯಲುಗೊಳಿಸಿದರು.

"ಮೂಲತಃ ಪರ್ಯಾಯ ಎಂದರೆ ಪೂಜೆಗೆ ಕುಳಿತುಕೊಳ್ಳುವ ಮಠಗಳ ಬದಲಾವಣೆ ಅಷ್ಟೇ ಎಂದು ನಾವು ವೈದಿಕರು ಕರೆಯುತ್ತೇವೆ. ನಿರ್ಗಮಿಸುವ ಸ್ವಾಮೀಜಿಯ ಹಳೆ ಮಠ ತೆಗೆದು ಆಗಮಿಸುವ ಸ್ವಾಮೀಜಿಯ ಹೊಸ ಮಠ ದೇವರ ಎದುರಿಗೆ ಇಡುವುದೇ ನಮ್ಮ ಪಾಲಿಗೆ ಪರ್ಯಾಯ. ಬ್ರಾಹ್ಮಣರ ದೃಷ್ಟಿಯಲ್ಲಿ ಪರ್ಯಾಯಕ್ಕೆ ಇದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಇಲ್ಲ. ಆದರೆ ನಿಮಗೆ ಶೂದ್ರರಿಗೆ ಅದೇನೋ ಮಹಾ ಪವಿತ್ರ ಸಂದರ್ಭ ಎಂದು ಬಿಂಬಿಸುವ ಅನಿವಾರ್ಯತೆ ನಮ್ಮ ವೃತ್ತಿಯ ಅನುಕೂಲಕ್ಕಾಗಿ ಬೇಕಾಗುತ್ತದೆ" ಎಂದರು.

ಐನೂರು ವರ್ಷಗಳ ಹಿಂದೆ ಎರಡು ವರ್ಷದ ಪರ್ಯಾಯ ವಿಧಿ ಶುರು ಮಾಡಿದ ವಾದಿರಾಜರ ಕಾಲದಲ್ಲಿ ಈ ಪೂಜೆಯ ಕೈ ಬದಲಾವಣೆ ಹೊರಗಿನ ಜನರಿಗೆ ಗೊತ್ತೇ ಆಗುತ್ತಿರಲಿಲ್ಲವಂತೆ. ಕಾರಣ ಇದು ಹೊರಗಿನ ಭಕ್ತರಿಗೆ ಸಂಬಂಧವೇ ಇಲ್ಲದ ವಿಧಿಯಾಗಿದೆ. "ಆದರೆ ದಡ್ಡ ಶೂದ್ರರು ತಾವೇ ಮುಗಿಬಿದ್ದು ತಮ್ಮದೇ ಖರ್ಚಿನಲ್ಲಿ ಆಡಂಬರ ಮಾಡುವುದಾದರೆ ಮತ್ತು ನಮ್ಮದೇ ಲಾಭ ಅದರಲ್ಲಿ ಇರುವಾಗ ನಾವೇಕೆ ಮೂರ್ಖರಂತೆ ಬೇಡ ಎನ್ನುತ್ತೇವೆ?" ಎಂದು ನನ್ನನ್ನೇ ಭಟ್ಟರು ಪ್ರಶ್ನಿಸಿದರು.

- ಆರ್.ಬಿ.ಶೇಣವ, ಮಂಗಳೂರು

ಯಾವುದು ಶುದ್ಧ ಯಾವುದು ಅಶುದ್ಧ?

ಕಳೆದ ಸಂಚಿಕೆಯಲ್ಲಿ ಶಬರಿಮಲೆಗೆ ಮಹಿಳೆಯರ ಪ್ರವೇಶಕ್ಕೆ ಸಂಬಂಧಿಸಿ ಮಲ್ಲಿಗೆಯವರು ಬರೆದ ಲೇಖನ ಚಿಂತನಾರ್ಹವಾಗಿತ್ತು. ಅಶುದ್ಧ-ಅಪವಿತ್ರ ಎಂದು ಕರೆಸಿಕೊಂಡ ಮಹಿಳೆಯರ ಪ್ರಾಕೃತಿಕ ಋತುಚಕ್ರದ ಕುರಿತಾಗಿ ಅಲ್ಲಿನ ದೇವಸ್ವಂ ಕಮಿಟಿಯ ಅಧಿಕಾರಿ ನೀಡಿದಂತಹ ಅಸಹ್ಯಕರ ಹೇಳಿಕೆಯ ಹಿಂದಿನ ಕೆಟ್ಟ ಮನಸ್ಥಿತಿಗಿಂತ ಈ ಪ್ರಕ್ರಿಯೆ ಖಂಡಿತಾ ಕೆಟ್ಟದಲ್ಲ.

ತೀರಾ ಇತ್ತೀಚೆಗೆ ಬಾಗಿಲಿಲ್ಲದ ಮನೆಗಳಿಗೆ ಹೆಸರಾದ ಮಹಾರಾಷ್ಟ್ರದ ಶಿಂಗಣಾಪುರದಲ್ಲೂ ಮಹಿಳೆಗೆ ಸಂಬಂಧಿಸಿ ಇಂತಹದ್ದೇ ಗಲಾಟೆಯೊಂದು ನಡೆದಿತ್ತು. ಶನಿದೇವನ ಹೆಸರಿನಲ್ಲಿರುವ ಕಪ್ಪುಶಿಲೆಯನ್ನು ಮಹಿಳೆಯೊಬ್ಬಳು ಮುಟ್ಟಿ ಬಂದದ್ದು ಅಲ್ಲಿ ಕೋಲಾಹಲವನ್ನೇ ಎಬ್ಬಿಸಿತು. ಸಿಸಿ ಕ್ಯಾಮರಾದಲ್ಲಿ ದಾಖಲಾದ ಈ ಅಪಚಾರ(?)ದ ಬಗ್ಗೆ ಪರ ವಿರೋಧ ಚರ್ಚೆಗಳು ನಡೆದಿದ್ದವಾದರೂ ಕೊನೆಗೆ ಶಿಂಗಣಾಪುರದ ಅಪವಿತ್ರಗೊಂಡ ಶನಿದೇವನನ್ನು (ದೇವತೆಯಲ್ಲೂ ವರ್ಣಗಳಿವೆ ಶನಿ-ಯಮರು ಶೂದ್ರ ವರ್ಣಕ್ಕೆ ಸೇರುತ್ತಾರಂತೆ) ವೈದಿಕರು ಶುದ್ಧೀಕರಿಸಿದರು. ಇಲ್ಲಿ ಆ ಮಹಿಳೆಯಾಗಲೀ ಶಬರಿಮಲೆಯಲ್ಲಿ ಜಯಮಾಲಾರಂತವರಾಗಲೀ ಅಪವಿತ್ರಗೊಳಿಸುವ ಕೆಟ್ಟ ಉದ್ದೇಶದಿಂದ ಅಲ್ಲಿಗೆ ಹೋಗಿರುವುದಿಲ್ಲ; ಅಂತಹ ಧೈರ್ಯವೂ ಅವರಿಗಿರುವುದಿಲ್ಲ. ಭಕ್ತಿಯ ಪರಾಕಾಷ್ಠೆಯಲ್ಲಿ ಗುಂಪಿನಲ್ಲಿ ತನ್ನನ್ನೇ ಮರೆತು ಆ ಮಹಿಳೆ ಓಡಿಹೋಗಿ



ಕಲ್ಲನ್ನು ಮುಟ್ಟಿಬಂದಿರಬೇಕಷ್ಟೆ. ಅದೇ ರೀತಿ ಸೆಲೆಬ್ರಿಟಿಯಾಗಿರುವ ಜಯಮಾಲಾ ತನ್ನ ಪ್ರಭಾವ ಹೇಳಿಕೊಂಡು ಪ್ರವೇಶ ಗಿಟ್ಟಿಸಿಕೊಂಡಿರಬಹುದಾದರೂ ಇಲ್ಲಿ ತಕರಾರು ಎತ್ತಿರುವುದು ದೇವರೂ ಅಲ್ಲ ಎಲ್ಲಾ ಜನತೆಯೂ ಅಲ್ಲ. ಬೆರಳೆಣಿಕೆಯ ಕೆಲ ಜಿಗುಟು ಸಂಪ್ರದಾಯವಾದಿಗಳಷ್ಟೇ ಇದರ ಹಿಂದೆ ನಿಂತು ತಿದಿಯೂದುತ್ತಿರುವುದು. ಈಗ ಚರ್ಚೆಯಾಗುತ್ತಿರುವ ಸಲ್ಮಾನ್- ಶಾರೂಖ್‌ರ ಶೂ ಹಾಕಿ ದೇವಸ್ಥಾನ ಪ್ರವೇಶವೂ ಇಂತಹ ಕೆಟಗರಿಗೇ ಸೇರುತ್ತದೆ. ಯಾಕೆಂದರೆ, ದೇಗುಲದ ಗರ್ಭಗುಡಿಯಲ್ಲಿ ದೇವರ ಆಭರಣ ಕದ್ದವರಿದ್ದಾರೆ. ಅಷ್ಟೇ ಯಾಕೆ, ಯಾವುದೋ ಹೆಣ್ಣಿನೊಂದಿಗೆ ಅನೈತಿಕ ಕ್ರಿಯೆಗೆ ತೊಡಗಿಸಿಕೊಂಡು ಸಿಕ್ಕಿಬಿದ್ದವರೂ ಇದ್ದಾರೆ. ಇವೆಲ್ಲ ಪುರೋಹಿತರ ಕ್ಷಮಾರ್ಹ ವಿಚಾರಗಳಾದರೆ ಉಳಿದವರ ವಿಚಾರದಲ್ಲಿ ಚಿಕ್ಕಪುಟ್ಟ ಸಂಗತಿಗಳೂ ಕೂಡ ಲೆಕ್ಕಕ್ಕೆ ಬರುತ್ತವೆ.

ಶುದ್ಧ-ಅಶುದ್ಧ, ಪವಿತ್ರ-ಅಪವಿತ್ರ ಎಂಬುವುದೆಲ್ಲ ಮನುಷ್ಯನ ಮನಸ್ಸಿಗೆ ಸಂಬಂಧಿಸಿದಂತಹ ವಿಚಾರಗಳೇ ಹೊರತು ಬೇರೇನಲ್ಲ. ಆ ರೀತಿಯಾಗಿ ನೋಡಿದರೆ ಮಾನವ ಸದಾಕಾಲ ತನ್ನ ಎಂಜಲು, ಬೆವರು, ಮಲಮೂತ್ರ ಇತ್ಯಾದಿಗಳನ್ನು ಸದಾ ಹೊತ್ತುಕೊಂಡೇ ಇರುತ್ತಾನೆ. ಹಾಗೆಂದ ಮಾತ್ರಕ್ಕೆ ಆತ ಅಪವಿತ್ರನೇ? ದನಬೆಕ್ಕುಗಳು ತಮ್ಮ ಮರಿಯನ್ನು ಎಂಜಲಿನಿಂದಲೇ (ನೆಕ್ಕಿ) ಸ್ನಾನ ಮಾಡಿಸುತ್ತವೆ. ನಾವು ಸೇವಿಸುವ ಜೇನುತುಪ್ಪ ಜೇನುಹುಳುಗಳು ವಾಂತಿಪ್ರಕ್ರಿಯೆಯಿಂದ ಶೇಖರಿಸುವಂತಹವುಗಳು. ಉಡುವ ರೇಷ್ಮೆ ಬೇಯಿಸಿ ಸಾಯಿಸಲ್ಪಟ್ಟ ದುರ್ನಾತ ಹೊಡೆಯುವ ಸಾವಿರಾರು ಹುಳುಗಳ ಗೂಡಿನಿಂದ ಮಾಡುವಂತಾದ್ದು. ತಿಮಿಂಗಲ ಉಗುಳುವ ವಾಂತಿ ಬೆಲೆಬಾಳುವ "ಹನ್ನಂಬರ" (Ambergris) ಆಗಿ ಬಳಸಲ್ಪಡುತ್ತದೆ. ಇಲ್ಲಿ ಪವಿತ್ರ- ಅಪವಿತ್ರ ಯಾವುದಿದೆ? ಕೇವಲ ಭಾವಿಸುವ ದೃಷ್ಟಿಯಲ್ಲೇ ತಾನೇ? ಸ್ತ್ರೀಯರ ಋತುಚಕ್ರ ಅಶುದ್ಧ ಅಪವಿತ್ರವಾದರೆ ನಾವ್ಯಾರೂ ಅಥವ ಆ ಕೊಳಕ ದೇವಸ್ವಂ ಕಮಿಟಿಯವನೂ ಕೂಡ ಹುಟ್ಟುತ್ತಲೇ ಇರಲಿಲ್ಲ ತಾನೇ? ಅವಿವೇಕಿ ಮೂರ್ಖರು.

- ಶಶಿ ಪುತ್ತೂರು, ದಕ

ನಾನು ಯಾರ ಮಾತೂ ಕೇಳಲ್ಲ: ಹುಚ್ಚ ವೆಂಕಟ್



ವೆಂಕಟ್ ಅಲಿಯಾಸ್ ಹುಚ್ಚ ವೆಂಕಟ್ ಹಿಂದೆ ಸ್ಯಾಂಡಲ್‌ವುಡ್‌ನ ಅನೇಕ ನಿರ್ಮಾಪಕರು ಬಿದ್ದಿದ್ದಾರೆ. ಆದರೆ, ಈವರೆಗೂ ಒಬ್ಬರೂ ಸಿನಿಮಾ ಮಾಡುತ್ತಿಲ್ಲ ಅನ್ನುವುದು ವಿಶೇಷ.

ಬಿಗ್‌ಬಾಸ್ ಮನೆಯಿಂದ ವೆಂಕಟ್ ಆಚೆ ಬಂದಮೇಲೆ ಸಾಕಷ್ಟು ಡಿಮಾಂಡ್ ಕ್ರಿಯೇಟ್ ಆಗಿದೆ. ಚಾನೆಲ್‌ನವರು ಮಾತ್ರವಲ್ಲ, ಸಿನಿಮಾ ಮಂದಿಯೂ ಅವರ ಮನೆ ಬಾಗಿಲಲ್ಲಿ ಕಾಯುತ್ತಿದ್ದಾರೆ. ಅದಕ್ಕೆ ಕಾರಣ, ವೆಂಕಟ್ ಅವರನ್ನು ಉದ್ಧಾರ ಮಾಡುವುದಲ್ಲ, ಸಾಧ್ಯವಾದಷ್ಟು ಅವರಿಂದ ತಾವೂ ಪ್ರಚಾರ ಪಡೆಯುವುದು. ಈ ಕುರಿತು ವೆಂಕಟ್ ಹೇಳಿದ ಮಾತುಗಳು ಇಲ್ಲಿವೆ.

** ವೆಂಕಟ್ ಅವರೇ, ಸದ್ಯ ನಿಮ್ಮ ಆರೋಗ್ಯ ಹೇಗಿದೆ?*

ಯಾಕೆ ಎಲ್ಲರೂ ನನ್ನ ಆರೋಗ್ಯದ ಬಗ್ಗೆ ಕೇಳುತ್ತಿದ್ದೀರಿ? ನಾನು ಚೆನ್ನಾಗಿಯೇ ಇದ್ದೇನೆ. ನನ್ನ ತಾಯಿಯ ಆಶೀರ್ವಾದ ಇರುವ ತನಕ ಚೆನ್ನಾಗಿಯೇ ಇರುತ್ತೇನೆ. ನನ್ನ ಆರೋಗ್ಯದ ಬಗ್ಗೆ ಅಭಿಮಾನಿಗಳು ಭಯ ಪಡುವ ಅವಶ್ಯಕತೆ ಇಲ್ಲ.

** ನಿಮ್ಮ ಹಳೆಯ ಎರಡು ಸಿನಿಮಾಗಳು ಬಿಡುಗಡೆ ಆದವು. ಅದರ ಫಲಿತಾಂಶ ಹೇಗಿತ್ತು?*

ತುಂಬಾ ಚೆನ್ನಾಗಿ ದುಡ್ಡು ಮಾಡಿವೆ. 'ಸ್ವತಂತ್ರಪಾಳ್ಯ' ಮತ್ತು 'ಹುಚ್ಚ ವೆಂಕಟ್' ಎರಡೂ ಸಿನಿಮಾಗಳನ್ನು ನನ್ನ ಅಭಿಮಾನಿಗಳು ಮೆಚ್ಚಿಕೊಂಡಿದ್ದಾರೆ. ಹೀಗಾಗಿ ಹೌಸ್‌ಫುಲ್ ಪ್ರದರ್ಶನ ಕಂಡಿವೆ.

** ಬಾಕ್ಸ್ ಆಫೀಸ್‌ನಲ್ಲಿ ಎರಡೂ ಚಿತ್ರಗಳು ದುಡ್ಡು ಮಾಡಿಲ್ಲ ಅನ್ನುವ ಮಾತಿದೆ. ಮೊದಲೆರಡು ದಿನ ಬಿಟ್ಟು, ಆಮೇಲೆ ಜನರು ಬರಲಿಲ್ಲವಂತೆ?*

ಯಾರು ಹೇಳಿದರು ಹಾಗಂತ? ಒಂದು ವಾರ ಹೌಸ್‌ಫುಲ್ ಪ್ರದರ್ಶನ ಕಂಡಿವೆ. ಥಿಯೇಟರ್ ಸಮಸ್ಯೆಯಿಂದಾಗಿ ಸಿನಿಮಾವನ್ನು ಥಿಯೇಟರ್‌ನಿಂದ ತೆಗೆದರು. ಇನ್ನೂ ಹತ್ತು ಬಾರಿ ಈ ಚಿತ್ರಗಳನ್ನು ರಿಲೀಸ್ ಮಾಡಿದರೂ ಜನ ನೋಡುತ್ತಾರೆ. ನನ್ನನ್ನು ನನ್ನ ಅಭಿಮಾನಿಗಳು ಯಾವುದೇ ಕಾರಣಕ್ಕೂ ಕೈ ಬಿಡುವುದಿಲ್ಲ ಅನ್ನುವ ನಂಬಿಕೆ ನನಗಿದೆ.

** ಮತ್ತೊಂದು ಸಿನಿಮಾ ಮಾಡೋಕೆ ಹೊರಟಿದ್ದೀರಿ. ಅದು ಆಗತ್ತಾ?*

ಜನವರಿಯಲ್ಲಿ ಮುಹೂರ್ತ ಮಾಡುತ್ತೇನೆ ಎಂದು ಮಾತುಕೊಟ್ಟಿದ್ದೇನೆ. ಅಂದುಕೊಂಡಂತೆ ಮಾಡುತ್ತೇನೆ. 'ಪೋರ್ಕಿ ಹುಚ್ಚ ವೆಂಕಟ್' ಸಿನಿಮಾ ಖಂಡಿತಾ ಶೂಟಿಂಗ್ ಆಗುತ್ತದೆ. ರಿಲೀಸ್ ಮಾಡುತ್ತೇನೆ.

** 'ಪೋರ್ಕಿ ಹುಚ್ಚ ವೆಂಕಟ್' ಸಿನಿಮಾ ಮಾಡುವುದಕ್ಕೆ ನಿಮ್ಮ ಹತ್ತಿರ ದುಡ್ಡು ಇದೆಯಾ?*

ನನ್ನ ಹತ್ತಿರ ದುಡ್ಡಿಲ್ಲ, ಆದರೆ, ನಮ್ಮ ತಂದೆ ಕೋಟ್ಯಾಧೀಶ. ನನ್ನ ಒಳ್ಳೆಯ ಕೆಲಸಕ್ಕೆ ಅವರು ಯಾವಾಗಲೂ ಬೆನ್ನೆಲುಬಾಗಿ ನಿಂತಿದ್ದಾರೆ. ಈ ಕೆಲಸದಲ್ಲೂ ಅವರು ಸಪೋರ್ಟ್ ಮಾಡುತ್ತಾರೆ. ಅಲ್ಲದೇ ನನ್ನ ಸಿನಿಮಾಗಳು ಚೆನ್ನಾಗಿಯೇ ಕಲೆಕ್ಷನ್ ಮಾಡುತ್ತಿವೆ. ಹೀಗಾಗಿ ಸಿನಿಮಾ ಮಾಡ್ತೇನೆ.

** ಇಬ್ಬರು ನಿರ್ಮಾಪಕರು ನಿಮ್ಮ ಸಿನಿಮಾ ಮಾಡುತ್ತೇವೆಂದು ಬಂದು, ಆಮೇಲೆ ಅವರು ಸೈಲೆಂಟ್ ಆದರಲ್ಲ?*

ಅದು ನನಗೆ ಗೊತ್ತಿಲ್ಲ, ನನ್ನ ಹತ್ತಿರ ಬಂದು ಕತೆ ಹೇಳಿದರು. ನಾನೂ ಸಿನಿಮಾ ಮಾಡುತ್ತೇನೆ ಅಂತ ಮಾತುಕೊಟ್ಟೆ. ಆಮೇಲೆ ಏನಾಯಿತೋ ಗೊತ್ತಿಲ್ಲ, ಎಸ್.ನಾರಾಯಣ್ ನಿರ್ದೇಶನದ ಸಿನಿಮಾ ಆಗುತ್ತದೆ. ಕತೆ ತುಂಬಾನೇ ಚೆನ್ನಾಗಿದೆ.

** ಬಿಗ್‌ಬಾಸ್ ಮನೆಗೆ ಹೋಗೋಕೆ ದಿನಕ್ಕೆ ಐದು ಲಕ್ಷ ಕೇಳಿದ್ದು ನಿಜನಾ?*

ದುಡ್ಡಿನ ಬಗ್ಗೆ ನಾನು ಏನೂ ಹೇಳುವುದಿಲ್ಲ, ನಾನು ಸ್ಟಾರ್ ನಟ. ಅವರಿಗೆ ಎಷ್ಟು ಸಂಭಾವನೆ ಕೊಡುತ್ತಾರೋ ನನಗೂ ಅಷ್ಟೇ ಕೊಟ್ಟಿದ್ದಾರೆ. ಸಂಭಾವನೆ ಬಗ್ಗೆ ಏನೂ ಕೇಳಬೇಡಿ.

** ನೀವು ಹಾಡುತ್ತಿರುವ ಹಾಡು ಸಂಗೀತ ಕ್ಷೇತ್ರಕ್ಕೆ ಮಾಡಿದ ಅಪಮಾನ ಎನ್ನುವ ಮಾತಿದೆ?*

ಯಾರು ಏನೇ ಹೇಳಿದರೂ ನಾನು ಹಾಡುವುದನ್ನು ನಿಲ್ಲಿಸುವುದಿಲ್ಲ, ಅಪಮಾನ ಅನಿಸಿದರೆ ಕ್ಷಮೆ ಕೇಳುತ್ತೇನೆ. ಆದರೆ ನಾನು ಹಾಡಿದ ಹಾಡು ಹಿಟ್ ಆಗಿದೆ. ಹೀಗಾಗಿ ಇನ್ನೂ ಎರಡು ಚಿತ್ರಗಳಿಗೆ ಹಾಡುತ್ತಿದ್ದೇನೆ.

** ಐಟಂ ಸಾಂಗ್ ಇರುವ ಸಿನಿಮಾದಲ್ಲಿ ನಟಿಸುವುದಿಲ್ಲ ಎಂದು ಹೇಳಿದ್ದವರು 'ಪರಪಂಚ' ಸಿನಿಮಾದಲ್ಲಿ ನಟಿಸಿದ್ದು ಯಾಕೆ?*

ಆಗಲೇ ನಾನು ಯೋಗರಾಜ್ ಭಟ್ ಅವರಿಗೆ ಹೇಳಿದ್ದೆ, ಅದು ಐಟಂ ಸಾಂಗ್ ಅಲ್ಲ ಅಂದಮೇಲೆ ನಟಿಸಿದ್ದೇನೆ. ನನ್ನ ಸಿನಿಮಾದಲ್ಲೂ ಅಂತಹ ಹಾಡುಗಳು ಇರುವುದಿಲ್ಲ, ನಾನೂ ಅಂತಹ ಹಾಡು ಇರುವ ಚಿತ್ರಗಳಲ್ಲಿ ನಟಿಸುವುದಿಲ್ಲ.

** ಎಸ್.ನಾರಾಯಣ್ ನಿಮಗಾಗಿ ಸಿನಿಮಾ ಮಾಡುವುದು ನಿಜವೆ?*

ಆಗಲೇ ಕತೆ ಹೇಳಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷರಾದ ವಿಜಯ್ ಕುಮಾರ್ ಅವರು ನಿರ್ಮಾಣ ಮಾಡುತ್ತಿದ್ದಾರೆ. ಮುಂದಿನ ತಿಂಗಳು ಈ ಸಿನಿಮಾ ಸೆಟ್ಟೇರಲಿದೆ. ಅದಕ್ಕಿಂತ ಮುಂಚೆ ನನ್ನ ಸಿನಿಮಾ ಬರಲಿದೆ.

** ನಿಮಗೆ ಸಿನಿಮಾ ಮಾಡುತ್ತೇನೆಂದು ಪ್ರಚಾರ ಪಡೆಯುವವರು ಬಗ್ಗೆ ಏನು ಹೇಳುತ್ತೀರಿ?*

ನಾನು ಯಾರ ಬಗ್ಗೆಯೂ ತಲೆ ಕೆಡಿಸಿಕೊಳ್ಳುವುದಿಲ್ಲ. ಅಲ್ಲದೇ ನಾನು ಯಾರ ಮಾತನ್ನೂ ಕೇಳುವುದಿಲ್ಲ, ನಾನು ಏನು ಅಂದುಕೊಳ್ಳುತ್ತೇನೋ ಅದೇ ಫೈನಲ್. ನಾನು ಹೇಳಿದಂತೆ ಇತರರು ಕೇಳ್‌ಬೇಕು. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 03-02-2016 RNI No. KARKAN2005/146



ವೀಕೆಂಡ್‌ಗೆ ಅಂಬರೀಷ

ಕೊನೆಗೂ ಅಂಬರೀಷ ಜೀ ಕನ್ನಡ ವಾಹಿನಿಯ ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮದ ಸಾಧಕರ ಸೀಟ್‌ನಲ್ಲಿ ಕೂತಿದ್ದಾರೆ. ಇವರನ್ನು ಈ ಕಾರ್ಯಕ್ರಮಕ್ಕೆ ಕರೆತರಲು ಕಳೆದ ಸೀಸನ್‌ನಲ್ಲೇ ಕಸರತ್ತು ನಡೆಸಿತ್ತು ಚಾನೆಲ್. ಆದರೆ ಅಂಬರೀಷ ಒಪ್ಪಿರಲಿಲ್ಲ. ಈ ಸೀಸನ್‌ಗೆ ಕರೆತರುವಲ್ಲಿ ಜೀ ಕನ್ನಡ ವಾಹಿನಿಯ ಬ್ಯುಜಿನೆಸ್ ಹೆಡ್ ರಾಘವೇಂದ್ರ ಹುಣಸೂರು ಸಫಲರಾಗಿದ್ದಾರೆ. ಇದೇ ಶನಿವಾರ ಮತ್ತು ಭಾನುವಾರ ಅಂಬರೀಷ ಅವರ ಎಪಿಸೋಡ್ ಪ್ರಸಾರವಾಗಲಿದೆ.

ವಾಹಿನಿಯು ರಿಲೀಸ್ ಮಾಡಿರುವ ಪ್ರೋಮೋದಲ್ಲಿ ಮಾತಾಡಿರುವ ಅಂಬರೀಷ್, ತಾವು ಈ ಕಾರ್ಯಕ್ರಮಕ್ಕೆ ಕಳೆದ ಸೀಸನ್‌ನಲ್ಲಿ ಯಾಕೆ ಬರಲಿಲ್ಲ ಎಂಬುದನ್ನು ಹೇಳಿಕೊಂಡಿದ್ದಾರೆ. ಶನಿವಾರ ಮತ್ತು ಭಾನುವಾರ ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮವನ್ನು ಜನ ನೋಡಿದರೆ, ಥಿಯೇಟರ್‌ನಲ್ಲಿದ್ದ ಸಿನಿಮಾಗಳ ಗತಿ ಏನು? ಆದಕ್ಕಾಗಿ ನಾನು ಬರಲಿಲ್ಲ ಎಂದು ಕಾರ್ಯಕ್ರಮದ ಜನ ಪ್ರಿಯತೆಯನ್ನು ಕೊಂಡಾಡಿದ್ದಾರೆ.

ನಿಟ್ಟುಸಿರಿಟ್ಟ ರತ್ನಜ

ಎರಡು ತಿಂಗಳಿಂದ ಥಿಯೇಟರ್‌ಗಾಗಿ ಕಾಯುತ್ತಿದ್ದ ನಿರ್ದೇಶಕ ರತ್ನಜ ಕೊನೆಗೂ ನಿಟ್ಟುಸಿರಿಟ್ಟಿದ್ದಾರೆ. ತಮ್ಮ ನಿರೀಕ್ಷಿತ 'ಪ್ರೀತಿಯಲ್ಲಿ ಸಹಜ' ಚಿತ್ರಕ್ಕೆ ಥಿಯೇಟರ್ ಸಿಕ್ಕಿದ್ದು ಫೆಬ್ರವರಿ 12ಕ್ಕೆ ತೆರೆಗೆ ತರಲು ಪ್ಲಾನ್ ಮಾಡಿದ್ದಾರೆ. ಹಲವು ಕಾರಣಗಳಿಂದಾಗಿ ಈ ಚಿತ್ರವು ಕುತೂಹಲ ಮೂಡಿಸಿದೆ. ಇದೇ ಮೊದಲ ಬಾರಿಗೆ ದೇವರಾಜ್ ಮತ್ತು ಸುಹಾಸಿನಿ ಪತಿಪತ್ನಿಯರಾಗಿ ಕಾಣಿಸಿಕೊಂಡಿದ್ದಾರೆ. ಅಲ್ಲದೇ ಈ ಚಿತ್ರದ ಮೂಲಕ ಹೊಸ ನಾಯಕ ಮತ್ತು ನಾಯಕಿ ಸಿನಿಮಾರಂಗಕ್ಕೆ ಪ್ರವೇಶ ಮಾಡುತ್ತಿದ್ದಾರೆ. ಮೂರು ರಾಜ್ಯಗಳು ಸಂಧಿಸುವ ಗಡಿಯಲ್ಲಿ ಈ ಸಿನಿಮಾವನ್ನು ಶೂಟ್ ಮಾಡಿದ್ದಾರೆ ನಿರ್ದೇಶಕರು. ಹೀಗಾಗಿ 'ಪ್ರೀತಿಯಲ್ಲಿ ಸಹಜ' ಚಿತ್ರವು ಈ ವರ್ಷದ ನಿರೀಕ್ಷಿತ ಸಿನಿಮಾಗಳ ಪಟ್ಟಿಯಲ್ಲಿದೆ.



ತಮ್ಮ ಚೊಚ್ಚಲು ಸಿನಿಮಾಗೆ ನಾಲ್ಕು ಫಿಲ್ಮ್‌ಫೇರ್ ಪ್ರಶಸ್ತಿ ಬಾಚಿ ಅಚ್ಚರಿ ಮೂಡಿಸಿದ್ದರು ರತ್ನಜ. ಆನಂತರ ಮತ್ತೆರಡು ಚಿತ್ರಗಳಿಗೆ ನಿರ್ದೇಶನ ಮಾಡಿ ವ್ಯವಸಾಯದತ್ತ ಮುಖ ಮಾಡಿದ್ದರು. ಎರಡ್ಮೂರು ವರ್ಷಗಳ ನಂತರ ಮತ್ತೆ ಸಿನಿಮಾರಂಗದಲ್ಲಿ ಕಾಣಿಸಿಕೊಂಡಿದ್ದಾರೆ.

ಕೋಚ್ ಪಾತ್ರದಲ್ಲಿ ಪ್ರಕಾಶ್ ರೈ

ಈಗಾಗಲೇ ಹಲವು ಪಾತ್ರಗಳನ್ನು ನಿರ್ವಹಿಸಿರುವ ಪ್ರಕಾಶ್ ರೈ, ಇದೇ ಮೊದಲ ಬಾರಿಗೆ ಕೋಚ್ ಆಗಿ ಕಾಣಿಸಿಕೊಂಡಿದ್ದಾರೆ. ಪ್ರೀತಂ ಗುಬ್ಬಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ನಾನು ಮತ್ತು ವರಲಕ್ಷ್ಮೀ' ಚಿತ್ರದಲ್ಲಿ ಇವರು ಬೈಕ್ ರೇಸ್‌ನ ಕೋಚ್ ಪಾತ್ರ ಮಾಡುತ್ತಿದ್ದಾರೆ.



ಇದೊಂದು ಪ್ರೇಮಕತೆ ಆಧರಿಸಿದ ಸಿನಿಮಾ. ಆ ಲವ್‌ಸ್ಟೋರಿಯನ್ನು ವಿಭಿನ್ನವಾಗಿ ಸೆರೆ ಹಿಡಿಯುತ್ತಿದ್ದಾರಂತೆ ನಿರ್ದೇಶಕರು. ಹೀಗಾಗಿ ಬೈಕ್ ರೇಸ್ ಹಿನ್ನೆಲೆಯನ್ನು ನಾಯಕನಿಗೆ ಕೊಟ್ಟಿದ್ದಾರೆ ನಿರ್ದೇಶಕರು. ನಾಯಕನಿಗೆ ಕೋಚ್ ಮಾಡುವ ಪಾತ್ರವು ರೈ ಪಾಲಾಗಿದೆ. ಈಗ ಬೆಂಗಳೂರಿನ ಸುತ್ತ ಮುತ್ತ ಶೂಟಿಂಗ್ ನಡೆದಿದೆ.

"ಪ್ರಕಾಶ್ ರೈ ಅವರು ಪಾತ್ರ ಕೇಳಿದಾಕ್ಷಣ ಒಪ್ಪಿಕೊಂಡರು. ಹೀಗಾಗಿ ನನಗೂ ಖುಷಿ ಆಯಿತು. ನಾನು ಏನು ಅಂದುಕೊಂಡಿದ್ದನೋ, ಅದಕ್ಕಿಂತ ವಿಭಿನ್ನವಾಗಿ ಮೂಡಿಬಂದಿದೆ ಪ್ರಕಾಶ್ ಸಾರ್ ಪಾತ್ರ" ಅಂತಾರೆ ನಿರ್ದೇಶಕರು. ಪ್ರಕಾಶ್ ರೈ ಅವರು ತಮ್ಮ ನಿರ್ದೇಶನದ ಸಿನಿಮಾ ಮಾಡುತ್ತಲೇ ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಅಲ್ಲದೇ ಬಹುತೇಕ ಬೆಂಗಳೂರಿನಲ್ಲೇ ಈಗ ಉಳಿದುಕೊಂಡಿದ್ದಾರೆ.



ಸ್ಮೈಲ್ ಪ್ಲೀಸ್ ಅಂತಿದ್ದಾರೆ ಗುರು

'ಫಸ್ಟ್ ರ್‍ಯಾಂಕ್ ರಾಜು' ಸಿನಿಮಾದ ಮೂಲಕ ಮನೆಮಾತಾಗಿರುವ ಗುರುನಂದನ್ ಈಗ ಮತ್ತೊಂದು ಚಿತ್ರಕ್ಕೆ ಸಹಿ ಮಾಡಿದ್ದಾರೆ. ಈ ಚಿತ್ರವನ್ನು ರಘು ಸಮರ್ಥ ನಿರ್ದೇಶನ ಮಾಡುತ್ತಿದ್ದಾರೆ.

ಈ ಚಿತ್ರಕ್ಕೆ 'ಸ್ಮೈಲ್ ಪ್ಲೀಸ್' ಎಂದು ಹೆಸರಿಡಲಾಗಿದ್ದು ಅನಂತ್ ನಾಗ್, ರಂಗಾಯಣ ರಘು ಸೇರಿದಂತೆ ಹಲವು ಹೆಸರಾಂತ ನಟರು ತಾರಾಗಣದಲ್ಲಿದ್ದಾರೆ. ಈ ಮಧ್ಯೆ ಗುರುಗೆ ಮತ್ತೊಂದು ಸಂಕಟ ಎದುರಾಗಿದೆ. ಅದೇನೆಂದರೆ ಇದೇ ವೇಳೆಯಲ್ಲೇ 'ಫಸ್ಟ್ ರ್‍ಯಾಂಕ್ ರಾಜು' ಸಿನಿಮಾದ ನಿರ್ಮಾಪಕರು ಮತ್ತೊಂದು ಸಿನಿಮಾ ಮಾಡುವುದಾಗಿ ಹೇಳಿದ್ದಾರೆ. ಹೀಗಾಗಿ ಗುರುನಂದನ್ ಅವರ ಕಾಲ್‌ಶೀಟ್ ಮೊದಲು ಯಾರಿಗೆ ಸಿಗುತ್ತದೆ ಅನ್ನುವ ಕುತೂಹಲ ಎದುರಾಗಿದೆ. 'ಸ್ಮೈಲ್ ಪ್ಲೀಸ್' ಸಿನಿಮಾ ಮಾರ್ಚ್‌ನಲ್ಲಿ ಸೆಟ್ಟೇರಿದರೆ, ಮತ್ತೊಂದು ಚಿತ್ರವನ್ನೂ ಅದೇ ತಿಂಗಳಲ್ಲೇ ಮಾಡುವುದಾಗಿ ನಿರ್ಮಾಪಕರು ಹೇಳಿದ್ದಾರೆ. ಹೀಗಾಗಿ ಯಾವ ಸಿನಿಮಾ ಮೊದಲು ಬರುತ್ತದೆ ಎಂದು ಕಾದುನೋಡಬೇಕಿದೆ. ಏನೇ ಆಗಲಿ, ಮೊದಲ ಸಿನಿಮಾದಲ್ಲಿ ಭಾರೀ ಸೋಲು ಅನುಭವಿಸಿದ್ದ ಗುರುಗೆ 'ಫಸ್ಟ್‌ರ್‍ಯಾಂಕ್' ಸಿನಿಮಾ ಕೈ ಹಿಡಿದಿದೆ.





ಪಟಾಕಿ ಹುಡುಗಿ ಮತ್ತೆ ಬಂದ್ಳು

ಶಿವರಾಜ್‌ಕುಮಾರ್ ನಟನೆಯ 'ವಜ್ರಕಾಯ' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಪದಾರ್ಪಣೆ ಮಾಡಿದ್ದ ನಭಾ ನಟೇಶ್, ಆನಂತರ ಸಿನಿಮಾರಂಗದಲ್ಲಿ ಕಾಣಿಸಿಕೊಳ್ಳಲಿಲ್ಲ. ಈಗ ವಿಭಿನ್ನ ಪಾತ್ರದ ಮೂಲಕ ಮತ್ತೆ ಸುದ್ದಿಯಾಗಿದ್ದಾರೆ. ಸದ್ಯ ಅವರು 'ಲೀ' ಅನ್ನುವ ಚಿತ್ರದಲ್ಲಿ ನಟಿಸುತ್ತಿದ್ದು ಶ್ರೀನಂದನ್ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಮೊದಲನೇ ಸಿನಿಮಾದಲ್ಲಿ ಪಟಾಕಿ ಪಾರ್ವತಿಯಾಗಿ ಮಿಂಚಿದ್ದ ನಭಾ ಈ ಸಿನಿಮಾದಲ್ಲಿ ಕಾಲೇಜ್‌ಗೆ ಹೋಗುವ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಸಾಕಷ್ಟು ತಯಾರಿಯನ್ನೂ ಮಾಡಿಕೊಂಡಿದ್ದಾರಂತೆ. ಜನವರಿ 24ರಂದು ಮುಹೂರ್ತ ಆಗಲಿರುವ ಚಿತ್ರಕ್ಕೆ ಸುಮಂತ್ ಶೈಲೇಂದ್ರ ನಾಯಕ.

"'ವಜ್ರಕಾಯ' ಸಿನಿಮಾದ ನಂತರ ಹಲವು ಚಿತ್ರಗಳಿಗೆ ಆಫರ್ ಬಂತು. ಬಟ್, ನನಗೆ ಪಾತ್ರ ಇಷ್ಟವಾಗಲಿಲ್ಲ, ಹೀಗಾಗಿ ಒಪ್ಪಿಕೊಳ್ಳಲಿಲ್ಲ. 'ಲೀ' ಚಿತ್ರದಲ್ಲಿ ನನ್ನದು ಹಳ್ಳಿ ಹುಡುಗಿಯ ಪಾತ್ರವಾದರೂ ಅದು ಚೆನ್ನಾಗಿದೆ. ಅದಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಳ್ಳುತ್ತಿದ್ದೇನೆ" ಅಂತಾರೆ ನಭಾ.

ನಕ್ಸಲ್ ಪಾತ್ರದಲ್ಲಿ ಹರಿಪ್ರಿಯಾ

ಈ ವಾರ ಬಿಡುಗಡೆ ಆಗುತ್ತಿರುವ 'ರಿಕ್ಕಿ' ಸಿನಿಮಾದಲ್ಲಿ ಹರಿಪ್ರಿಯಾ ನಕ್ಸಲ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಇದು ರಿಷಬ್ ಶೆಟ್ಟಿ ನಿರ್ದೇಶನದಲ್ಲಿ ಮೂಡಿಬಂದಿರುವ ಸಿನಿಮಾ. ರಕ್ಷಿತ್ ಶೆಟ್ಟಿ ಚಿತ್ರದ ನಾಯಕ. ಹರಿಪ್ರಿಯಾ ಈ ಚಿತ್ರದಲ್ಲಿ ಎರಡು ರೀತಿಯ ಪಾತ್ರವನ್ನು ನಿರ್ವಹಿಸಿದ್ದಾರೆ. ಅದರಲ್ಲಿ ನಕ್ಸಲ್ ನಾಯಕಿಯ ಪಾತ್ರವೂ ಒಂದು. "ಇದೇ ಮೊದಲ ಬಾರಿಗೆ ಈ ರೀತಿಯ ಪಾತ್ರ ಮಾಡಿದ್ದೇನೆ. ಆ ಪಾತ್ರದ ಬಗ್ಗೆ ನಿರ್ದೇಶಕರು ಹೇಳಿದಾಗ ನಿಜಕ್ಕೂ ಭಯ ಆಯಿತು. ನನ್ನಿಂದ ಈ ಪಾತ್ರವನ್ನು ಮಾಡೋಕೆ ಸಾಧ್ಯವಾ ಅಂತ ಅನಿಸಿತು. ಆನಂತರ ನಕ್ಸಲ್ ಹೋರಾಟದ ಬಗ್ಗೆ ಅಲ್ಪಸ್ವಲ್ಪ ತಿಳಿದುಕೊಂಡೆ. ಆಗ ಪಾತ್ರ ಮಾಡಲು ಸಹಾಯ ಆಯಿತು" ಅಂದಿದ್ದಾರೆ ಹರಿಪ್ರಿಯಾ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com